ಸಂಗೀತ ರತ್ನ
ಮೈಸೂರು ಟಿ. ಚೌಡಯ್ಯ



ಶ್ರೀ ರಾಮಸೇವಾ ಮಂಡಲಿ

ಚಾಮರಾಜಪೇಟೆ, ಬೆಂಗಳೂರು – 560 018

ಶ್ರೀ ರಾಮಸೇವಾ ಮಂಡಲಿ
ಚಾಮರಾಜಪೇಟೆ, ಬೆಂಗಳೂರು–560 018

Sree Ramaseva Mandali
Chamarajapet, Bangalore–560 018

ಸಂಗೀತರತ್ನ
ಮೈಸೂರು ಟಿ. ಚೌಡಯ್ಯ

ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಶ್ರೀ ರಾಮಸೇವಾ ಮಂಡಲಿ ಟ್ರಸ್ಟ್
ಶ್ರೀ ರಾಮಸೇವಾ ಮಂಡಲಿ
ಚಾಮರಾಜಪೇಟೆ, ಬೆಂಗಳೂರು–560 018
ಫೋನ್ : 604031

Sangeetharathna Mysore T. Chowdiah by Prof. S. K. Ramachandra Rao & Published by Sree Ramaseva Mandali Trust, C/o Sree Rama Seva Mandali, Chamarajapet, Bangalore–560 018.

First Edition–1994 Sree Ramaseva Mandali Trust.

Printed by
The Bangalore Press
Mysore Road, Bangalore–560 018

ಪ್ರಕಾಶಕರ ಮುನ್ನುಡಿ

ಬೆಂಗಳೂರಿನಲ್ಲಿ ೧೯೩೯ರಲ್ಲಿ ಶ್ರೀ ಎಸ್. ವಿ. ನಾರಾಯಣ ಸ್ವಾಮಿರಾವ್‌ರಿಂದ ವ್ಯವಸ್ಥೆಗೊಂಡ ಶ್ರೀ ರಾಮಸೇವಾ ಮಂಡಲಿಯು ನಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ಉದ್ದೇಶವನ್ನು ಹೊಂದಿದೆ. ಪ್ರತಿವರ್ಷವೂ ಶ್ರೀರಾಮನವಮಿ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತ ನಮ್ಮ ಪ್ರಾಚೀನ ಗ್ರಂಥಗಳಾದ ಉಪನಿಷತ್ತುಗಳು, ಗೀತೆ, ರಾಮಾಯಣ, ಮಹಾಭಾರತ, ಭಾಗವತ ಮೊದಲಾದುವುಗಳಲ್ಲಿ ಬೋಧಿಸಿರುವ ಮಾನವಮೌಲ್ಯಗಳ ಪ್ರಸಾರಕ್ಕೆ ಕಾರಣವಾಗಿದೆ. ಇದರೊಂದಿಗೆ ಶಾಸ್ತ್ರೀಯ ಸಂಗೀತ, ಭರತನಾಟ್ಯ ಮುಂತಾದ ಕಲಾಪ್ರಕಾರಗಳಲ್ಲಿರುವ ಆಧ್ಯಾತ್ಮಿಕ ಅಂಶಗಳನ್ನೂ ಎತ್ತಿಹಿಡಿಯುತ್ತಿದೆ.

ಈ ಉದ್ದೇಶಸಾಧನೆಗಾಗಿ ಮಂಡಲಿಯು ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವಚನಗಳನ್ನೂ, ಉಪನ್ಯಾಸಗಳನ್ನೂ, ಶಾಸ್ತ್ರೀಯ ಸಂಗೀತ ಸಭೆಗಳನ್ನೂ ಏರ್ಪಡಿಸುತ್ತ ಬಂದಿದೆ. ಹಿರಿಯ ವಿದ್ವಾಂಸರ ಪಾತ್ರವನ್ನು ಸಾಧಿಸಿರುವುದಲ್ಲದೆ ಕಿರಿಯ, ವರ್ಧಿಷ್ಣು ಯುವಜನರ ಪ್ರತಿಭೆಯ ಪ್ರದರ್ಶನಕ್ಕೂ ಅವಕಾಶ ಒದಗಿಸಿದೆ.

ಮಂಡಲಿಯು ತನ್ನ ಐದೂವರೆ ದಶಕಗಳ ಜೀವಿತದಲ್ಲಿ ಸಾಧಿಸಿರುವುದು ನಮಗೆ ಹೆಮ್ಮೆಯನ್ನು ತಂದಿದೆ. ತನ್ನ ಐವತ್ತಾರನೆಯ ಸಂವತ್ಸರಕ್ಕೆ ಅಡಿಯಿಡುತ್ತಿರುವ ಈ ಸಂದರ್ಭದಲ್ಲಿ ಶ್ರೀರಾಮನವಮಿ ಉತ್ಸವದೊಂದಿಗೆ ಕೀರ್ತಿಶೇಷ ಸಂಗೀತರತ್ನ ಮೈಸೂರು ಟಿ. ಚೌಡಯ್ಯನವರ ಜನ್ಮಶತಾಬ್ದಿಯನ್ನೂ ಆಚರಿಸುತ್ತಿದೆ. ಶ್ರೀ ಚೌಡಯ್ಯನವರು ಮಂಡಲಿಯೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದು ಅದರ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ತುಂಬ ನೆರವಾಗುತ್ತಿದ್ದರು. ಆದ್ದರಿಂದ ನಾಡಿನ ಹಿರಿಯರಾಗಿದ್ದ ಈ ಮಹನೀಯರ ನೆನಪನ್ನು ಉಳಿಸಲು ಮಂಡಲಿ ಸಂತೋಷದಿಂದ ಮುಂದೆಬಂದಿದೆ.

ಈ ಸಂದರ್ಭದಲ್ಲಿ ಸಂಗೀತರತ್ನ ಟಿ. ಚೌಡಯ್ಯನವರ ಜೀವನ, ಸಾಧನೆಗಳನ್ನು ಕುರಿತಂತೆ ಪುಸ್ತಕವೊಂದನ್ನು ಮಂಡಲಿ ಪ್ರಕಟಿಸುತ್ತಿದೆ. ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾಯರು ಈ ಪುಸ್ತಕವನ್ನು ರಚಿಸಲು ಒಪ್ಪಿಕೊಂಡದ್ದು ನಮಗೆ ತುಂಬ ಸಂತೋಷವಾಗಿದೆ. ಬಿಡುವಿಲ್ಲದಿದ್ದರೂ ಅಲ್ಪ ಕಾಲದಲ್ಲಿಯೇ ಅವರು ಶ್ರಮವಹಿಸಿ ಈ ಪುಸ್ತಕವನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ಮಂಡಲಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಈ ಪ್ರಕಟಣೆಗೆ ಆರ್ಥಿಕ ನೆರವನ್ನು ಉದಾರವಾಗಿ ಒದಗಿಸಿ ಮಂಡಲಿಯ ಉಪಾಧ್ಯಕ್ಷರಾದ ಶ್ರೀ ಜಿ. ಕೆ. ಶ್ರೀನಿವಾಸಯ್ಯನವರು ನೆರವಾಗಿದ್ದಾರೆ. ಅವರಿಗೆ ಮಂಡಲಿಯು ಕೃತಜ್ಞವಾಗಿದೆ.

ಈ ಪುಸ್ತಕವನ್ನು ಅಂದವಾಗಿಯೂ, ಅಚ್ಚುಕಟ್ಟಾಗಿಯೂ ಬೆಂಗಳೂರು ಮುದ್ರಣಾಲಯವು ಹೊರತಂದು ಉಪಕರಿಸಿದೆ.

ಎಲ್ಲ ಆಸಕ್ತರಿಗೂ, ರಸಿಕರಿಗೂ ಈ ಪುಸ್ತಕವು ಸ್ವಾಗತಾರ್ಹ ವಾದೀತೆಂದು ಆಶಿಸುತ್ತೇವೆ.

ಎನ್. ಲಕ್ಷ್ಮಣರಾವ್ (IAS, Retd.)

ಅಧ್ಯಕ್ಷರು

ಶ್ರೀ ರಾಮಸೇವಾ ಮಂಡಲಿ

ಮೊದಲ ಮಾತು

ಚೌಡಯ್ಯನವರ ಪರಿಚಯದ ಪುಣ್ಯ ನನಗಿದ್ದಿತಾದರೂ, ನಿಕಟವೆನಿಸುವ ಸಂಪರ್ಕವೇನಲ್ಲ ಅದು. ಅವರ ಸಂಗೀತವನ್ನು ನೂರಾರು ಬಾರಿ ಸವಿದಿರುವೆನಾದರೂ ಅವರೊಂದಿಗೆ ಕೆಲ ಕಾಲ ಕಳೆದು ಮಾತನಾಡಿದ ಸಂದರ್ಭಗಳು ಆರೇಳು ಬಾರಿ ಮಾತ್ರ. ಆದರೂ ಹಿರಿಯರಿಂದ, ಗುರುಗಳಿಂದ, ಮಿತ್ರರಿಂದ ಅವರ ವಿಚಾರ ಕೇಳುತ್ತಲೇ ಬಂದಿದ್ದೆನಾಗಿ ಪರಿಚಯದ ಆಳ-ಅಗಲಗಳು ಹೆಚ್ಚಿದುವು ಎನ್ನಬಹುದೇನೋ.

ಮೇಲಾಗಿ, ತಮಿಳುನಾಡಿನ ದುರ್ಭೇದ್ಯವೆನಿಸಿದ್ದ ಸಂಗೀತ ಕೋಟೆಗೆ ಲಗ್ಗೆಯಿಟ್ಟು ಜಯಭೇರಿ ಹೊಡೆದು ಬಂದ ಧೀರರೆಂದು ನಮಗೆಲ್ಲ ಹೆಮ್ಮೆ. ಹಿಂದೆಂದೂ ಹಾಗೆ ಮಾಡಿದ ಕೆಚ್ಚು ನಮಗೆ ಯಾರಲ್ಲಿಯೂ ಕಂಡಿರಲಿಲ್ಲ. ಮುಂದೆಯಾಗಲಿ ಹಾಗೆ ಮಾಡಿದವರು ಯಾರು? ಚೌಡಯ್ಯನವರ ಸಂಗೀತ ಹಾಗಿರಲಿ; ಅವರ ಸಾಹಸ ತರುಣರಾಗಿದ್ದ ನಮಗೆಲ್ಲ ಮೆಚ್ಚುಗೆಯಾಯಿತು. ಅವರ ಸಂಗೀತದ ಮಟ್ಟ ಅಷ್ಟು ಮೇಲಿರದಿದ್ದರೆ ಅಲ್ಲಿನವರು ಇವರಿಗೆ ಒಲಿಯುತ್ತಿದ್ದರೆ? ಮದ್ರಾಸಿನ ಮ್ಯೂಸಿಕ್ ಅಕ್ಯಾಡಮಿ ಇವರನ್ನು 'ಸಂಗೀತಕಲಾನಿಧಿ'ಯೆಂದು ಮೂವತ್ತೇಳು ವರ್ಷಗಳ ಹಿಂದೆಯೇ ಗೌರವಿಸುತ್ತಿದ್ದಿತೆ? ಅಲ್ಲಿಯ ಹಿರಿಯ ಗಾಯಕರೆಲ್ಲ ಇವರ ಪಕ್ಕವಾದ್ಯಕ್ಕೆ ಬಾಯಿಬಿಡುತ್ತಿದ್ದರೆ? ಆದರೆ ಅವರ ಸಂಗೀತದ ಹಿರಿಮೆಯನ್ನು ಮೀರಿ ಅವರ ಸಾಹಸ ನಮ್ಮ ಗಮನವನ್ನು ಹಿಡಿದಿದ್ದ ವಿಚಾರ.

ಸಾಹಸವೆಂದಮಾತ್ರಕ್ಕೆ ಬರಿಯ ಭಂಡಧೈರ್ಯ ಎಂದರ್ಥವಲ್ಲ. ಅವರಲ್ಲಿ ಧೈರ್ಯಕ್ಕೇನೂ ಕೊರತೆಯಿರಲಿಲ್ಲ. ಆದರೆ ಅವರ ಔದಾರ್ಯ, ಗುಣಗ್ರಹಣ, ಹಾಸ್ಯ ಪ್ರವೃತ್ತಿ, ಸರಸ ಮನೋವೃತ್ತಿ ಇವು ಯಾರನ್ನಾದರೂ ಮರುಳು ಮಾಡುತ್ತಿದ್ದುವು. ಒರಟುತನ ಇರಲಿಲ್ಲವೆಂದಲ್ಲ; ಆದರೆ ಅದು ಹೊರಗಣ ವಿವರ ಅಷ್ಟೆ. ಮನಸ್ಸು ಕಲ್ಮಷವಿಲ್ಲದ್ದು, ಹೃದಯ ಮೆದು. ಬಾಯಿಮಾತು ಬಿರುಸು; ಆದರೆ ಭಾವನೆಗಳು ಕುಸುಮ ಕೋಮಲ. ನಂಬಿದವರನ್ನು ಎಂದೂ ಕೈಬಿಟ್ಟವರಲ್ಲ. ಹಾಡುವವರು ಹಿಂಜರಿದರೂ ಅವರನ್ನು ಹುರಿದುಂಬಿಸಿ, ವಿನಿಕೆಗೆ ಕಳೆ ಕೊಡುವರು, ಕಾವು ತರುವರು.

ಯಾರನ್ನಾಗಲಿ ಪೇಚಿಗೆ ಸಿಕ್ಕಿಸುವ ಚಾಪಲ್ಯ ಅವರಲ್ಲಿ ಎಷ್ಟು ಮಾತ್ರವೂ ಇರಲಿಲ್ಲ.

ಬದುಕಿದಷ್ಟು ಕಾಲವೂ ಸಂಗೀತಕ್ಕೇ ತಮ್ಮ ಮೈಯನ್ನೂ, ಮನಸ್ಸನ್ನೂ, ಉಸಿರನ್ನೂ ವಿನಿಯೋಗಿಸಿದರು. ತಾವು ಕಾಣಿಸಿಕೊಂಡ ನಾಡಿಗೆ ಕೀರ್ತಿಯನ್ನು ತಂದುಕೊಟ್ಟರು; ತಮ್ಮ ಗುರುಗಳ ಹೆಸರನ್ನು ಮುಂದೆ ತಂದರು; ಕನ್ನಡಿಗರ ಮಾನವನ್ನು ಉಳಿಸಿದರು. ನಮ್ಮ ಕಡೆಯಿಂದ ಏನು ಸನ್ಮಾನವನ್ನು ಪಡೆದರೋ ಬಿಟ್ಟರೋ, ತಮ್ಮ ವೃತ್ತಿಯಿಂದ ಎಷ್ಟು ಸಂಪತ್ತನ್ನು ಗಳಿಸಿದರೋ ಇಲ್ಲವೋ, ತಮ್ಮ ಕಷ್ಟ-ಕಾರ್ಪಣ್ಯಗಳು ಏನಿದ್ದುವೋ ಏನೋ, ಅಂತೂ ಭೂಪತಿಯಂತೆ ಬಾಳನ್ನು ಕಳೆದರು. ಅವರನ್ನು ಬಲ್ಲವರ ಮನಸ್ಸಿನಲ್ಲಿ ಉಳಿಯುವುದು ಅವರ ಭವ್ಯವಾದ ವ್ಯಕ್ತಿತ್ವ.

ಈ ಧೀರ ಚೇತನ ಗಂಧರ್ವಲೋಕದಿಂದ ಭೂಮಿಗೆ ಬಿದ್ದು ಇಂದಿಗೆ ನೂರು ವರ್ಷಗಳು ಸಲ್ಲುತ್ತವೆ. ಕಣ್ಮರೆಯಾಗಿ ಇಪ್ಪತ್ತೇಳು ವರ್ಷಗಳು ಸರಿದಿದ್ದರೂ, ಅವರ ನೆನಪು ಅಚ್ಚಳಿಯದೆ ಉಳಿದಿದೆ. ಎಲ್ಲ ಕಾಲಕ್ಕೂ ಸಲ್ಲುವ ವ್ಯಕ್ತಿಯೆಂದು ಬೇರೆ ಹೇಳಬೇಕೆ?

ಆದರೆ ಅವರನ್ನು ನೇರವಾಗಿ, ನಿಕಟವಾಗಿ ಬಲ್ಲವರ ಸಂಖ್ಯೆ ಕಡಮೆಯಾಗುತ್ತಿರುವಾಗ ಅವರ ನೆನಪಿನ ವಿವರಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಅವರ ಅಭಿಮಾನಿಗಳು ಮಾಡಬೇಕಾದುದು ಸರಿಯೆ. ಇದು ಕನ್ನಡಿಗರ ಕರ್ತವ್ಯವೂ ಹೌದು. ಕನ್ನಡನಾಡಿನ ಗೌರವಕ್ಕಾಗಿ ಕಾದಾಡಿದವರು ಚೌಡಯ್ಯ. ಅವರೊಂದಿಗೆ ಹತ್ತಿರದ ಸಂಪರ್ಕವನ್ನಿರಿಸಿ ಕೊಂಡಿದ್ದ ಶ್ರೀ ರಾಮಸೇವಾ ಮಂಡಲಿಯು ಈ ಕರ್ತವ್ಯ ನಿರ್ವಹಣೆಗೆ ಮುಂದೆಬಂದಿದೆ. ಈ ಒಂದು ಪುಸ್ತಿಕೆಯನ್ನು ಇವರ ನೆನಪಿಗೆ ಕಾಣಿಕೆಯಾಗಿ ನೀಡಬೇಕೆಂಬ ಸಂಕಲ್ಪವನ್ನು ಹೊಂದಿದೆ.

ಆದರೆ ಇದನ್ನು ಬರೆಯುವ ಕೆಲಸವನ್ನು ನಾನು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಿರಲಿಲ್ಲ; ಕಾರಣ ಮೊದಲೇ ಹೇಳಿದ್ದೇನೆ—ಅವರೊಂದಿಗೆ ಹೇಳಿಕೊಳ್ಳಬಹುದಾದ ಸಂಪರ್ಕವನ್ನೇನೂ ನಾನು ಇರಿಸಿಕೊಂಡಿರಲಿಲ್ಲ.

ಆದರೆ ಶ್ರೀ ರಾಮಸೇವಾ ಮಂಡಲಿಯ ಉಪಾಧ್ಯಕ್ಷರಾದ ಶ್ರೀ ಜಿ. ಕೆ. ಶ್ರೀನಿವಾಸಯ್ಯನವರು ಬಂದು ನನ್ನನ್ನು ಕೇಳಿಕೊಂಡಾಗ ಇಲ್ಲವೆಂದು ಹೇಳಲಾಗಲಿಲ್ಲ. ಅವರು ಸಹೃದಯರು, ಸಜ್ಜನರು, ರಸಿಕರು, ಕಲಾಭಿಮಾನಿಗಳು, ಸುಸಂಸ್ಕೃತರು. ಅವರ ಮಾತನ್ನು ತಳ್ಳಿಹಾಕುವ ಸಾಹಸವನ್ನು ಮಾಡಲಾರೆ.

ಹಾಗಾಗಿ ಈ ಬರಹದ ಹೊಣೆಗಾರಿಕೆ ನನ್ನದಾಗಿದೆ. ಆದರೆ ಇಲ್ಲಿ ಬಂದಿರುವ ವಿವರಗಳು ಬಹುಮಟ್ಟಿಗೆ ಚೌಡಯ್ಯನವರ ಓರಗೆಯವರು, ಶಿಷ್ಯರು, ಮಿತ್ರರು, ಅಭಿಮಾನಿಗಳು ಇವರಿಂದ ನೇರವಾಗಿಯೋ, ಅವರ ಬರಹಗಳಿಂದಲೋ ಪಡೆದುಕೊಂಡಿರುವುವೇ ಆಗಿವೆ. ನನ್ನ ಗುರುಗಳಾಗಿದ್ದ ಸಂಗೀತಕಲಾನಿಧಿ ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರೂ, ವಾಸುದೇವಾ ಚಾರ್ಯರ ಶಿಷ್ಯರಾಗಿದ್ದ ಸಂಗೀತಕಲಾರತ್ನ ಎನ್. ಚೆನ್ನಕೇಶವಯ್ಯ ನವರೂ, ಚೌಡಯ್ಯನವರ ಶಿಷ್ಯರಾಗಿದ್ದ ಕಲೈಮಾಮಣಿ ಆರ್. ಕೆ. ವೆಂಕಟರಾಮಾಶಾಸ್ತ್ರಿಗಳೂ, ಚೌಡಯ್ಯನವರನ್ನು ಚೆನ್ನಾಗಿ ಬಲ್ಲವರಾಗಿದ್ದ ಮೃದಂಗದ ಟಿ. ಎಂ. ಪುಟ್ಟಸ್ವಾಮಯ್ಯ (ಮೂಗಯ್ಯ) ನವರೂ ನನಗೆ ಆಗಾಗ ತಿಳಿಸಿದ ಹಲವು ವಿಚಾರಗಳನ್ನು ಇಲ್ಲಿ ಸೇರಿಸಿದ್ದೇನೆ. ನನ್ನ ಮಿತ್ರರಾದ ಸಂಗೀತಕಲಾನಿಧಿ ವೀಣೆ ದೊರೆಸ್ವಾಮಿ ಅಯ್ಯಂಗಾರ್ಯರು, ಬಿ. ವಿ. ಕೆ. ಶಾಸ್ತ್ರಿಗಳು, ವಿ. ರಾಮರತ್ನಂ ಅವರು ತಂತಮ್ಮ ಬರಹಗಳಲ್ಲಿ ನಮೂದಿಸಿರುವುದನ್ನೂ ಉಪಯೋಗಿಸಿಕೊಂಡಿದ್ದೇನೆ.

ನನ್ನ ಮಿತ್ರರಾದ ವಿದ್ವಾನ್ ಎಚ್. ಪಿ. ರಾಮಾಚಾರ್ಯರು ಚೌಡಯ್ಯನವರನ್ನು ಚೆನ್ನಾಗಿ ಬಲ್ಲವರು; ಅವರೊಂದಿಗೆ ಹಲವಾರು ವರ್ಷಗಳು ಮೃದಂಗ, ಖಂಜರಿಗಳನ್ನು ನುಡಿಸಿ ಅವರ ಮೆಚ್ಚುಗೆಯನ್ನು ಪಡೆದುಕೊಂಡವರು. ನನ್ನಲ್ಲಿ ವಿಶ್ವಾಸವಿಟ್ಟು ಚೌಡಯ್ಯನವರನ್ನು ಕುರಿತು ಹಲವಾರು ಮಾಹಿತಿಗಳನ್ನು ಒದಗಿಸಿದರು. ಅವನ್ನು ಇಲ್ಲಿ ಬಳಸಿಕೊಂಡಿದ್ದೇನೆ.

ಮದ್ರಾಸಿನ 'ಶ್ರುತಿ' ಎಂಬ ಪ್ರಸಿದ್ಧ ಸಂಗೀತ-ನೃತ್ಯ ಪತ್ರಿಕೆಯ ಮೂವತ್ತನೆಯ ಸಂಚಿಕೆಯನ್ನು (ಮಾರ್ಚ್ ೧೯೮೭ರದ್ದು) ಚೌಡಯ್ಯನವರ ನೆನಪಿಗಾಗಿಯೇ ಮೀಸಲಾಗಿ ಪ್ರಕಟಿಸಲಾಯಿತು. ಇದರಲ್ಲಿ

ಚೌಡಯ್ಯನವರನ್ನು ಕುರಿತಂತೆ ಕೆಲವು ಸ್ವಾರಸ್ಯವಾದ ಲೇಖನಗಳಿವೆ. ಅವುಗಳ ನೆರವನ್ನೂ ಪಡೆದುಕೊಂಡಿದ್ದೇನೆ.

ಹೀಗೆ ಹಲವು ಮಣಿಗಳನ್ನು ಒಂದೆಡೆ ಸೇರಿಸುವ ದಾರವಾಗಿದ್ದೇನೆ ನಾನು—'ಸೂತ್ರಸ್ಯೇವಾಸ್ತಿ ಮೇ ಗತಿಃ'. ಇದರಿಂದ ಚೌಡಯ್ಯನವರ ವಿಶಿಷ್ಟವಾದ ವ್ಯಕ್ತಿತ್ವ, ಅವರಿಂದ ಸಂಗೀತಪ್ರಪಂಚಕ್ಕೆ ಸಂದ ಸೇವೆ ಇವು ಮನವರಿಕೆಯಾಗುವುದಾದರೆ ನಾನು ಕೃತಾರ್ಥ .

ಈ ಬರವಣಿಗೆಗೆ ಕಾರಣರಾದ ಹಲವರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ. ಮೇಲೆ ಹೇಳಿದ ಮಹನೀಯರಲ್ಲದೆ, ರಾಮಸೇವಾ ಮಂಡಲಿಯ ಅಧ್ಯಕ್ಷರಾದ ಶ್ರೀ ಎನ್. ಲಕ್ಷ್ಮಣರಾಯರು, ಉಪಾಧ್ಯಕ್ಷರಾದ ಶ್ರೀ ಜಿ.ಕೆ. ಶ್ರೀನಿವಾಸಯ್ಯನವರು, ಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಎಸ್. ವಿ. ನಾರಾಯಣಸ್ವಾಮಿರಾಯರು, ಮಂಡಲಿಯ ಟ್ರಸ್ಟಿನ ಸದಸ್ಯರುಗಳು—ಇವರೆಲ್ಲರ ನೆರವು ನನಗೆ ದೊರತಿದೆ. ಅವರಿಗೆಲ್ಲಾ ನಾನು ಆಭಾರಿಯಾಗಿದ್ದೇನೆ. ಬೆಂಗಳೂರು ಮುದ್ರಣಾಲಯದವರು ಅಂದವಾಗಿ ಅಚ್ಚುಕಟ್ಟಾಗಿ ಅಚ್ಚು ಮಾಡಿಕೊಟ್ಟಿದ್ದಾರೆ. ಅವರ ನೆರವನ್ನೂ ನೆನೆಯಬೇಕು.

—ಸಾಲಿಗ್ರಾಮ ಕೃಷ್ಣ ರಾಮಚಂದ್ರ ರಾವ್



ಬೆಂಗಳೂರಿನ
ಶ್ರೀ ಜಿ. ಕೆ. ಚಿಕ್ಕನರಸಿಂಹಯ್ಯ ಅವರ
ನೆನಪಿಗೆ
ಈ ಗ್ರಂಥ ಸಮರ್ಪಿತ

ಸಂಗೀತರತ್ನ ಟಿ. ಚೌಡಯ್ಯ

(೧)

ಆಗಿನ ಸಂಗೀತ ಪ್ರಪಂಚ

ಕರ್ನಾಟಕ ಸಂಗೀತದ ಬೆಳೆ ಈಚೆಗೆ ಹುಲುಸಾಗಿ ಬೆಳೆದದ್ದು ತಮಿಳುನಾಡಿನಲ್ಲಿ, ಅದೂ ಕಾವೇರೀ ನದಿಯ ದಂಡೆಯ ಮೇಲೆ; ತಿರುಚಿರಪಳ್ಳಿ, ತಂಜಾವೂರು, ಶ್ರೀರಂಗಂ, ಚಿದಂಬರಂ, ಕುಂಭಕೋಣಂ ಮುಂತಾದುವೆಲ್ಲ ಸಂಗೀತ ಸ್ಥಾನಗಳೇ. ಕರ್ನಾಟಕ ಸಂಗೀತದ ಭಾಗ್ಯದೇವತೆಯರಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಶಾಸ್ತ್ರಿಗಳು ನಮ್ಮೆದುರು ತೋರಿಕೊಂಡದ್ದು ತಿರುವಾರೂರಿನಲ್ಲಿ; ಕಾವೇರಿಯ ತೀರವೇ ಅದು. ತ್ಯಾಗರಾಜರು ನೆಲೆಸಿ ಕಣ್ಮರೆಯಾದದ್ದು ತಿರುವಯ್ಯಾರಿನಲ್ಲಿ; ಅದೂ ಕಾವೇರಿಯ ದಡವೇ. ಇನ್ನು ನಮ್ಮಲ್ಲಿಯೂ ಹಾಗೆಯೇ. ಕಾವೇರಿಯ ತೀರದಲ್ಲೇ ಇರುವ ಹನಸೋಗೆ ವೀಣೆ ಶೇಷಣ್ಣನವರು ಹುಟ್ಟಿ ಬೆಳೆದ ಜಾಗ. ರುದ್ರಪಟ್ಟಣವಂತೂ ಸರಿಯೇ ಸರಿ; ಸಂಗೀತದ ತೌರೂರು. ಕಾವೇರಿ ಮುಂದೆ ಹರಿದುಬಂದ ಶ್ರೀರಂಗಪಟ್ಟಣವೂ ಸಂಗೀತ ಕ್ಷೇತ್ರವೇ. ಇನ್ನೂ ಮುಂದೆ ಕಾವೇರಿಯು ಕಪಿಲೆಯೊಂದಿಗೆ ಕೂಡಿಕೊಳ್ಳುವ ತಾಣ ತಿರುಮಕೂಡಲು ನಮ್ಮ ಚೌಡಯ್ಯನವರ ಊರೇ. ಕಾವೇರಿಯ ದಡದ ಮೇಲೆ ಇರದಿದ್ದರೂ, ಕಾವೇರಿಯ ನೆರೆಯಲ್ಲೇ ಇರುವ ಮೈಸೂರು ಸಂಗೀತದ ಕೇಂದ್ರವೇ ಆಯಿತು. ಅಂತೂ ಕಾವೇರೀ ನದಿಗೂ, ಕರ್ನಾಟಕ ಸಂಗೀತಕ್ಕೂ ಮೊದಲಿಂದ ಅದೇನೋ ನಂಟು.

ಕಾವೇರೀ ನದಿಯು ಇಲ್ಲಿಂದ ಅಲ್ಲಿಗೆ ಹರಿಯುತ್ತ ಅಲ್ಲಿ ತನ್ನ ಪಾತ್ರವನ್ನು ವಿಸ್ತರಿಸಿಕೊಂಡಂತೆಯೇ ಸಂಗೀತದ ಹೊನಲೂ ಅಲ್ಲಿ ಹಿಗ್ಗಿತು, ಹರಡಿಕೊಂಡಿತು. ಆದರೆ ಕರ್ನಾಟಕ ಸಂಗೀತ ಮೈದಳೆದದ್ದು ಕಾವೇರಿಯ ಜಾಡಿನಲ್ಲಲ್ಲ; ತುಂಗಭದ್ರೆಯ ಮಡಿಲಲ್ಲಿ, ಕಾವೇರಿಯ ಹರವನ್ನೂ ಸೇರಿಸಿಕೊಂಡಂತೆ. ಈಗ ನಮ್ಮಲ್ಲಿ, ತಮಿಳುನಾಡಿನಲ್ಲಿ, ತೆಲುಗು ಸೀಮೆಯಲ್ಲಿ, ಮಲಯಾಳದಲ್ಲಿ ವಾಡಿಕೆಯಲ್ಲಿರುವ ಶಾಸ್ತ್ರೀಯ ಸಂಗೀತ ಪದ್ಧತಿಯು ಕರ್ನಾಟಕ ಸಂಗೀತವೆಂಬ ಹೆಸರನ್ನು ಪಡೆದದ್ದು ಇವೆಲ್ಲ

ನಾಡುಗಳೂ ಒಕ್ಕೂಟವಾಗಿ ಕರ್ನಾಟಕ ರಾಜ್ಯವೆನಿಸಿಕೊಂಡಿದ್ದಾಗ. ಅದು ವಿಜಯನಗರದ ಅರಸರ ಅಧೀನವಾಗಿ ಇಡೀ ದಕ್ಷಿಣ ಭಾಗ ಇದ್ದ ಕಾಲ. ವಿಜಯನಗರದ ಚಕ್ರವರ್ತಿ ಕೃಷ್ಣದೇವರಾಯನಿಗೆ ಪ್ರಿಯವಾಗಿದ್ದ ಬಿರುದು 'ಕನ್ನಡ ರಾಜ್ಯ ರಮಾರಮಣ' ಎಂಬುದು. ಅದು ಹದಿನಾಲ್ಕನೆಯ ಶತಮಾನದ ಮಾತು.

ಆ ಸಾಮ್ರಾಜ್ಯದ ಅವತಾರವಾದಾಗಲೇ ಅದಕ್ಕೆ ನೆರವಾದ ವಿದ್ಯಾರಣ್ಯರನ್ನು 'ಕರ್ನಾಟಕ ರಾಜ್ಯದ ಭಾಗ್ಯ'ವೆಂದು ಆ ಕಾಲದ ಬರಹಗಳಲ್ಲೇ ಕರೆದಿರುವುದಿದೆ. ವಿದ್ಯಾರಣ್ಯರೇನೋ ಕನ್ನಡದವರೇ; ಅವರು ಬೆಳೆದದ್ದು ಕಾಂಚೀಪುರದ ಪರಿಸರದಲ್ಲಿ; ನೆಲೆಸಿದ್ದು ಹಂಪಿಯಲ್ಲಿ. ಅವರು ಸಂಗೀತಶಾಸ್ತ್ರವನ್ನು ಕುರಿತಂತೆ ಗ್ರಂಥವೊಂದನ್ನೂ ರಚಿಸಿದರು. ಈ 'ಸಂಗೀತಸಾರ'ದ ಉಲ್ಲೇಖ ಗೋವಿಂದದೀಕ್ಷಿತರ 'ಸಂಗೀತ ಸುಧೆ'ಯಲ್ಲಿದೆ. ಗೋವಿಂದದೀಕ್ಷಿತರು (೧೫೫೪–೧೬೨೪) ಕನ್ನಡದವರು; ಹೊಯ್ಸಳ ಕರ್ನಾಟಕರು, ಶಿವಮೊಗ್ಗೆಯವರು. ಅವರು ತಂಜಾವೂರು ರಾಜ್ಯದ ಪ್ರಧಾನಿಯಾಗಿದ್ದವರು. ಶಾಸ್ತ್ರೀಯ ಸಂಗೀತ ಮೈದಳೆದದ್ದು ವಿದ್ಯಾರಣ್ಯರ, ಗೋವಿಂದದೀಕ್ಷಿತರ ಪ್ರತಿಭೆಯ, ಪ್ರಯತ್ನದ ಫಲವಾಗಿಯೇ. ಎಂದಮೇಲೆ ಕನ್ನಡನಾಡಿಗೂ ಕರ್ನಾಟಕ ಸಂಗೀತಕ್ಕೂ ಇರುವ ಸಂಬಂಧ ರೂಢಮೂಲವಾದದ್ದು. 'ಕರ್ನಾಟಕ ಸಂಗೀತ'ಎನ್ನುವ ಹೆಸರು ಸರಿಯಲ್ಲ, 'ದಕ್ಷಿಣಾದಿಸಂಗೀತ' ಎಂದಿರಬೇಕು ಎನ್ನುವ ವಾದದಲ್ಲಿ ಹುರುಳಿರದು.

ಅದು ಹಾಗಿರಲಿ. ವಿಜಯನಗರ ಸಾಮ್ರಾಜ್ಯವು ಕಳೆಗುಂದಿ ಕಣ್ಮರೆಯಾಗುವ ಹೊತ್ತು ಬಂದಾಗ, ಅಲ್ಲಿನ ಅರಸೊತ್ತಿಗೆಯವರು ಶ್ರೀರಂಗಪಟ್ಟಣಕ್ಕೆ ವಲಸೆ ಬಂದುದೂ, ಅಲ್ಲಿನ ಅಧಿಕಾರಿಗಳು ತಂಜಾವೂರು ಕಡೆ ನೆಲೆಸಿದುದೂ ಇತಿಹಾಸದ ಸಂಗತಿಗಳು. ಹಂಪಿಯ ವಲಯದಲ್ಲಿ ಎದ್ದುಕೊಂಡ ಕರ್ನಾಟಕ ಸಂಗೀತದ ಒಂದು ಎಳೆ ಮೈಸೂರಿಗೂ, ಮತ್ತೊಂದು ಎಳೆ ತಂಜಾವೂರಿಗೂ ಸರಿದು ಬಂದುವು. ಇವೆರಡೂ ಬೇರೆಬೇರೆ ದಾರಿಗಳನ್ನೇನು ಹಿಡಿಯಲಿಲ್ಲ; ಎರಡರ ನಡುವೆ ಬೇಕಾದಂತೆ ಸಂಪರ್ಕವಿದ್ದಿತು. ಮೈಸೂರು ಅರಸೊತ್ತಿಗೆಯಲ್ಲೂ, ತಂಜಾವೂರು, ಪುದುಕ್ಕೋಟೆ, ರಾಮನಾಥಪುರ, ತಿರುವಾಂಕೂರು ಸಂಸ್ಥಾನಗಳಲ್ಲೂ ಬೆಳೆದುಬಂದದ್ದು ಕರ್ನಾಟಕ ಸಂಗೀತವೇ.

ಆದರೆ ತಂಜಾವೂರು ಮತ್ತಿತರ ಪ್ರಾಂತ್ಯಗಳ ಜನರಲ್ಲಿ ಕಾಣಿಸಿಕೊಂಡ ಸಂಗೀತಪ್ರೀತಿಯು ನಮ್ಮ ಜನರಲ್ಲಿ ಅದೇಕೋ ಒದಗಿಬರಲಿಲ್ಲ; ಇಂದಿಗೂ ಕಡಮೆಯೇ ಎನ್ನಿ. ರಸಿಕರ ಒತ್ತಾಸೆಯಿದ್ದರಲ್ಲವೆ ಕಲೆ ಬೆಳೆಯುವುದು, ಬೆಳಗುವುದು? ಪ್ರತಿಭಾವಂತರಿಗೆ ಪುರಸ್ಕಾರವಿರದಿದ್ದರೆ ಹೇಗೆ? ಅರಸರ ಮನ್ನಣೆ ಮಾತ್ರ ಕಲಾವಿದರಿಗೆ ಸಾಲುವುದಿಲ್ಲ; ಮಹಾಜನರ ಆದರವೂ ಬೇಕು. ಕರ್ನಾಟಕ ಸಂಗೀತ ತಮಿಳುನಾಡಿನಲ್ಲಿ ಹೆಮ್ಮರವಾಗಿ ಬೆಳೆದದ್ದಕ್ಕೂ, ನಮ್ಮಲ್ಲಿ ಅದು ಇನ್ನೂ ಬಡಕಲಾಗಿರುವುದಕ್ಕೂ ಇದು ಕಾರಣ. ನಮ್ಮ ನಡುವೆ ಒಬ್ಬ ಚೌಡಯ್ಯನವರಿದ್ದ ಕಾಲದಲ್ಲಿ ಅಲ್ಲಿ ತಿರುಚಿ ಗೋವಿಂದಸ್ವಾಮಿ ಪಿಳ್ಳೆ, ಮರುಂಗಾಪುರಿ ಗೋಪಾಲಕೃಷ್ಣ ಅಯ್ಯರ್, ತಿರುಕ್ಕೋಡಿಕ್ಕಾವಲ್ ಕೃಷ್ಣ ಅಯ್ಯರ್, ದ್ವಾರಂ ವೆಂಕಟಸ್ವಾಮಿ ನಾಯುಡು, ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೆ, ಪಾಪಾ ವೆಂಕಟರಾಮಯ್ಯ, ಕರೂರು ಚಿನ್ನಸ್ವಾಮಿ ಅಯ್ಯರ್, ಮಾಯವರಂ ಗೋವಿಂದರಾಜ ಪಿಳ್ಳೆ, ಟಿ. ಕೆ. ಜಯರಾಮಯ್ಯರ್ ಮುಂತಾದ ಹತ್ತಾರು ಪಿಟೀಲು ವಿದ್ವಾಂಸರು ಪ್ರಸಿದ್ಧರಾಗಿದ್ದರು. ಕಡೆಗೆ ನಮ್ಮ ಚೌಡಯ್ಯನವರು ಪ್ರಸಿದ್ಧರಾದದ್ದೂ ಅಲ್ಲಿಯೇ; ನಮ್ಮ ಜನ ಕಣ್ಣು ತೆರೆದದ್ದು ಅನಂತರವೇ!

ಈಗ ಕರ್ನಾಟಕ ಸಂಗೀತದ ಸ್ವರೂಪವೇನಿದೆಯೋ ಅದು ಸಿದ್ಧವಾದದ್ದು ತಮಿಳುಸೀಮೆಯಲ್ಲೇ; ಬಹುಮಟ್ಟಿಗೆ ತಂಜಾವೂರಿನ ಪರಿಸರದಲ್ಲಿ. ಸಂಗೀತವಿನಿಕೆಯ ಬಗೆ, ಸಭೆಯ ಲಕ್ಷಣ, ನಿರೂಪಣೆಯ ಪರಿಕರಗಳು, ರಸಿಕರ ಗೊತ್ತುಗುರಿ ಇವೆಲ್ಲ ರೂಪು ತಳೆದದ್ದು ಅಲ್ಲಿಯೇ. ಮೈಸೂರಿನ ಅರಸರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು (೧೭೯೪–೧೮೬೮) 'ಅಭಿನವಭೋಜ'ನೇ; ಅವರ ಕಾಲದಲ್ಲಿ ಕಲೆಗೆ ದೊರೆತ ಪ್ರೋತ್ಸಾಹ ವಿಶಿಷ್ಟವಾದುದು. ಅವರ ಆಸ್ಥಾನಕ್ಕೆ ತಮಿಳುನಾಡಿನಿಂದ ಸಂಗೀತ ವಿದ್ವಾಂಸರು ಬಂದು ಸೇರಿಕೊಳ್ಳಲು ಹಾತೊರೆಯುತ್ತಿದ್ದರು. ಅಲ್ಲಿಂದ ಬಂದು ಇಲ್ಲಿ ನೆಲೆಸಿದವರೂ ಅನೇಕರು.

ತಂಜಾವೂರಿನ ಶರಭೋಜಿ ಮಹಾರಾಜನ ಆಸ್ಥಾನವನ್ನು ಬಿಟ್ಟು ವೀಣೆ ವೆಂಕಟಸುಬ್ಬಯ್ಯ (ಸಪ್ತತಾಳೇಶ್ವರಿ) ಇಲ್ಲಿಗೆ ಬಂದ ದಾಖಲೆ ಇದೆ. ತ್ಯಾಗರಾಜರ ಶಿಷ್ಯರಾಗಿದ್ದ ಲಾಲ್‌ಗುಡಿ ರಾಮಯ್ಯರು, ಪ್ರಶಿಷ್ಯರಾಗಿದ್ದ

ಸದಾಶಿವರಾಯರು (ಮೈಸೂರು ಸದಾಶಿವರಾಯರೆಂದೇ ಹೆಸರಾದವರು), ಆರಾವಮುದಂ 'ಸವ್ಯಸಾಚಿ' ಅಯ್ಯಂಗಾರ್, ಪಚ್ಚಿಮಿರಿಯಂ ಕೃಷ್ಣಯ್ಯ ಮೊದಲಾಗಿ ಹಲವು ವಿದ್ವಾಂಸರು ಮೈಸೂರಿಗೆ ವಲಸೆ ಬಂದರು. ವೀಣೆ ಶೇಷಣ್ಣನವರ ಹಿರಿಯರೂ ಹೀಗೆ ತಂಜಾವೂರಿನಿಂದ ಬಂದವರೇ; ಆದರೆ ಅವರು ಮೊದಲಿಗೆ ಕನ್ನಡದವರೇ.

ತಮಿಳುನಾಡಿನಲ್ಲಿ ' ಮೈದಳೆದ ಸಂಗೀತ ಪದ್ಧತಿ ಮೈಸೂರಿಗೆ ಬಂದಿಳಿದದ್ದು ಹೀಗೆ. ಆ ಕಾಲದಲ್ಲಿ ಶಾಸ್ತ್ರೀಯ ಸಂಗೀತದ ವರ್ಚಸ್ಸನ್ನು ಬೆಳೆಸಿದವರು ಕನ್ನಡಿಗರೇ ಆಗಿದ್ದವರು (ದೊಡ್ಡಸುಬ್ಬರಾಯರು, ಪದ್ಮನಾಭಯ್ಯನವರು, ಚಿಕ್ಕರಾಮಪ್ಪನವರು, ಮೂಗೂರು ಸುಬ್ಬಣ್ಣನವರು, ಸುರಪುರದ ಆನಂದದಾಸರು) ಮತ್ತು ಕನ್ನಡಿಗರಾದವರು (ವೀಣೆ ಸಾಂಬಯ್ಯ, ಲಾಲ್‌ಗುಡಿ ಗುರುಸ್ವಾಮಿ ಅಯ್ಯರ್, ಸದಾಶಿವರಾಯರು ಮುಂತಾದವರು). ಮುಂದೆ ಚಾಮರಾಜ ಒಡೆಯರು ಅರಸರಾಗಿರುವಾಗ (೧೮೬೮–೧೮೯೪) ಸಂಗೀತದ ನೆಲೆ ಭದ್ರವಾಯಿತು. 'ವೈಣಿಕ ಶಿಖಾಮಣಿ' ಶೇಷಣ್ಣನವರು, ಅವರ ಸೋದರವಾವೆಯ ಸುಬ್ಬಣ್ಣನವರು, 'ಸಂಗೀತವಿದ್ಯಾ ಕಂಠೀರವ' ಕರಿಗಿರಿರಾಯರು, 'ಗಾನ ವಿಶಾರದ' ಬಿಡಾರದ ಕೃಷ್ಣಪ್ಪನವರು ಆ ಕಾಲದ ದಿಗ್ಗಜಗಳು.

ಶೇಷಣ್ಣನವರೂ, ಕೃಷ್ಣಪ್ಪನವರೂ ಕನ್ನಡನಾಡಿನಲ್ಲಿ ಮಾತ್ರವಲ್ಲದೆ ನೆರೆನಾಡುಗಳಲ್ಲೆಲ್ಲ ಪ್ರಖ್ಯಾತರಾದರು. ಆಗ ತಮಿಳುನಾಡಿನಲ್ಲಿ ಮಹಾವೈದ್ಯನಾಥಯ್ಯರ್, ಕೋನೇರಿರಾಜಪುರಂ ವೈದ್ಯನಾಥಯ್ಯರ್, ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್, ತಿರುಕ್ಕೋಡಿಕ್ಕಾವಲ್ ಕೃಷ್ಣ ಅಯ್ಯರ್, ನಾಮಕ್ಕಲ್ ನರಸಿಂಹ ಅಯ್ಯಂಗಾರ್, ರಾಮನಾಥಪುರಂ ಶ್ರೀನಿವಾಸ ಅಯ್ಯಂಗಾರ್, ಮಧುರೈ ಪುಷ್ಪವನಂ, ಶರಭಶಾಸ್ತ್ರಿ, ವೈಕ್ಕಂ ಪರಮೇಶ್ವರ ಭಾಗವತರು, ಪಾಲಕ್ಕಾಡು ರಾಮ ಭಾಗವತರು, ಶಿಮಿಯಿ ಸುಂದರಂ ಅಯ್ಯರ್, ಧನಮ್ಮಾಳ್, ಮಲೈಕ್ಕೋಟ್ಟೈ ಗೋವಿಂದಸ್ವಾಮಿ ಪಿಳ್ಳೈ ಮುಂತಾದ ಹಿರಿಯ ವಿದ್ವಾಂಸರಿದ್ದರು; ಒಬ್ಬೊಬ್ಬರೂ ಸಿಂಹಪ್ರಾಯರು; ಎದುರಿಲ್ಲದ ಧೀರರು. ಇವರೆಲ್ಲರಿಂದಲೂ ಭಲೆ ಎನಿಸಿಕೊಂಡು ಮೆರೆದವರು ಶೇಷಣ್ಣನವರು, ಕೃಷ್ಣಪ್ಪನವರು. ಆಗಿನ ಸಂಗೀತ ಪ್ರಪಂಚದಲ್ಲಿ ಮೈಸೂರು ಹೆಸರಾದದ್ದು ಇವರಿಬ್ಬರಿಂದ. ತಮಿಳುನಾಡಿನ



ರಸಿಕರು ಇವರನ್ನು ತುಂಬ ಆದರಿಸಿದರು; ಅಲ್ಲಿನ ವಿದ್ವಾಂಸರೂ ಇವರನ್ನು ಗೌರವಿಸಿದರು.

ವಾಸುದೇವಾಚಾರ್ಯರು ತಿರುವಯ್ಯಾರಿಗೆ ಹೋಗಿ ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್‌ರವರ ಬಳಿ ಕಲಿತು, ಹಿಂದಕ್ಕೆ ಬಂದು ಮೈಸೂರು ಆಸ್ಥಾನವನ್ನು ಸೇರಿದುದೂ ಇದೇ ಕಾಲವೇ. ನಾಲ್ವಡಿ ಕೃಷ್ಣರಾಜ ಒಡೆಯರು ಅರಸರಾಗಿದ್ದಾಗ (೧೮೯೫–೧೯೪೦) ಅವರ ಆಸ್ಥಾನದಲ್ಲಿದ್ದ ಹಿರಿಯ ವಿದ್ವಾಂಸರೆಂದರೆ ಶೇಷಣ್ಣನವರು, ಸುಬ್ಬಣ್ಣನವರು, ಬಿಡಾರದ ಕೃಷ್ಣಪ್ಪನವರು, ಚಿಕ್ಕರಾಮರಾಯರು, ವಾಸುದೇವಾಚಾರ್ಯರು ಮತ್ತು ಅವರ ಕೆಲವರು ಶಿಷ್ಯರು. ಶೇಷಣ್ಣನವರ ಶಿಷ್ಯರಲ್ಲಿ ವೆಂಕಟಗಿರಿಯಪ್ಪ, ಕೃಷ್ಣಪ್ಪನವರ ಶಿಷ್ಯರಲ್ಲಿ ದೇವೇಂದ್ರಪ್ಪ, ಚೌಡಯ್ಯ, ಟಿ. ಎಂ. ಪುಟ್ಟಸ್ವಾಮಯ್ಯ (ಮೂಗಯ್ಯ), ಬೆಂಗಳೂರು ನಾಗರತ್ನಮ್ಮ, ಶಿವರುದ್ರಪ್ಪ ಮುಂತಾದವರು. ಹೊರಗಿನ ವಿದ್ವಾಂಸರೆಂದರೆ 'ಟೈಗರ್' ವರದಾಚಾರ್ಯರು, ಹರಿಕೇಶನಲ್ಲೂರು ಮುತ್ತಯ್ಯ ಭಾಗವತರು, ಪಾಲಕ್ಕಾಡು ಅನಂತರಾಮ ಭಾಗವತರು.

ಮುಂದಿನ ಪೀಳಿಗೆಯಲ್ಲಿ ಮೈಸೂರಿನ ಹೆಸರನ್ನು ಹೊರನಾಡುಗಳಲ್ಲಿ ಉಳಿಸಿದವರು ಕೆ. ವಾಸುದೇವಾಚಾರ್ಯರು (ವಾಗ್ಗೇಯಕಾರರಾಗಿ), ಚೌಡಯ್ಯನವರು (ಪಿಟೀಲು ಸಹವಾದಕರಾಗಿ) ಮತ್ತು ದೊರೆಸ್ವಾಮಿ ಅಯ್ಯಂಗಾರ್ಯರು (ವೈಣಿಕರಾಗಿ). ವಾಸುದೇವಾ ಚಾರ್ಯರದ್ದು ತಿರುವಯ್ಯಾರಿನ ಹಿನ್ನೆಲೆ. ಉಳಿದ ಇಬ್ಬರದ್ದು ನಮ್ಮದೇ ಪರಂಪರೆ; ಚೌಡಯ್ಯನವರು ಬಿಡಾರದ ಕೃಷ್ಣಪ್ಪನವರ ಶಿಷ್ಯರು. ಚೌಡಯ್ಯನವರ ಪರಂಪರೆಯ ಹಿನ್ನೆಲೆಯನ್ನು ಕುರಿತು ಕೊಂಚಮಟ್ಟಿಗೆ ಬರೆಯಬೇಕಾಗಿದೆ.

ಚೌಡಯ್ಯನವರ ಗುರುಗಳಾದ ಬಿಡಾರದ ಕೃಷ್ಣಪ್ಪನವರು ಸಂಗೀತವನ್ನು ಕಲಿತದ್ದು ಕರಿಗಿರಿರಾಯರಲ್ಲಿ (೧೮೫೩–೧೯೨೭). ಇವರು

ಬಿಡಾರದ ಕೃಷ್ಣಪ್ಪ

ಶ್ರೀರಂಗಪಟ್ಟಣದವರು; ಕಾವೇರೀ ತೀರದ ಬೆಳೆ. ಇವರ ಮೊದಲ ಗುರುಗಳು ಸಂಗೀತದ ಸುಬ್ಬರಾಯರು; ಇವರೂ ಶ್ರೀರಂಗಪಟ್ಟಣದವರೇ. ಕರಿಗಿರಿರಾಯರು ಚಾಮರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದರು; 'ಸಂಗೀತವಿದ್ಯಾಕಂಠೀರವ' ಎಂಬ ಬಿರುದನ್ನೂ ಮಹಾರಾಜರಿಂದ ಪಡೆದಿದ್ದರು. ಅವರು ವಾಗ್ಗೇಯಕಾರರೂ ಆಗಿದ್ದು ಸುಮಾರು ನಲವತ್ತು ಕೃತಿಗಳನ್ನು ರಚಿಸಿದ್ದಾರೆ; 'ಗಾನವಿದ್ಯಾರಹಸ್ಯಪ್ರಕಾಶಿನಿ' ಎಂಬ ಗ್ರಂಥವನ್ನೂ ಬರೆದಿದ್ದಾರೆ. ಅನುಕೂಲಸ್ಥರಾಗಿದ್ದುದರಿಂದ ಸಂಗೀತವನ್ನು ಜೀವನೋಪಾಯಕ್ಕೆಂದು ಬಳಸಿಕೊಳ್ಳಲಿಲ್ಲ; ತಮ್ಮ ಆಧ್ಯಾತ್ಮಿಕ ಸಾಧನೆಯಾಗಿ ಉಳಿಸಿಕೊಂಡರು. ಅವರ ಬಳಿ ಸಂಗೀತವನ್ನು ಕಲಿತವರಲ್ಲಿ ಬಿಡಾರದ ಕೃಷ್ಣಪ್ಪನವರಲ್ಲದೆ 'ಸಂಗೀತರತ್ನ' ಕುರೂಡಿ ಚಿಕ್ಕ ರಾಮರಾಯರೂ (೧೮೯೦—೧೯೪೫), 'ಸಂಗೀತಕಲಾನಿಧಿ' ರಾಳ್ಳಪಲ್ಲಿ ಅನಂತಕೃಷ್ಣಶರ್ಮರೂ (೧೮೯೩—೧೯೭೮) ಇದ್ದರು. ಚಿಕ್ಕರಾಮ ರಾಯರು ಮುಂದೆ ವೀಣೆ ಸುಬ್ಬಣ್ಣನವರಲ್ಲಿ ಪಾಠಮಾಡಿ ನಾಟಕ, ಸಂಗೀತ ಎರಡರಲ್ಲೂ ಹೆಸರಾದರು. ಬೆಂಗಳೂರು ನಾಗರತ್ನಮ್ಮನವರೂ, ದೇವೇಂದ್ರಪ್ಪನವರೂ ಮೊದಲು ಇವರ ಬಳಿಯೇ ಕಲಿತು ಅನಂತರ ಬಿಡಾರದ ಕೃಷ್ಣಪ್ಪನವರ ಶಿಷ್ಯರಾದರು. ಅನಂತಕೃಷ್ಣಶರ್ಮರೂ ಮುಂದೆ ಬಿಡಾರದ ಕೃಷ್ಣಪ್ಪನವರ ಬಳಿಯೇ ಶಿಷ್ಯವೃತ್ತಿ ಮಾಡಿದರು.

ಇನ್ನು ಬಿಡಾರದ ಕೃಷ್ಣಪ್ಪನವರ (೧೮೬೬—೧೯೩೧) ವಿಚಾರ ಎಲ್ಲರಿಗೂ ತಿಳಿದದ್ದೇ; ಹೆಚ್ಚು ಹೇಳುವ ಅಗತ್ಯವಿರದು. ಉಡುಪಿಯ ಬಳಿ ನಂದಳಿಕೆಯಲ್ಲಿರುತ್ತಿದ್ದ ವಿಶ್ವನಾಥಯ್ಯ ಎಂಬುವರ ಮಗ. ಧರ್ಮಸ್ಥಳದ ದಶಾವತಾರ ಮಂಡಲಿಯ ನಾಟಕಗಳಲ್ಲಿ ಸ್ತ್ರೀಪಾತ್ರ ವಹಿಸುತ್ತಿದ್ದ ವಿಶ್ವನಾಥಯ್ಯನವರನ್ನು ಮೈಸೂರು ಅರಸರು ಮೆಚ್ಚಿಕೊಂಡು ಮೈಸೂರಿಗೆ ಕರೆಸಿಕೊಂಡು ಅವರಿಗೆ ಬಿಡಾರವನ್ನು ಕಲ್ಪಿಸಿಕೊಟ್ಟರಾಗಿ ಅವರು ಬಿಡಾರದವರಾದರು. ಕೃಷ್ಣಪ್ಪನವರು ಹುಟ್ಟಿದ್ದು ಮೈಸೂರಿನಲ್ಲೇ. ಹುಟ್ಟಿದ ಕೆಲವು ವರ್ಷಗಳಲ್ಲೇ ತಂದೆ ತೀರಿಕೊಂಡರು; ದಿಕ್ಕಿಲ್ಲದ ಮಗುವನ್ನು ಮೈಸೂರಿನ ಸಾಹುಕಾರ ತಿಮ್ಮಯ್ಯನೆಂಬ ರಸಿಕರು ಹಿಡಿದು ದಾರಿ ತೋರಿಸಿದರು. ಕರೂರು ರಾಮಸ್ವಾಮಯ್ಯ ಎಂಬುವರ ಬಳಿ ಸಂಗೀತ ಕಲಿಸುವ ವ್ಯವಸ್ಥೆ ಮಾಡಿದರು. ಮುಂದೆ ಗಿರಿಭಟ್ಟರ ತಮ್ಮಯ್ಯ,

ವೀಣೆ ಸುಬ್ಬಣ್ಣನವರು

ಕರಿಗಿರಿರಾಯರು, ವೀಣೆ ಶೇಷಣ್ಣನವರು ಇವರ ಬಳಿಯೂ ಶಿಷ್ಯವೃತ್ತಿ ಮಾಡಿ ತಮ್ಮ ಸಂಗೀತವನ್ನು ರೂಢಿಸಿಕೊಂಡರು.

ಸಂಗೀತದೇವತೆ ಇವರಿಗೆ ಮನಸಾರೆ ಒಲಿದಳು; ತನ್ನೆಲ್ಲ ಸಂಪತ್ತಿನಿಂದ ಇವರನ್ನು ಸಿಂಗರಿಸಿದಳು. ಸೊಗಸಾದ ಶಾರೀರ, ಮೋಹಕವಾದ ವಿನಿಕೆ, ಖಚಿತವಾದ ಲಯಜ್ಞಾನ, ಸ್ಫುಟವಾದ ಸಾಹಿತ್ಯ, ಧೀರಗಂಭೀರವಾದ ನಿಲುವು, ರಕ್ತಿಭಕ್ತಿಗಳ ಸಮತೂಕ ಇವೆಲ್ಲವೂ ಇವರ ಸಂಗೀತದಲ್ಲಿ ಎದ್ದುಕಾಣುತ್ತಿದ್ದುವಂತೆ. ಅವರದ್ದು ದೇವಯೋಗ್ಯವಾದ ಸಂಗೀತವೆಂದೂ, ನಮ್ಮ ಪಾಲಿಗೆ ಗಂಧರ್ವಗಾನವೇ ಎಂದೂ ನನ್ನ ಗುರುಗಳು (ರಾಳ್ಲಪಲ್ಲಿ ಅನಂತಕೃಷ್ಣಶರ್ಮರು) ಹೇಳುತ್ತಿದ್ದರು. ಲಕ್ಷ್ಯ ಲಕ್ಷಣ ಎರಡೂ ಪ್ರೌಢವಾಗಿ, ನಿರ್ದುಷ್ಟವಾಗಿದ್ದುಕೊಂಡು ಸಮರಸವಾಗಿ ಬೆರೆತಿದ್ದ ಸಂಗೀತವಂತೆ ಅದು. ತಮಿಳುನಾಡಿನಲ್ಲಿ ವಿಶೇಷವಾಗಿ ಸಂಚರಿಸಿ ಮೈಸೂರಿನ ಸಂಗೀತಪ್ರಜ್ಞೆಯನ್ನು ಅಲ್ಲಿಯವರಿಗೆ ಮನವರಿಕೆ ಮಾಡಿಕೊಟ್ಟರು.

ಸಂಗೀತವೆಂದರೆ ತಮ್ಮದೇ ಸಂಗೀತ, ಬೇರೆಯವರಿಗೆ ಅದರ ಸುಳಿವು ಸಿಗಲಾರದು ಎಂದು ನಂಬಿದ್ದ ತಮಿಳರು ಅಂದು ಇದ್ದರು; ಇಂದೂ

ಇರುವಂತೆ. ಶೇಷಣ್ಣನವರ ವೀಣಾವಾದನವನ್ನೂ ಕಡೆಗಣ್ಣಿಂದ ಕಂಡವರು ಇದ್ದರು. ಆದರೆ ವಿದ್ವಾಂಸರೂ, ತಜ್ಞರೂ ಶೇಷಣ್ಣನವರ ವಾದನದ ವೈಖರಿಯನ್ನು ಮೆಚ್ಚಿಕೊಂಡರು. ಧನಮ್ಮಾಳ್, ತಿರುಕ್ಕೋಡಿಕಾವಲ್ ಕೃಷ್ಣ ಅಯ್ಯರ್, ಆಬ್ರಹಾಂ ಪಂಡಿತರು, ಮೃದಂಗದ ನಾರಾಯಣಸ್ವಾಮಿ ಅಪ್ಪ ಮುಂತಾದವರು ಶೇಷಣ್ಣನವರನ್ನು ದೈವಾಂಶಸಂಭೂತರೆಂದೇ ಎಣಿಸಿದ್ದರು. ಆದರೆ ಆ ವಾದನದ ಸ್ವಾರಸ್ಯವನ್ನು ಅನುಭವಿಸಲು ಸಂಸ್ಕಾರ ಇರಬೇಕಷ್ಟೆ. ಅದು ಬಹು ಜನರಿಗೆ ಇರಲಾರದು. ಕೃಷ್ಣಪ್ಪನವರ ಹಾಡಿಕೆಯ ಮೋಡಿಗೆ ಈ ಬಗೆಯ ತಡೆಯಿರಲಿಲ್ಲ. ಅವರಿಗೆ ಅಲ್ಲಿ ಜನಪ್ರೀತಿ ಧಾರಾಳವಾಗಿ ದೊರೆಯಿತು. ವಿದ್ವಾಂಸರೂ, ರಸಿಕರೂ, ಸಾಮಾನ್ಯರೂ, ವಿಮರ್ಶಕರೂ ಎಲ್ಲರೂ ಅವರನ್ನು ಕೊಂಡಾಡಿದರು. ಮೈಸೂರಿನ ಸಂಗೀತವನ್ನು ಅಸಡ್ಡೆಯಿಂದ ಕಾಣುತ್ತಿರುವ ಕಣ್ಣನ್ನು ಹೀಗೆ ಕೃಷ್ಣಪ್ಪನವರು ತೆರೆದರು.

ಇಲ್ಲಿಯೂ ಅವರ ಪ್ರತಿಭೆ ಮನೆಮಾತಾಯಿತು. ಸಂಗೀತ ವಿದ್ಯೆಯಲ್ಲಿ ಹಿರಿಮೆ ಒಂದು ತೂಕವಾದರೆ ಅವರ ವ್ಯಕ್ತಿತ್ವದ ವೈಶಿಷ್ಟ್ಯ ಅದರ ಹತ್ತು ಪಟ್ಟು ಹೆಚ್ಚಿನದು. ಶೇಷಣ್ಣನವರಾಗಲಿ, ಕೃಷ್ಣಪ್ಪನವರಾಗಲಿ ಅಷ್ಟು ಜನಪ್ರೀತಿಯನ್ನು ಗಳಿಸಿದ ಗುಟ್ಟು ಇಬ್ಬರೂ ತುಂಬ ದೊಡ್ಡ ವ್ಯಕ್ತಿಗಳೆಂಬುದು. ಇಬ್ಬರದ್ದೂ ನಿಷ್ಕಲ್ಮಷವಾದ ಹೃದಯ, ನಿರ್ಮಲವಾದ ಮನಸ್ಸು, ಅತ್ಯಂತ ಸರಳ ಸ್ವಭಾವ, ವಿನಯ, ಔದಾರ್ಯ, ಶಿಷ್ಯವಾತ್ಸಲ್ಯ; ಅಸೂಯೆ-ಅಹಂಕಾರಗಳ ಗಾಳಿಗಂಧವೂ ಇರದು. ಗುಣಗ್ರಹಣದಲ್ಲಿ ಅವರ ಒಲವು; ದೋಷದರ್ಶನದಲ್ಲಲ್ಲ. ಸಂಗೀತವನ್ನು ಭಗವಂತನ ಉಪಾಸನೆಯೆಂದೇ ಬಗೆದಿದ್ದವರು. ಲೌಕಿಕಪ್ರಯೋಜನಗಳಿಗೆ ಸಂಗೀತವನ್ನು ಬಳಸಲು ಎಂದೂ ಒಪ್ಪದವರು. ಇಬ್ಬರೂ ಬಡತನದಿಂದಲೇ ಮೇಲೆ ಬಂದವರು; ಬದುಕಿನ ಬವಣೆಯನ್ನು ಕಂಡವರು. ಸಂಗೀತದಲ್ಲಿ ಸಂತೃಪ್ತಿಯನ್ನೂ, ಕೃತಾರ್ಥತೆಯನ್ನೂ ಅನುಭವಿಸಿದವರು.

ನಾನು ಕೇಳಿದ ಒಂದು ಸಂಗತಿಯನ್ನು ಇಲ್ಲಿ ಹೇಳಬಹುದು. ಕೃಷ್ಣಪ್ಪನವರು ತಮಿಳುನಾಡಿನಲ್ಲಿ ಸಂಚಾರ ಮಾಡಿದಾಗ ಅವರ ಸಂಗೀತವನ್ನು ಮೆಚ್ಚಿಕೊಂಡವರಲ್ಲಿ ತಿರುಚಿಯ ಆಳ್ವಾರ್ ಚೆಟ್ಟಿಯಾರ್ ಎಂಬುವರೊಬ್ಬರು. ಮದ್ರಾಸಿನಲ್ಲಿದ್ದುಕೊಂಡು ದೊಡ್ಡ ವ್ಯಾಪಾರ-

ವಹಿವಾಟವನ್ನು ನಡೆಸುತ್ತಿದ್ದರು; ಶ್ರೀಮಂತರು, ರಸಿಕರು. ಸಂಗೀತವೆಂದರೆ ಅವರಿಗೆ ಪಂಚಪ್ರಾಣ. ಅದರಲ್ಲೂ ಕೃಷ್ಣಪ್ಪನವರು ಎಲ್ಲಿ ಹಾಡಲಿ, ಅಲ್ಲಿ ಇವರು ಇದ್ದೇ ಇರುವರು. ದೇವರನಾಮಗಳನ್ನು ಹಾಡುವಾಗಲಂತೂ ಇವರು ಮೈಮರೆಯುವರು. ಹೀಗಿರುವಾಗ ಯಾವುದೋ ಕಾರಣದಿಂದ ಅವರ ಉದ್ಯಮದಲ್ಲಿ ಏರುಪೇರಾಗಿ ಸುಮಾರು ಸಂಪತ್ತು ಕೈಬಿಟ್ಟಿತು; ಕಷ್ಟಕ್ಕೆ ಈಡಾದರು. ಈ ಆಘಾತವನ್ನು ಎದುರಿಸುವ ಧೈರ್ಯ ಅವರಿಗಿರಲಿಲ್ಲ. ಸಂಗೀತಕ್ಕೆ ಒಲಿಯಬಲ್ಲ ಮನಸ್ಸು ಎಷ್ಟಾದರೂ ಸೂಕ್ಷ್ಮವಾದುದಲ್ಲವೆ? ಮೃದುವಾದುದು ತಾನೆ?

ಈಗ ಅವರಿಗೆ ಬುದ್ಧಿವಿಕಲ್ಪವಾಯಿತು. ಯಾವಾಗಲೂ ಏನೋ ದುಗುಡ, ಯಾವುದರಲ್ಲೂ ಆಸಕ್ತಿಯಿಲ್ಲ, ಉತ್ಸಾಹವಿಲ್ಲ, ಯಾರೊಂದಿಗೂ ಮಾತುಕತೆಯಿಲ್ಲ; ಊಟ ಉಡುಗೆಯ ಕಡೆಗೂ ಗಮನವಿಲ್ಲ. ಎರಡು ತಿಂಗಳುಗಳು ಹೀಗೆಯೇ ಕಳೆದುವು; ಯಾವ ಉಪಚಾರಕ್ಕೂ ರೋಗ ಬಗ್ಗಲಿಲ್ಲ. ಕಡೆಗೆ ಮನೆಯವರಿಗೊಂದು ಆಲೋಚನೆ ಹೊಳೆಯಿತು—ಈತನಿಗೆ ಕೃಷ್ಣಪ್ಪನವರ ಸಂಗೀತವೆಂದರೆ ತುಂಬ ಪ್ರೀತಿ; ಈಗ ಅದನ್ನು ಕೇಳುವುದಾದರೆ ಗುಣವಾದೀತೋ ಏನೋ ಎಂದು. ಮನೆಯವರೊಬ್ಬರು ಮೈಸೂರಿಗೆ ಬಂದು ಕೃಷ್ಣಪ್ಪನವರನ್ನು ಕಂಡು ವಿಚಾರಮಾಡಿದರು. ತನ್ನಿಂದ ಏನಾದರೂ ನೆರವಾಗುವುದಿದ್ದರೆ ಅಗತ್ಯವಾಗಿ ಬರುತ್ತೇನೆ ಎಂದು ಕೃಷ್ಣಪ್ಪನವರು ಇದ್ದ ಕೆಲಸ-ಕಾರ್ಯಗಳನ್ನೆಲ್ಲ ಬದಿಗೊತ್ತಿ ಮದ್ರಾಸಿಗೆ ಹೊರಟರು.

ಅಲ್ಲಿ ಚೆಟ್ಟಿಯಾರರ ಮನೆಯಲ್ಲಿ ಹತ್ತು ದಿನಗಳ ವಾಸ್ತವ್ಯ. ದಿನವೂ ಬೆಳಿಗ್ಗೆ ಎರಡು ಘಂಟೆಗಳ ಕಾಲ, ಸಂಜೆ ಮತ್ತೆರಡು ಘಂಟೆಗಳ ಕಾಲ ಸಂಗೀತ ವಿನಿಕೆ. ಬರುಬರುತ್ತ ಚೆಟ್ಟಿಯಾರರು ಗುಣಮುಖರಾದರು; ರೋಗ ದೂರ ಸರಿಯಿತು; ಮತ್ತೆ ಎಂದಿನಂತಾದರು. ಮುಂದೆ ಚೌಡಯ್ಯನವರು ಸಂಗೀತದಲ್ಲಿ ಈ ಬಗೆಯ ಚಿಕಿತ್ಸಕ ಶಕ್ತಿ ಇದೆ ಎಂದು ಹೇಳುತ್ತಿದ್ದುದು ಈ ಪ್ರಸಂಗದ ಹಿನ್ನೆಲೆಯಲ್ಲೇ ಇದ್ದೀತು.

ಬಿಡಾರದ ಕೃಷ್ಣಪ್ಪನವರು ಹಾಡುವುದು ಮಾತ್ರವಲ್ಲದೆ ಕೊಳಲನ್ನೂ, ಪಿಟೀಲನ್ನೂ ನುಡಿಸುತ್ತಿದ್ದರು. ಅವರ ಶಿಷ್ಯಸಂಪತ್ತು ಹಿರಿದಾದುದು. ಅವರ

ಹೆಸರನ್ನು ಉಳಿಸಿದವರು, ಅವರಂತೆಯೇ ನೆರೆನಾಡುಗಳಿಗೆ ಹೋಗಿ ಜಯಭೇರಿ ಹೊಡೆದು ಮೈಸೂರಿಗೆ ಹೆಸರನ್ನು ತಂದುಕೊಟ್ಟವರು ಅವರ ಪಟ್ಟಶಿಷ್ಯ ಚೌಡಯ್ಯನವರು. ಕೃಷ್ಣಪ್ಪನವರಿಗೆ ತಮಿಳುನಾಡಿನಲ್ಲಿ ದೊರೆತ ಜನಪ್ರೀತಿ ಚೌಡಯ್ಯನವರಿಗೂ ದೊರೆತಿತು. ಅದು ಮುಂದೆ ಬರುವ ವಿಚಾರ. ಉಳಿದ ಶಿಷ್ಯರಲ್ಲಿ ಹೆಸರಾದವರು ರಾಚಪ್ಪ, ಬೆಂಗಳೂರು ನಾಗರತ್ನಮ್ಮ ಮತ್ತು ಕೋಲಾರದ ನಾಗರತ್ನಮ್ಮ. ಇವರು ಮೂವರೂ ಮೊದಲ ಶಿಷ್ಯವರ್ಗಕ್ಕೆ ಸೇರಿದವರು. ರಾಚಪ್ಪ ಹಾಡಿಕೆಯಲ್ಲಿ ಎತ್ತಿದ ಕೈ. ಇಬ್ಬರು ನಾಗರತ್ನಮ್ಮನವರೂ ಗಾಯನ, ನರ್ತನ, ಅಭಿನಯಗಳಲ್ಲಿ ಪ್ರಸಿದ್ಧರು. ಬೆಂಗಳೂರು ನಾಗರತ್ನಮ್ಮನಂತೂ ತಿರುವಯ್ಯಾರಿನಲ್ಲಿ ತ್ಯಾಗರಾಜಸ್ವಾಮಿಗಳಿಗೆ ಸಲ್ಲಿಸಿದ ಸೇವೆಯಿಂದ ಜನ್ಮಸಾರ್ಥಕ್ಯವನ್ನು ಮಾಡಿಕೊಂಡವರು. ಅವರು ಸಂಸ್ಕೃತ, ಸಾಹಿತ್ಯ, ಸಂಗೀತ ಮೂರರಲ್ಲೂ ನುರಿತವರು. ಅವರು ಬಿಡಾರದ ಕೃಷ್ಣಪ್ಪನವರ ಬಳಿ ಬಂದು ಸೇರುವ ಮುಂಚೆ ತ್ಯಾಗರಾಜರ ನೇರವಾದ ಶಿಷ್ಯ ಬೆಂಗಳೂರು ಮುನಿಸ್ವಾಮಪ್ಪ ಎಂಬ ಪಿಟೀಲು ವಿದ್ವಾಂಸರ ಶಿಷ್ಯೆಯಾಗಿದ್ದರು.

ಇವರನಂತರ ಬಿಡಾರದ ಕೃಷ್ಣಪ್ಪನವರಲ್ಲಿ ಸಂಗೀತವನ್ನು ಕಲಿತವರಲ್ಲಿ ಪ್ರಮುಖರು ನನ್ನ ಗುರುಗಳಾದ ರಾಳ್ಲಪಲ್ಲಿ ಅನಂತಕೃಷ್ಣಶರ್ಮರು, ಚೌಡಯ್ಯನವರ ಸೋದರರಾದ ತಿರುಮಕೂಡಲು ಪುಟ್ಟ ಸ್ವಾಮಯ್ಯನವರು, ಮೃದಂಗದ ಮೂಗಯ್ಯನವರೆಂದು ಹೆಸರಾದ ತಗಡೂರು (ಟಿ. ಎಂ.) ಪುಟ್ಟಸ್ವಾಮಯ್ಯನವರು, ದಶವಾದ್ಯ ಪ್ರವೀಣರೆನಿಸಿದ ಬಿ. ದೇವೇಂದ್ರಪ್ಪನವರು, ಟಿ. ಗುರುರಾಜಪ್ಪನವರು, ಪಿಟೀಲು ವಾದನದಲ್ಲಿ ಇಂದು ಹಿರಿಯರಾಗಿರುವ ಆರ್. ಆರ್. ಕೇಶವಮೂರ್ತಿಯವರು, ಮೊನ್ನೆ ಮೊನ್ನೆ ತೀರಿಕೊಂಡ ಆನೇಕಲ್ಲು ಶಿವರುದ್ರಪ್ಪನವರು (ಅಂಧ ಪಿಟೀಲ್ ವಾದಕರು, ಮೈಸೂರು ಆಸ್ಥಾನ ವಿದ್ವಾಂಸರು), ಮತ್ತು ಜನಪ್ರಿಯ ಗಾಯಕರಾದ ಎ. ಸುಬ್ಬರಾಯರು ಮತ್ತು ಕೊಳಲುವಾದನದಲ್ಲಿ ಹೆಸರಾಗಿದ್ದ ಎ. ಕೆ. ಸುಬ್ಬರಾಯರು.

ಇವರಲ್ಲಿ ತಗಡೂರಿನ ಪುಟ್ಟಸ್ವಾಮಯ್ಯನವರು ತಮ್ಮ ತಂದೆಯವರಾದ ಮರೀಗೌಡರ ಬಳಿಯೇ ಆರಂಭ ಸಂಗೀತ ಶಿಕ್ಷಣವನ್ನೂ, ತಬಲವಾದ್ಯದ ಪರಿಶ್ರಮವನ್ನೂ ಪಡೆದುಕೊಂಡು, ಮುಂದೆ ಮೈಸೂರು



ರಂಗಾಚಾರ್ಯ ರೆಂಬುವವರಿಂದ (ಇವರು ಕೆ. ವಾಸುದೇವಾಚಾರ್ಯರ ಶಿಷ್ಯರು) ಮತ್ತು ಬೆಂಗಳೂರು ಅನಂತ ಶಾಸ್ತ್ರಿಗಳಿಂದ ಹಾಡಿಕೆಯನ್ನು ಕಲಿತು, ಬಿಡಾರಂ ಕೃಷ್ಣಪ್ಪನವರನ್ನು ಸೇರಿದರು. ಕೃಷ್ಣಪ್ಪನವರು ಮೈಸೂರು ಆಸ್ಥಾನವಿದ್ವಾಂಸ ರಾಗಿದ್ದ ಮುತ್ತುಸ್ವಾಮಿ ದೇವರಿಂದ ಇವರಿಗೆ ಮೃದಂಗ ಶಿಕ್ಷಣದ ವ್ಯವಸ್ಥೆ ಮಾಡಿದರು. ಅವರಿಗೆ 'ಸಂಗೀತರತ್ನ', 'ಗಾನಕಲಾಸಿಂಧು', 'ಗಾನಕಲಾರತ್ನ' ಮೊದಲಾದ ಹಲವು ಬಿರುದುಗಳೂ, ಸನ್ಮಾನಗಳೂ ಲಭಿಸಿದುವು. ಬಿಡಾರದ ಕೃಷ್ಣಪ್ಪನವರು ತಮ್ಮ ಸಂಚಾರದಲ್ಲೆಲ್ಲ ಇವರನ್ನು ಜೊತೆಗೆ ಒಯ್ಯುತ್ತಿದ್ದರು.

ಇವರ ಪರಿಚಯ ನನಗಿದ್ದಿತು. ನಾನು ಓದಿದ್ದು ನಂಜನಗೂಡಿನ ಶಾಲೆಯಲ್ಲಿ; ತಗಡೂರು (ಪುಟ್ಟಸ್ವಾಮಯ್ಯನವರ ಊರು) ಅದರ ನೆರೆಯ ಊರೇ. ಆ ಕಾಲದಿಂದಲೂ ಅವರನ್ನು ಬಲ್ಲೆ. ನನಗಿಂತ ತುಂಬ ಹಿರಿಯರಾದರೂ, ಅವರೊಂದಿಗೆ ಸಲುಗೆಯನ್ನು ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದರು. ಬೆಂಗಳೂರಿಗೆ ಅವರು ಬಂದಾಗಲೂ ಕೆಲವೊಮ್ಮೆ ನಮ್ಮ ಮನೆಯಲ್ಲೇ ತಂಗುತ್ತಿದ್ದುದೂ ಉಂಟು. ಅವರ ವಿಚಾರವಾಗಿ ನನಗೆ ಗೌರವ, ಪ್ರೀತಿ ಎರಡೂ ಸಮವಾಗಿಯೇ ಇದ್ದುವು. ತುಂಬ ಸರಳ ಸ್ವಭಾವ, ಸರಸಿಗಳು, ವಿನೋದಪ್ರಿಯರು; ಸ್ನೇಹಪರರು; ನಿರ್ಮಲ ಹೃದಯದವರು. ಅವರೊಂದಿಗೆ ಮಾತನಾಡುವುದೆಂದರೆ ನನಗೆ ಎಲ್ಲಿಲ್ಲದ ಸಂತೋಷ; ಸಂಭಾಷಣೆಯಲ್ಲಿ ಅವರ ಕೌಶಲ ವಿಶೇಷವಾದದ್ದು. ಮೃದಂಗವಾದನಕ್ಕೆ ಹೆಸರಾದವರು; ಆದರೆ ಸೊಗಸಾಗಿ ಹಾಡುತ್ತಿದ್ದರು. ಕನ್ನಡದ ಪದಗಳನ್ನೂ, ಶೃಂಗಾರ ಕೀರ್ತನೆಗಳನ್ನೂ, ಜಾವಳಿಯ ತುಣುಕುಗಳನ್ನೂ

ಅವರ ಬಾಯಿಂದ ಕೇಳಿ ಸಂತೋಷಪಟ್ಟಿದ್ದೇನೆ. ನನ್ನ ಬದುಕಿನ ಭಾಗ್ಯಗಳಲ್ಲಿ ಅವರ ಸಂಪರ್ಕ ಒಂದು.

ನನ್ನ ಗುರುಗಳಾದ ಸಂಗೀತಕಲಾನಿಧಿ ರಾಳ್ಳಪಲ್ಲಿ ಅನಂತ ಕೃಷ್ಣಶರ್ಮರ ವಿಚಾರವಾಗಿ ನಾನು ಬೇರೆಡೆ ವಿವರವಾಗಿಯೇ ಬರೆದಿದ್ದೇನೆ. ಅವರು ಕರಿಗಿರಿರಾಯರಲ್ಲಿ ಮೊದಲು ಸಂಗೀತ ಶಿಕ್ಷಣವನ್ನು ಪಡೆದು ಅನಂತರ ಬಿಡಾರದ ಕೃಷ್ಣಪ್ಪನವರ ಬಳಿ ನಿಂತರು; ವೀಣೆ ಶೇಷಣ್ಣನವರ ನಿಕಟಸಂಪರ್ಕವನ್ನೂ ಪಡೆದುಕೊಂಡರು. ಸಂಗೀತವನ್ನು ಅವರು ವೃತ್ತಿಯಾಗಿ ಹಿಡಿಯಲಿಲ್ಲ; ಪ್ರವೃತ್ತಿಯಾಗಿ ಉಳಿಸಿಕೊಂಡರು. ಸಂಸ್ಕೃತ, ತೆಲುಗು, ಕನ್ನಡ, ಪ್ರಾಕೃತಗಳಲ್ಲಿ ತಳಸ್ಪರ್ಶಿಯಾದ ವಿದ್ವತ್ತು ಅವರದ್ದು; ಸಂಗೀತದಲ್ಲಿ ಶಾಸ್ತ್ರ, ಪ್ರಯೋಗ ಎರಡರಲ್ಲೂ ನಿಷ್ಣಾತರು. ಕವಿಗಳು, ವಾಗ್ಗೇಯಕಾರರು. ಅವರಿಗೆ ಸಂಗೀತ ಕಲಿಯುವ ಅಪೇಕ್ಷೆ ಬಂದುದೇ ಕೃಷ್ಣಪ್ಪನವರ ಸಂಗೀತವನ್ನು ಕೇಳಿದಮೇಲೆ. ಶೇಷಣ್ಣ ಮತ್ತು ಕೃಷ್ಣಪ್ಪ ಇಬ್ಬರಲ್ಲೂ ಇವರಿಗೆ ಗುರುಭಕ್ತಿ; ಆದರೆ ಇವರಿಬ್ಬರೂ ಶರ್ಮರನ್ನು 'ಪಂಡಿತ'ರೆಂದೇ ಕರೆಯುತ್ತಿದ್ದರು. ತಮಗೆ ಸಾಹಿತ್ಯ ವಿಚಾರವಾಗಿ ಏನು ಸಂಶಯ ಬಂದರೂ ಇವರನ್ನು ಕೇಳುವರು. ತಮ್ಮ ಗುರುಗಳ ಪ್ರತಿಭೆಯನ್ನೂ, ಮನೋವೃತ್ತಿಯನ್ನೂ, ಸ್ವಭಾವವನ್ನೂ ಕುರಿತು ಶರ್ಮರು ಬರೆದಿಟ್ಟು ನಮಗೆ ಉಪಕಾರ ಮಾಡಿದ್ದಾರೆ.

ಹೀಗೆ ಆಗಿನ ಸಂಗೀತ ಪ್ರಪಂಚದಲ್ಲಿ ಸಾರ್ವಭೌಮರಂತೆ ಮೆರೆದವರು ವೀಣೆ ಶೇಷಣ್ಣನವರು ಮತ್ತು ಬಿಡಾರದ ಕೃಷ್ಣಪ್ಪನವರು. ಇಬ್ಬರೂ ಮೈಸೂರು ಆಸ್ಥಾನ ವಿದ್ವಾಂಸರು; ಸಮಾನ ಧರ್ಮದ ಗೆಳೆಯರು; ಪರಸ್ಪರ ಮನಸಾರೆ ಮೆಚ್ಚಿಕೊಂಡಿದ್ದವರು. ಕೃಷ್ಣಪ್ಪನವರೇನೋ ಶೇಷಣ್ಣನವರನ್ನು ಗುರುಗಳೆಂದೇ ಆದರಿಸುತ್ತಿದ್ದರು; ಆದರೆ ಶೇಷಣ್ಣನವರು ಕೃಷ್ಣಪ್ಪನವರನ್ನು ಸ್ನೇಹಿತರಂತೆಯೇ ಕಾಣುತ್ತಿದ್ದರು. ಚೌಡಯ್ಯನವರ ಪ್ರತಿಭೆ ಅರಳಲು ಇವರಿಬ್ಬರೂ ಕಾರಣರಾದರು. ಚೌಡಯ್ಯನವರ ಸಾಮರ್ಥ್ಯವನ್ನು ಮೊದಲು ಗುರುತಿಸಿದವರು ಇವರಿಬ್ಬರು. ಇವರ ವಾತ್ಸಲ್ಯ, ಪ್ರೋತ್ಸಾಹಗಳನ್ನು ಚೌಡಯ್ಯನವರು ಎಂದೂ ಸ್ಮರಿಸಿಕೊಳ್ಳುತ್ತಿದ್ದರು.

(೨)

ಪಕ್ಕವಾದ್ಯವಾಗಿ ಪಿಟೀಲು

ಪಿಟೀಲು ಎನ್ನುವ ಕನ್ನಡ ಪದ ಇಂಗ್ಲಿಷಿನ ‘ಫಿಡ್ಲ್’ ಎಂಬುದರ ಅಪಭ್ರಂಶ. ಫಿಡ್ಲ್ ಎನ್ನುವುದೂ ವಯೊಲಿನ್ ಎನ್ನುವುದೂ ಹೆಚ್ಚು ಕಡಮೆ ಪರ್ಯಾಯ ಪದಗಳೇ. ಇದೊಂದು ನಾಲ್ಕು ತಂತಿಗಳ ವಾದ್ಯ; ಕಮಾನಿನಿಂದ ನುಡಿಸುವುದು. ಈ ವಾದ್ಯವನ್ನು ನಿರ್ಮಿಸಿದವನು ಇತಲಿ ದೇಶದ ವಾದ್ಯನಿರ್ಮಾಪಕ ಗಾಸ್ಪರೋ ದ ಸಾಲೋ (೧೫೪೦–೧೬೦೯) ಎಂದು ಹೇಳುತ್ತಾರೆ. ಈ ನಿರ್ಮಾಣದಲ್ಲಿ ಇವನೊಂದಿಗೆ ನೆರವಾದವನು ಆಂದ್ರಿಯಾ ಅಮತಿ. ಸಿದ್ಧವಾದ ತರುಣದಲ್ಲೇ ಇತಲಿಯ ವಾದ್ಯಗೋಷ್ಠಿಯೊಂದರಲ್ಲಿ ಇದರ ಸೇರ್ಪಡೆಯಾಗಿ ಜನಪ್ರೀತಿಯನ್ನು ಪಡೆದುಕೊಂಡಿತಂತೆ. ಆಂದ್ರಿಯಾ ಅಮತಿಯ ಮೊಮ್ಮಗ ನಿಕೋಲೋ ಅಮತಿ ಇತಲಿಯ ಕ್ರಿಮೋನಾ ಎಂಬಲ್ಲಿ ವಯೊಲಿನ್ ತಯಾರಿಕೆಯ ಸಂಸ್ಥೆಯೊಂದನ್ನು ನಡೆಸುತ್ತಿದ್ದಾಗ ಅಲ್ಲಿ ಕೆಲಸಮಾಡುತ್ತಿದ್ದ ಅಂತೋನಿಯೊ ಸ್ಟ್ರಾದಿವಾರಿಯಸ್ (೧೬೪೪–೧೭೩೭) ತನ್ನದೇ ಒಂದು ನಮೂನೆಯ ವಯೊಲಿನ್ ವಾದ್ಯವನ್ನು ರಚಿಸಿದ. ತಾನೇ ಬೇರೊಂದು ಸಂಸ್ಥೆಯನ್ನು ಆರಂಭಮಾಡಿ ಒಂದು ಸಾವಿರಕ್ಕೂ ಮೀರಿ ವಾದ್ಯಗಳನ್ನು (ವಯೊಲಿನ್, ವಯೋಲ, ಚೆಲ್ಲೋ, ಗಿಟಾರ್) ತಯಾರುಮಾಡಿದ. ಅವನು ಹಲವಾರು ಪ್ರಯೋಗಗಳನ್ನು ನಡೆಸಿ ೧೬೯೦ರಲ್ಲಿ ಪರಿಷ್ಕಾರಮಾಡಿ ಸಿದ್ಧಪಡಿಸಿದ ವಯೊಲಿನ್ ಜಗತ್‌ಪ್ರಸಿದ್ಧವಾಯಿತು. ಅವನಿಗೆ ಹನ್ನೊಂದು ಮಂದಿ ಮಕ್ಕಳು; ಎಲ್ಲರೂ ವಯೊಲಿನ್ ತಯಾರಕರೇ! ವಯೊಲಿನ್ ವಾದ್ಯದ ವಿಶ್ವವ್ಯಾಪ್ತಿಗೆ ಇದು ನಿಮಿತ್ತವಾಯಿತು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ದೇಶಗಳಲ್ಲೆಲ್ಲ ವಯೊಲಿನ್ ತಯಾರಿಕೆ ಹರಡಿತು.

ತಿರುವಾಂಕೂರಿನ ಅರಸರೂ, ಸಂಗೀತಪ್ರೇಮಿಗಳೂ ಆಗಿದ್ದ ಪದ್ಮನಾಭದಾಸ ರಾಮವರ್ಮ ಸ್ವಾತಿ ತಿರುನಾಳ್ (೧೮೧೩–೧೮೪೭) ಇಂಗ್ಲಿಷ್ ಆಳರಸರ ಆಶ್ರಿತರಾಗಿದ್ದ ಕಾಲದಲ್ಲಿ ಐರೋಪ್ಯ ಸಂಗೀತದ ಪರಿಚಯವನ್ನು ಪಡೆದುಕೊಂಡರು; ಪಾಶ್ಚಾತ್ಯ ವಿದ್ವಾಂಸರ ಸಂಪರ್ಕವನ್ನೂ ಇರಿಸಿಕೊಂಡಿದ್ದರು. ಇವರು ಇಂಗ್ಲೆಂಡಿನಿಂದ ಮೂರು

ವಯೊಲಿನ್‌ಗಳನ್ನು ತರಿಸಿಕೊಂಡು, ಒಂದನ್ನು ತಮ್ಮ ಆಸ್ಥಾನ ವಿದ್ವಾಂಸರಾಗಿದ್ದ ತಂಜಾವೂರು ನಟ್ಟುವನಾರ್ ವಡಿವೇಲು ಪಿಳ್ಳೆಗೆ ಕೊಟ್ಟರು. ವಡಿವೇಲು ತಂಜಾವೂರು-ಚತುಷ್ಟಯವೆಂದು ಹೆಸರಾದ ಸೋದರರಲ್ಲಿ ಕಡೆಯವರು; ಉಳಿದವರು ಪೊನ್ನಯ್ಯ, ಚಿನ್ನಯ್ಯ ಮತ್ತು ಶಿವಾನಂದಂ. ಇವರೆಲ್ಲರೂ ಮುತ್ತುಸ್ವಾಮಿ ದೀಕ್ಷಿತರ ಶಿಷ್ಯರು. ವಡಿವೇಲು ಶ್ವಾರ್ಟ್ಸ್ ಎಂಬ ಐರೋಪ್ಯ ಪಾದ್ರಿಯ ಬಳಿ ಪಿಟೀಲನ್ನು ಕೊಂಚಮಟ್ಟಿಗೆ ಅಭ್ಯಾಸ ಮಾಡಿದ್ದರು. ಪಿಟೀಲು ಆಗಲೇ ಈಕಡೆ ಬಂದಿದ್ದಿತು.

ಮುತ್ತುಸ್ವಾಮಿ ದೀಕ್ಷಿತರ ತಮ್ಮ ಬಾಲಸ್ವಾಮಿ (ಬಾಲಕೃಷ್ಣ) ದೀಕ್ಷಿತರು (೧೭೮೬—೧೮೫೮) ಈ ವೇಳೆಗಾಗಲೇ ಪಿಟೀಲು ವಾದಕರಾಗಿದ್ದರು. ಅವರ ಅಭಿಮಾನಿಯಾಗಿದ್ದ ಮಣಲಿ ಚಿನ್ನಸ್ವಾಮಿ ಮುದಲಿಯಾರ್ ಎಂಬ ಶ್ರೀಮಂತರು ಮದರಾಸಿನ ಫೋರ್ಟ್-ಸೇಂಟ್-ಜಾರ್ಜ್‌ನೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು. ಅಲ್ಲಿ ಐರೋಪ್ಯ ವಾದ್ಯಗೋಷ್ಠಿ (ಬ್ಯಾಂಡ್) ನಡೆಯುತ್ತಿರುವಾಗ ಬಾಲಸ್ವಾಮಿ ದೀಕ್ಷಿತರನ್ನೂ ತಮ್ಮೊಂದಿಗೆ ಒಯ್ಯುತ್ತಿದ್ದರು. ಬಾಲಸ್ವಾಮಿಗೆ ಪಿಟೀಲುವಾದ್ಯದ ಮೇಲೆ ಕುತೂಹಲ ಒದಗಿತಾಗಿ, ಆ ಬ್ಯಾಂಡಿನಲ್ಲಿದ್ದ ಐರೋಪ್ಯ ವಾದಕನಿಂದಲೇ ಬಾಲಸ್ವಾಮಿಗೆ ಪಿಟೀಲು ಶಿಕ್ಷಣವನ್ನು ಮಣಲಿ ಚಿನ್ನಸ್ವಾಮಿ ದೊರಕಿಸಿಕೊಟ್ಟರು. ಮುತ್ತುಸ್ವಾಮಿ ದೀಕ್ಷಿತರೂ ಈ ವಾದ್ಯವನ್ನು ಮೆಚ್ಚಿಕೊಂಡು, ಅದರಲ್ಲಿ ನುಡಿಸಲು ಅನುಕೂಲವಾಗುವಂತೆ ಶಂಕರಾಭರಣ ರಾಗದಲ್ಲಿ 'ನೋಟುಸ್ವರ'ಗಳನ್ನು ರಚಿಸಿಕೊಟ್ಟರು. ಬಾಲಸ್ವಾಮಿ ಮುಂದೆ ಎಟ್ಟಿಯಾಪುರದ ಆಸ್ಥಾನವಿದ್ವಾಂಸರಾದರು.

ವಡಿವೇಲುವಿನ ಪ್ರಸ್ತಾಪ ಬಂದಿತಷ್ಟೆ. ಸ್ವಾತಿ ತಿರುನಾಳ್ ಮಹಾರಾಜರು ಅವರನ್ನು ತಿರುವಯ್ಯಾರಿನಲ್ಲಿರುತ್ತಿದ್ದ ತ್ಯಾಗರಾಜರ ಬಳಿಗೆ ೧೮೩೦ರ ಸುಮಾರಿಗೆ ಕಳುಹಿಸಿದ ಉಲ್ಲೇಖವಿದೆ. ಅವರು ತ್ಯಾಗರಾಜರೆದುರು ವಯೊಲಿನ್ ವಾದ್ಯವನ್ನು ನುಡಿಸಿದರೆಂದೂ, ತ್ಯಾಗರಾಜರು ಅದನ್ನು ಮೆಚ್ಚಿಕೊಂಡರೆಂದೂ, ತ್ಯಾಗರಾಜರ ಗಾಯನಕ್ಕೆ ಸಹವಾದನವನ್ನು ನುಡಿಸಿ ತೋರಿಸಿದರೆಂದೂ ಹೇಳುತ್ತಾರೆ. ತ್ಯಾಗರಾಜರ ಶಿಷ್ಯ ವಾಲಾಜಾಪೇಟೆ ವೆಂಕಟರಮಣಭಾಗವತರಲ್ಲಿ ಸಂಗೀತವನ್ನು ಕಲಿತ ಬೆಂಗಳೂರು ಮುನಿಸ್ವಾಮಪ್ಪ ಎಂಬುವರೂ ಪಿಟೀಲನ್ನು ಕಲಿತಿದ್ದರು;

ತ್ಯಾಗರಾಜರ ಇನ್ನೊಬ್ಬ ಶಿಷ್ಯ ಮಾನಂಬುಚಾವಡಿ ವೆಂಕಟಸುಬ್ಬಯ್ಯನವರ ಶಿಷ್ಯ ವೆಂಕೋಬರಾವ್ ಎಂಬುವವರೂ ಪಿಟೀಲುವಾದಕರೇ. ನೂರಣಿ ಪರಮೇಶ್ವರ ಭಾಗವತರು ವಡಿವೇಲುವಿನಿಂದ ಪಿಟೀಲು ಕಲಿತವರು.

ಹೀಗೆ ಬಾಲಸ್ವಾಮಿ ದೀಕ್ಷಿತರು, ವಡಿವೇಲು ಪಿಳ್ಳೆ ಇವರ ಮಾರ್ಗದರ್ಶನದಲ್ಲಿ ಹಲವಾರು ಪಿಟೀಲುವಾದಕರು ಕಾಣಿಸಿಕೊಂಡರು. ವರಾಹಪ್ಪಯ್ಯರ್, ತಂಜಾವೂರು ಸುಬ್ಬಯ್ಯರ್, ತಿರುವೆಂಕಾಡು ಶಿವರಾಮಕೃಷ್ಣಯ್ಯರ್ ಮೊದಲಾದವರ ಹೆಸರುಗಳು ಉಳಿದುಬಂದಿವೆ. ವಾದ್ಯವನ್ನು ಕರ್ನಾಟಕ ಸಂಗೀತಕ್ಕೆ ಅಳವಡಿಸಿಕೊಂಡದ್ದೂ ಈ ಕೆಲವರ ಪ್ರಯತ್ನದಿಂದಲೇ.

ಹೀಗೆ ಪಾಶ್ಚಾತ್ಯ ಸಂಪರ್ಕದಿಂದ ಪಿಟೀಲು ನಮ್ಮ ದೇಶಕ್ಕೆ ಬಂದಿತೆನ್ನವುದು ಖಚಿತವಾದ ಮಾತು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ವಯೊಲಿನ್ ಸಿದ್ಧವಾದುದು ಹೇಗೆ, ಅದರ ಹಿನ್ನೆಲೆ ಏನು ಎಂಬ ವಿಚಾರವಾಗಿ ಊಹೆಗಳಿವೆ. ಮೊದಲಿಗೆ ಅದು ಭಾರತ ದೇಶದ ವಾದ್ಯವೇ ಎಂದು ಕೆಲವರ ವಾದ. ರಾವಣಹಸ್ತ (ಅಥವಾ ರಾವಣಾಸ್ತ್ರ) ಎಂಬ ನಮ್ಮ ವಾದ್ಯವೇ ವಯೊಲಿನ್ನಿನ ಮೂಲಾಕೃತಿಯಂತೆ. ರಾಜಸ್ಥಾನದ ಕಡೆ ಈಗಲೂ ಇದು ಜಾನಪದ ವಾದ್ಯವಾಗಿ ಬಳಕೆಯಲ್ಲಿದೆ; ಕಮಾನಿನಿಂದ ನುಡಿಸುವ ತಂತೀವಾದ್ಯವೇ. ಇದರಿಂದಲೇ ಮುಂದೆ ರಬಬ್ ಎಂಬ ಪರ್ಶಿಯನ್ ವಾದ್ಯ ಮೈದಳೆಯಿತೆಂದೂ ಒಂದು ಅಭಿಪ್ರಾಯ. ಸಾರಂಗಿಯ ಸುಧಾರಿತ ರೂಪವೆಂದೂ ಇನ್ನೊಂದು ವಾದ. ನಮ್ಮ ಶಾಸ್ತ್ರಗ್ರಂಥಗಳಲ್ಲೇನೋ ಧನುರ್ವೀಣೆ, ಕೂರ್ಮವೀಣೆ, ರಾವಣಾಸ್ತ್ರ, ಕೋಣ, ಪಿನಾಕವೀಣೆ, ಪರಿವಾದ ಮೊದಲಾದ ವಾದ್ಯಗಳ ಉಲ್ಲೇಖವಿದೆ. ವಾದ್ಯವನ್ನು ಕಮಾನಿನಿಂದ ನುಡಿಸುತ್ತಾರಾಗಿ ಧನುರ್ವೀಣೆ, ಪಿನಾಕವೀಣೆ ಅಥವಾ ಕೋಣ. ಆಮೆಯ ಆಕಾರದಲ್ಲಿರುವುದರಿಂದ ಕೂರ್ಮವೀಣೆ. ಆದರೆ ಇವುಗಳ ಸ್ವರೂಪವೇನು, ಬಳಕೆ ಹೇಗೆ ಎಂಬ ವಿವರಗಳು ದೊರೆಯುವುದಿಲ್ಲ.

ಲಾಲ್‌ಗುಡಿ ಜಯರಾಮನ್ ಅವರು ಈ ವಾದ್ಯವು ತಮಿಳುನಾಡಿನ ಯಾಳ್ ಎಂಬ ಪ್ರಾಚೀನ ವಾದ್ಯದಿಂದ ಬಂದುದೆಂದು ಹೇಳುತ್ತಾರೆ.

ಚೌಡಯ್ಯನವರೂ ಇದು ನಮ್ಮ ವಾದ್ಯವೇ, ಪಾಶ್ಚಾತ್ಯವಾದ್ಯವಲ್ಲ ಎಂದು ಹಟ ಹಿಡಿದಿದ್ದರು. ಹಲವರು ವಿದ್ವಾಂಸರೂ ಈ ಭಾರತೀಯ ವಾದ್ಯವು ಪರ್ಶಿಯಾ, ಅರೇಬಿಯಾ ದೇಶಗಳ ಮೂಲಕ ತುರ್ಕಿಗೆ ಹೋಗಿ, ಅಲ್ಲಿಂದ ಮೆಡಿಟರೇನಿಯನ್ ಸಾಗರದ ಉತ್ತರ ತೀರಕ್ಕೂ, ಆಫ್ರಿಕಾ ದೇಶಗಳಿಗೂ, ಆ ಮೂಲಕ ಸ್ಪೇನ್ ದೇಶಕ್ಕೂ ಹೋಗಿ ಐರೋಪ್ಯವಾದ್ಯವಾಯಿತೆಂದು ಹೇಳುತ್ತಾರೆ.

ಈ ವಾದಗಳಿಗೆ ಸಮರ್ಥನೆಯಾಗಿ ಕೆಲವು ಹಳೆಯ ಶಿಲ್ಪ-ಚಿತ್ರಗಳನ್ನೂ ತೋರಿಸುತ್ತಾರೆ. ಚೌಡಯ್ಯನವರ ತೌರೂರಾದ ತಿರುಮಕೂಡಲಿನಲ್ಲೇ ಅಗಸ್ತ್ಯೇಶ್ವರನ ಗುಡಿಯಲ್ಲಿ ಪಿಟೀಲು ನುಡಿಸುತ್ತ ನಿಂತಿರುವ ಹೆಂಗಳೆಯ ಅರ್ಧಶಿಲ್ಪವೊಂದಿದೆ. ಇದು ಹನ್ನೊಂದನೆಯ ಶತಮಾನದ್ದಂತೆ. ಆ ಪ್ರಾಂತ್ಯದಲ್ಲಿಯೇ ಚಾಮರಾಜನಗರದ ಬಳಿ ಆಲೂರು ಗ್ರಾಮದ ಗುಡಿಯಲ್ಲೂ ಇಂಥದೇ, ಅದೇ ಕಾಲದ ಶಿಲ್ಪವೊಂದಿದೆ. ಇದನ್ನು ಚೌಡಯ್ಯ ನವರು ಧನುರ್ವೀಣೆಯೆಂದು ಗುರುತಿಸಿದ್ದಾರೆ. ಚಿದಂಬರದ ದೇವಸ್ಥಾನದಲ್ಲಿಯೂ ಕುಲೋತ್ತುಂಗ ಮಾಳಿಗೆಯಲ್ಲಿ ಇದೇ ವಾದ್ಯದ ಚಿತ್ರಣವಿದೆ.

ಇದು ಹೇಗಾದರೂ ಇರಲಿ. ಈಗ ನಾವು ಬಳಸುವ ಪಿಟೀಲು ನಮ್ಮ ಸಂಗೀತಕ್ಕೆ ವಾದ್ಯವಾಗಿ ಸೇರಿಕೊಂಡದ್ದೇನೋ ಕ್ರಿಸ್ತಾಬ್ದ ೧೮೦೦ರ ಸುಮಾರಿಗೆ; ಪಾಶ್ಚಾತ್ಯರ ಸಂಪರ್ಕದಿಂದಲೇ. ಶ್ರೀರಂಗಪಟ್ಟಣದ ದರಿಯಾದೌಲತ್ ಅರಮನೆಯಲ್ಲಿ ಭಿತ್ತಿಚಿತ್ರವೊಂದು ಪಿಟೀಲು ನುಡಿಸುತ್ತಿರುವ ಹೆಂಗಸೊಬ್ಬಳನ್ನು ತೋರಿಸುತ್ತದೆ. ಈ ಚಿತ್ರ ಸಿದ್ಧವಾದದ್ದು ೧೭೮೪ರಲ್ಲಿ. ಅದೇ ಊರಿನ ಪ್ರಾಚೀನ ಶ್ರೀರಂಗನಾಥ ದೇವಾಲಯದ ನೆರೆಯಲ್ಲಿ ನಿಂತಿರುವ ತೇರೊಂದರಲ್ಲಿ ಪಿಟೀಲುವಾದಕಿಯ ದಾರುಶಿಲ್ಪವೊಂದೂ ಕಾಣಿಸುತ್ತದೆ . ದರಿಯಾದೌಲತ್‌ನಲ್ಲಿರುವ ಪಿಟಿಲು' ಭಿತ್ತಿಚಿತ್ರವು ನಾಟ್ಯಸಂದರ್ಭವನ್ನು ಸೂಚಿಸುತ್ತದೆ; ತೇರಿನಲ್ಲಿರುವ

ದಾರುಶಿಲ್ಪ ಪಿಟೀಲು ನುಡಿಸುತ್ತ ನರ್ತನಮಾಡುತ್ತಿರುವಂತೆಯೇ ತೋರಿಸುತ್ತದೆ. ತಿರುಮಕೂಡಲು ಗುಡಿಯ ಅರ್ಧಶಿಲ್ಪದಲ್ಲೂ ನರ್ತಕಿಯೇ ಪಿಟೀಲನ್ನು ನುಡಿಸುತ್ತಿದ್ದಾಳೆ. ಚಿದಂಬರದ ಶಿಲ್ಪವೂ ನರ್ತನ ಸಂದರ್ಭದ್ದೇ.

ಇವನ್ನೆಲ್ಲ ನೋಡಿದರೆ ಪಿಟೀಲು ವಾದ್ಯವು ಗಾಯಕರಿಗೆ ಪಕ್ಕ ವಾದ್ಯವಾಗಿ ಕಾಣಿಸಿ ಕೊಳ್ಳುವ ಮೊದಲು ನರ್ತನಕ್ಕೆ ಹಿನ್ನೆಲೆಯ ಸಂಗೀತ ವಾದ್ಯವಾಗಿ ಹೊಂದಿಕೊಂಡಿದ್ದಿತೆಂದೂ, ಈಗಿನ ಭರತನಾಟ್ಯದ ಪೂರ್ವರಂಗವಾದ ಸಾದಿರ್‌ನಾಚ್ ಅಥವಾ ತಾಫೆಯಲ್ಲಿ ಪಿಟೀಲಿನ ಬಳಕೆ ಮೊದಲು ಆಯಿತೆಂದೂ ತೋರುತ್ತದೆ. ವಡಿವೇಲು ಪಿಳ್ಳೈ ನಟುವನಾರ್ ತಾನೆ? ತಂಜಾವೂರು ಚತುಷ್ಟಯದವರೆಲ್ಲ ನಾಟ್ಯದವರೇ. ಮುಂದೆ ಪಿಟೀಲಿನ ಜನಪ್ರೀತಿಗೆ ಕಾರಣರಾದ ಮುತ್ತ್ಯಾಲಪೇಟೆ ಪೊನ್ನುಸ್ವಾಮಿ ಪಿಳ್ಳೈಯ ಬಳಿ ಈಗ ಭರತನಾಟ್ಯದ ಆದಿ ಆಚಾರ್ಯರೆನಿಸಿದ ಪಂದನಲ್ಲೂರು ಮೀನಾಕ್ಷಿಸುಂದರಂ ಪಿಳ್ಳೈಯವರೇ ಪಿಟೀಲನ್ನು ಕಲಿತರು; ಇವರಲ್ಲದೆ ಅವರು 'ವೀಣಾಸರಸ್ವತಿ' ಎಂದು ಪ್ರಸಿದ್ಧರಾದ ಧನಮ್ಮಾಳ್ ಅವರ ಸೋದರಮಾವ ನಟುವನಾರ್ ಅಪ್ಪಾಕಣ್ಣು ಎನ್ನುವವರಿಗೂ ಪಿಟೀಲು ವಾದನದಲ್ಲಿ ಗುರು. ನೆಲ್ಲಿಯಪ್ಪ-ನಟುವನಾರ್ ಎಂಬುವವರೂ ಅವರ ಪಿಟೀಲು ಶಿಷ್ಯರೇ. ಹಾಗೆಯೇ ಪಿಟೀಲು ವಾದನದಲ್ಲಿ ಹೆಸರುಮಾಡಿ ಕಾಂಚೀಪುರಂ ನಾಯನಾ ಪಿಳ್ಳೈಯವರಿಗೂ ಪಕ್ಕವಾದ್ಯ ನುಡಿಸುತ್ತಿದ್ದ ಸೇಯತ್ತೂರು ಸುಂದರೇಶ ಭಟ್ಟರು ಕರೂರು ವೆಂಕಟರಮಣಭಾಗವತರ

ಬಳಿ ಪಿಟೀಲು ಕಲಿಯುತ್ತಿರುವಾಗ ಷಣ್ಮುಗವಡಿವು (ಎಂ. ಎಸ್. ಸುಬ್ಬುಲಕ್ಷ್ಮಿಯವರ ತಾಯಿ) ಅವರ ಸಹಾಧ್ಯಾಯಿನಿಯಾಗಿದ್ದರು. ಆದರೆ ಅವರು ವಿಶೇಷವಾಗಿ ನುಡಿಸುತ್ತಿದ್ದುದು ವೀಣೆಯನ್ನು. ಅವರ ತಾಯಿ ಅಕ್ಕಮ್ಮಾಳ್ ಪಿಟೀಲು ವಿದುಷಿಯಾಗಿದ್ದವರೇ. ನಾಯನಾ ಪಿಳ್ಳೆಯವರ ಅಜ್ಜಿ ತಾಯಮ್ಮಾಳ್ ಪಿಟೀಲನ್ನು ನುಡಿಸುತ್ತಿದ್ದ ಮಹಿಳೆಯರಲ್ಲಿ ಮೊದಲಿಗರು ಎಂದು ತೋರುತ್ತದೆ. ಭಟ್ಟರ ಬಳಿಯೇ ಭರತನಾಟ್ಯದ ಸಾಮ್ರಾಜ್ಞಿಯೆಂದು ಮೆರೆದ ಬಾಲಸರಸ್ವತಿಯೂ ಕೊಂಚ ಕಾಲ ಶಿಷ್ಯವೃತ್ತಿಮಾಡಿದ್ದರು. ವೀಣಾ ಧನಮ್ಮಾಳ್ ಅವರ ಮೊಮ್ಮಗಳು ಅಭಿರಾಮಸುಂದರಿ ಪಿಟೀಲನ್ನು ನುಡಿಸಿ ಪ್ರಸಿದ್ಧರಾದವರು.

ಮೈಸೂರು ಕಡೆಯೂ ಟೀಪುಸುಲ್ತಾನನ ಕಾಲದಲ್ಲಿ (ಎಂದರೆ ೧೭೮೦ ರ ಸುಮಾರಿಗೆ) ಫ್ರೆಂಚ್ ಸೇನೆಯೊಂದಿಗೆ ಬಂದಿದ್ದ ಐರೋಪ್ಯ ವಾದ್ಯವೃಂದ (ಬ್ಯಾಂಡ್) ಇಲ್ಲಿಯವರಿಗೆ ಪಿಟೀಲಿನ ಪರಿಚಯವನ್ನು ಒದಗಿಸಿದ ಮೇಲೆ, ಅದನ್ನು ಒಡನೆಯೇ ಎತ್ತಿಕೊಂಡವರು ನಟುವ ಜನರೇ. ಇಲ್ಲಿಗೆ ತಂಜಾವೂರು ಪಂದನಲ್ಲೂರು ಪಿಳ್ಳೆ ಗುರುಗಳು ಬರತೊಡಗಿದ್ದು ಸುಮಾರು ನೂರು ವರ್ಷಗಳ ಹಿಂದೆ. ಅದಕ್ಕೆ ಮೊದಲು ಮೈಸೂರು, ನಂಜನಗೂಡು, ಕೊಳ್ಳೇಗಾಲ, ತಿರುಮಕೂಡಲು, ಮೂಗೂರು, ನೆಲಮಂಗಲ, ಕೋಲಾರ ಮುಂತಾದ ಕಡೆಗಳಲ್ಲಿ ದೇಶಿಯಾಟ (ದಾಸಿಯಾಟ), ಭರತ ಅಥವಾ ತಾಫೆ ಕಟ್ಟುವ ' ಅಲಂಕಾರದಾಸಿ 'ಯರಿರುತ್ತಿದ್ದರು. ಅವರ ಮೇಳದಲ್ಲಿ ಪಿಟೀಲು ನುಡಿಸುವವರು ಇರುತ್ತಿದ್ದರು. ಕೆಲವರು ಪಿಟೀಲು ವಿದ್ವಾಂಸರು ಗುರುಗಳಾಗಿಯೂ ಇರುತ್ತಿದ್ದರು. ಕೊಳ್ಳೇಗಾಲದ ಅರುಣಾಚಲ ಭಾಗವತರು ತಿರುಮಕೂಡಲು ಸುಂದರಮ್ಮ ಎಂಬ 'ಅಲಂಕಾರದಾಸಿ'ಗೆ ಪಿಟೀಲು ಹೇಳಿಕೊಟ್ಟ ಉಲ್ಲೇಖವಿದೆ. ತಿರುಮಕೂಡಲು ನರಸೀಪುರದ ವೆಂಕಟಸುಬ್ಬಯ್ಯ(೧೮೮೫–೧೯೬೫) ಎಂಬ ಇನ್ನೊಬ್ಬರು ಪಿಟೀಲು ವಿದ್ವಾಂಸರು ನಾಟ್ಯಮೇಳಕ್ಕೆ ಸೇರಿದವರಾದರೂ, 'ಟೈಗರ್' ವರದಾ ಚಾರ್ಯರು, ಕೆ. ವಾಸುದೇವಾಚಾರ್ಯರು ಮೊದಲಾದ ಗಾಯಕರಿಗೆ ಪಕ್ಕವಾದ್ಯ ನುಡಿಸುತ್ತಿದ್ದರು. ಅವರು ಪಿಟೀಲು ಕಲಿತದ್ದು ಅದೇ ಊರಿನ ಶಾಮಣ್ಣ ಎಂಬುವವರ ಬಳಿಯಂತೆ. ಎಂದರೆ ಚೌಡಯ್ಯನವರ

ತೌರೂರಿನಲ್ಲಿ ಪಿಟೀಲು ಕಲಿಕೆಯ ಸಂಪ್ರದಾಯ ಸುಮಾರು ನೂರೈವತ್ತು ವರ್ಷಗಳಷ್ಟು ಹಿಂದೆಯೂ ಇದ್ದಿರಬೇಕು.

ಪಿಟೀಲನ್ನು ಹರಿಕಥಾ ಕಾಲಕ್ಷೇಪಕ್ಕೆ ಬಳಸುತ್ತಿದ್ದುದೂ ಉಂಟು. ಪರೂರು ಸುಂದರಂ ಅಯ್ಯರು (೧೮೯೫–೧೯೭೪) ತಿರುವಾಂಕೂರು ಆಸ್ಥಾನದ ಪಿಟೀಲು ವಿದ್ವಾಂಸರಾಗಿದ್ದವರು; ಈಗಿನ ಪರೂರು ಎಂ. ಎಸ್. ಗೋಪಾಲಕೃಷ್ಣ ಅವರ ತಂದೆ. ಅವರು ಆಗಿನ ಹರಿಕಥಾ ವಿದುಷಿ ಸಿ. ಸರಸ್ವತೀಬಾಯಿಯ ಕಥೆಗಳಿಗೆ ಹಿನ್ನೆಲೆ ವಾದಕರಾಗಿದ್ದರು. ಆಗಿನ ಪ್ರಸಿದ್ಧ ಗಾಯಕರು ಮಧುರೈ ಪುಷ್ಪವನಂ (ಮಧುರೈ ಮಣಿ ಅಯ್ಯರ್‌ರವರ ದೊಡ್ಡಪ್ಪ ಮತ್ತು ಗುರು), ಮತ್ತು ಪಾಲಕ್ಕಾಡು ಅನಂತರಾಮ ಭಾಗವತರಿಗೂ ಪಕ್ಕವಾದ್ಯ ನುಡಿಸುತ್ತಿದ್ದರೆನ್ನಿ. ಅವರ ವಿಚಾರ ಹೇಳುವಾಗ ಇನ್ನೊಂದು ಸಂಗತಿ ನಮಗೆ ಪ್ರಸಕ್ತವಾಗುತ್ತದೆ. ಅಲ್ಲಿಯವರೆಗೆ ಹಿಂದೂಸ್ಥಾನೀ ಸಂಗೀತದವರಿಗೆ ಪಿಟೀಲಿನ ಪರಿಚಯವಿರಲಿಲ್ಲ. ಅವರ ಪಿಟೀಲು ವಾದನಕ್ಕೆ ಮುಂಬಯಿಯ ಶ್ರೀಮಂತರೊಬ್ಬರು ಮಾರುಹೋಗಿ ಅವರನ್ನು ಅಲ್ಲಿಯ ವಿಷ್ಣು ದಿಗಂಬರ ಪಲೂಸ್ಕರ್ ಅವರ ಗಂಧರ್ವ ಮಹಾವಿದ್ಯಾಲಯದಲ್ಲಿ ಪಿಟೀಲು ಶಿಕ್ಷಕರಾಗಿ ಸೇರಿಸಿದರು. ಸುಂದರಂ ಅಯ್ಯರಿಗೇನೋ ಹಿಂದೂಸ್ಥಾನೀ ಸಂಗೀತದ ಪರಿಚಯವಾಯಿತು. ಆದರೆ ಹಿಂದೂಸ್ಥಾನೀ ಗಾಯಕರಿಗೆ ಪಿಟೀಲು ಪಕ್ಕವಾದ್ಯವಾಗಿ ಹಿಡಿಸಲಿಲ್ಲ! ಹೆಚ್ಚೆಂದರೆ ತನಿವಾದ್ಯವಾಗಿ ಉಳಿಯಿತು ಅಷ್ಟೆ.

ಕರ್ನಾಟಕ ಸಂಗೀತದಲ್ಲಿ ಪಿಟೀಲು ಅಗತ್ಯವಾದ ಪಕ್ಕವಾದ್ಯವಾಗಿ ಮಾರ್ಪಟ್ಟದ್ದು ತಿರುಕ್ಕೋಡಿಕಾವಲ್ ಕೃಷ್ಣಯ್ಯರ್‌ರ (೧೮೫೭–೧೯೧೩) ಸಾಹಸದಿಂದ, ಪ್ರತಿಭೆಯಿಂದ, ಪ್ರಭಾವದಿಂದ. ಇವರು ತಂಜಾವೂರಿನವರು; ತಂದೆ ಹರಿಕಥಾಕಾಲಕ್ಷೇಪ ಮಾಡುತ್ತಿದ್ದವರು. ಇವರಿಗೆ ಗಾಯನದಲ್ಲಿ ಮೊದಲ ಶಿಕ್ಷಣ ತಂದೆಯವರಿಂದ, ಮುಂದಿನ ಶಿಕ್ಷಣ ಕೊತ್ತವಾಶಲ್ ವೆಂಕಟರಾಮಯ್ಯನವರಿಂದ. ಆದರೆ ಶಾರೀರ ಕೆಟ್ಟಿತಾಗಿ ವಾದ್ಯಕ್ಕೆ ಶರಣುಹೋಗಬೇಕಾಯಿತು. ಸಾತನೂರು ಪಂಚನದಯ್ಯ ಎಂಬುವರ ಬಳಿ ಪಿಟೀಲು ಕಲಿತರು; ಅನಂತರ ಸುಬ್ಬರಾಯರೆಂಬ ಕನ್ನಡಿಗ ವಿದ್ವಾಂಸರಲ್ಲಿ ಪಾಠಮಾಡಿ ಪರಿಣತಿಯನ್ನು ಪಡೆದರು. ಅವರ ವಾದನ

ಸಾಮರ್ಥ್ಯ, ಮನೋಧರ್ಮದ ಸ್ವಾರಸ್ಯ, ನಾದಮಾಧುರ್ಯ ಇವು ಅವರಿಗೆ ಅಜರಾಮರವಾದ ಕೀರ್ತಿಯನ್ನು ತಂದುಕೊಟ್ಟವು.

ಅಲ್ಲಿಯವರೆಗೆ ಸಂಗೀತ ಸಭೆಗಳಲ್ಲಿ ಪಿಟೀಲು ಅಷ್ಟಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ನರ್ತನ ಮೇಳಗಳಲ್ಲಿ, ಕಥಾಕಾಲಕ್ಷೇಪಗಳಲ್ಲಿ ಅಗತ್ಯವಾಗಿ ಸೇರಿರುತ್ತಿದ್ದಿತು; ಅಲ್ಲಲ್ಲಿ ತನಿ ವಾದ್ಯವಾಗಿಯೂ

ತೋರಿಕೊಳ್ಳುತ್ತಿತ್ತು. ಕೃಷ್ಣಯ್ಯರು ಸಂಪ್ರದಾಯನಿಷ್ಠರು, ಆಚಾರಶೀಲರು, ಶ್ರೋತ್ರಿಯರು, ಅನುಕೂಲಸ್ಥರು; ಗ್ರಾಮದ ಹಿರಿಯ ಮನೆತನದವರು. ಆ ಕಾಲಕ್ಕೆ ಇವರು ನರ್ತನಮೇಳದಲ್ಲಿ ಪಾಲ್ಗೊಳ್ಳುವುದಂತೂ ಆಗದ ಮಾತು; ಕಾಲ ಕ್ಷೇಪಕ್ಕೋ ಎಂದರೆ ಆಡಿಗೆ ಆನೆ ಪರಿಚಾರಿಕೆ ಮಾಡಿದಂತೆ! ಶಾಸ್ತ್ರೀಯ ಸಂಗೀತವಿನಿಕೆಗೆ ವೈದಿಕ ಸಮಾಜದಲ್ಲೂ ಪುರಸ್ಕಾರವಿದ್ದಿತಾಗಿ, ಹಾಡಿಕೆಗೆ ಪಿಟೀಲನ್ನು ಹೊಂದಿಸಿಕೊಂಡರು. ಹಿಂದೆ ವಡಿವೇಲು ಪಿಳ್ಳೆ ತ್ಯಾಗರಾಜಸ್ವಾಮಿಗಳ ಗಾಯನವನ್ನೇ ಪಿಟೀಲಿನಲ್ಲಿ ಅನುಸರಿಸಿರಲಿಲ್ಲವೆ? ಇದರಿಂದ ಕೃಷ್ಣಯ್ಯರಿಗೆ ಜೀವನೋಪಾಯವೂ ಆಯಿತು, ವ್ರತಭಂಗವಾಗುವುದೂ ತಪ್ಪಿತು.

ವೈದಿಕ ಬ್ರಾಹ್ಮಣರೊಬ್ಬರು ಪಿಟೀಲಿಗೆ ಮನಸೋತದ್ದು, ಪಿಟೀಲು ವಾದನವನ್ನೇ ಪ್ರಧಾನವಾಗಿ ಇರಿಸಿಕೊಂಡುದು ಅದೇ ಮೊದಲೆಂದು ತೋರುತ್ತದೆ. ಅವರೆಗೆ ಸಭ್ಯವೆಂಬಂಥ ಸಮಾಜದಲ್ಲಿ ಪಿಟೀಲಿಗಿದ್ದ 'ಸಹವಾಸದೋಷ'ವನ್ನು ತೊಡೆದುಹಾಕಿದವರು ಇವರು. ಪಿಟೀಲಿಗೆ ಮರ್ಯಾದೆಯನ್ನೂ ತಂದುಕೊಟ್ಟರು; ವಾದನದ ಘನತೆಯನ್ನೂ ಹೆಚ್ಚಿಸಿದರು. ಅವರೇನೂ ಸಾಮಾನ್ಯರಲ್ಲ. ಅವರ ಸಾಧಕವೂ ಕಠೋರವಾದದ್ದು. ಪ್ರತಿ ದಿನವೂ ರಾತ್ರಿ ಎರಡು ಗಂಟೆಗೇ ಏಳುವರು, ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಮೂರು ಗಂಟೆಯಿಂದ ಏಳು ಗಂಟೆಯವರೆಗೆ ಕುಳಿತಲ್ಲಿಂದ ಏಳದೆ ಸಾಧಕಮಾಡುವರು. ಹೀಗಾಗಿ ಅವರ

ವಾದನದಲ್ಲಿ ನಾದಸೌಖ್ಯ, ಸ್ವರಶುದ್ಧಿ, ಲಯಬಂಧ, ಕಲ್ಪನಾ ಪ್ರೌಢಿಮೆ ಇವು ಮೇಳವಿಸಿಕೊಂಡು ಸಂಗೀತ ಸಭೆಗೆ ಎಲ್ಲಿಲ್ಲದ ಕಳೆ ಕೊಡುತ್ತಿದ್ದಿತು.

ಆಗಿನ ಸಂಗೀತ ಪ್ರಪಂಚದಲ್ಲಿ ದಿಗ್ಗಜಗಳೆನಿಸಿಕೊಂಡಿದ್ದ ಮಹಾವೈದ್ಯನಾಥಯ್ಯರು, ಪಟ್ಟಣಂ ಸುಬ್ರಹ್ಮಣ್ಯಯ್ಯರು, ಕೋನೇರಿ ರಾಜಪುರಂ ವೈದ್ಯನಾಥಯ್ಯರು, ಕೊಳಲು ಶರಭಶಾಸ್ತ್ರಿಗಳು ಮೊದಲಾದವರಿಗೆಲ್ಲ ಪಕ್ಕವಾದ್ಯ ನುಡಿಸಿ ಸೈ ಎನಿಸಿಕೊಂಡರು. ಆದರೆ ಅವರ ಅದ್ಭುತ ಪ್ರತಿಭೆ ವಿಶೇಷವಾಗಿ ಪ್ರಕಟವಾಗುತ್ತಿದ್ದುದು ತನಿವಿನಿಕೆಗಳಲ್ಲಿ. ನಮ್ಮಲ್ಲಿ ವೀಣೆ ಶೇಷಣ್ಣನವರಿಗೆ ಒದಗಿದ ಜನಪ್ರೀತಿ ಅಲ್ಲಿ ಕೃಷ್ಣಯ್ಯರಿಗೆ ಒದಗಿತು. ಅವರು ಬದುಕಿರುವಾಗಲೇ ಪುರಾಣಪ್ರಸಿದ್ಧಿಯನ್ನು ಪಡೆದುಕೊಂಡರು.

ಅಂದಿನಿಂದ ಶಾಸ್ತ್ರೀಯ ಸಂಗೀತವಿನಿಕೆಗೆ ಪಿಟೀಲು ಸ್ಥಿರವಾಗಿ ನಿಂತಿತು. ಕೃಷ್ಣಯ್ಯರ ಶಿಷ್ಯರಲ್ಲಿ ಶೆಮ್ಮಂಗುಡಿ ನಾರಾಯಣಸ್ವಾಮಿ ಮತ್ತು ತಿರುಕ್ಕೋಡಿಕಾವಲ್ ರಾಮಸ್ವಾಮಯ್ಯರ್ ಎಂಬುವರು ಪ್ರಮುಖರು. ರಾಮಸ್ವಾಮಯ್ಯರೇ ನಮ್ಮ ಕಾಲದ ಹಿರಿಯ ಪಿಟೀಲು ವಿದ್ವಾಂಸರಾಗಿದ್ದ ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೈ (೧೮೯೮–೧೯೭೦) ಯವರ ಗುರು. ಕೃಷ್ಣಯ್ಯರ ನಂತರ ಪಿಟೀಲಿನ ಪ್ರಖ್ಯಾತಿಗೆ ಶ್ರಮಿಸಿದವರು ಮಲೈಕೋಟ್ಟೈ (ತಿರುಚಿ) ಗೋವಿಂದಸ್ವಾಮಿ ಪಿಳ್ಳೈ (೧೮೭೯–೧೯೩೧). ಇವರು ಪಕ್ಕವಾದ್ಯಕ್ಕೂ ಸರಿ, ತನಿ ಕಚೇರಿಗೂ ಸರಿ. ಬದುಕಿರುವವರೆಗೂ ಸಮರಿಲ್ಲದೆ, ಎದುರಿಲ್ಲದೆ, ಮಿಗಿಲೆನಿಸಿದವರಿಲ್ಲದೆ ಮೆರೆದ ಧೀರರು. ಕಾಂಚೀಪುರಂ ನಾಯನಾ ಪಿಳ್ಳೈಯವರ ಪಕ್ಕವಾದ್ಯವಾಗಿ ಪ್ರಸಿದ್ಧರಾದರು. ರಾಮನಾಥಪುರಂ (ಪೂಚಿ) ಶ್ರೀನಿವಾಸಯ್ಯಂಗಾರ್ಯರು (ಅರಿಯಕುಡಿ ರಾಮಾನುಜಯ್ಯಂಗಾರ್ಯರ ಗುರುಗಳು), ಶರಭಶಾಸ್ತ್ರಿಗಳು (ಕೊಳಲು), ಕೋನೇರಿರಾಜಪುರಂ ವೈದ್ಯನಾಥಯ್ಯರು, ಹರಿಕೇಶನಲ್ಲೂರು ಮುತ್ತಯ್ಯ ಭಾಗವತರು (ಮಧುರೆ ಮಣಿ ಅಯ್ಯರ್ ಗುರುಗಳು), ಪಾಲಕ್ಕಾಡು ರಾಮಭಾಗವತರು, ಉಮಯಾಳ್ಪುರಂ ಸ್ವಾಮಿನಾಥಯ್ಯರು, ಪಳಮನೇರಿ ಸ್ವಾಮಿನಾಥಯ್ಯರು, ಸಭೇಶಯ್ಯರು (ಮುಸಿರಿ ಸುಬ್ರಹ್ಮಣ್ಯಯ್ಯರ ಗುರುಗಳು), ಮಹಾರಾಜಪುರಂ ವಿಶ್ವನಾಥಯ್ಯರು, ಚೆಂಬೈ ವೈದ್ಯನಾಥ

ಭಾಗವತರು ಮುಂತಾದ ಘಟಾನುಘಟಿಗಳಿಗೆ ನುಡಿಸಿ ಅವರ ಕಚೇರಿಗೆ ಮೆರುಗು ತಂದರು.

ಪಿಳ್ಳೈಯವರ ವಿದ್ವತ್ತು ಎಷ್ಟು ಅಪಾರವೋ ಅವರ ಮನೋಧರ್ಮ ಅಷ್ಟೇ ಉಜ್ವಲವಾದುದು. ತನಿ ಕಚೇರಿಗಳಲ್ಲಿ ತಾನ ನುಡಿಸು ವಾಗಲಂತೂ

ಅವರ ಪ್ರತಿಭೆ ವಿಶೇಷವಾಗಿ ವ್ಯಕ್ತವಾಗುತ್ತಿದ್ದಿತಂತೆ. ಅವರ ಬದುಕೂ ಧೀರ ಗಂಭೀರವಾದುದು. ಹಣಕ್ಕಾಗಿ ಎಂದೂ ಅವರು ಆಸೆಪಟ್ಟವರಲ್ಲ. ಶುಚಿ–ರುಚಿ ಎರಡೂ ಕೂಡಿದ ಬದುಕು. ಅವರೊಂದಿಗೆ ತನಿ ಕಚೇರಿಗಳಲ್ಲಿ ಸಹವಾದಕರಾಗಿದ್ದವರು ಅವರ ಶಿಷ್ಯ ಮಧುರೆ ಸುಬ್ರಹ್ಮಣ್ಯ ಅಯ್ಯರು (ಜಿ. ಎನ್. ಬಾಲಸುಬ್ರಹ್ಮಣ್ಯಂ ಅವರಿಗೆ ಗುರುಗಳಾದವರು), ಮುಂದೆ ಕರೂರು (ಪಾಪಾ) ವೆಂಕಟರಾಮಯ್ಯ ಎಂಬ ಇನ್ನೊಬ್ಬ ಶಿಷ್ಯರು ಜೊತೆಗೆ ನುಡಿಸುತ್ತಿದ್ದರು. ಪಿಟೀಲು ಸ್ವತಂತ್ರ ವಾದ್ಯವಾಗಿಯೂ ಮೆರೆಯಬಲ್ಲುದು ಎಂಬುದನ್ನು ಖಚಿತಗೊಳಿಸಿದರು ಪಿಳ್ಳೈಯವರು. ಅವರ ಪ್ರಭಾವದಿಂದ ಪಿಟೀಲು ವಾದ್ಯದ ಅಗತ್ಯ, ಸ್ವಾರಸ್ಯ, ರಂಜನೆ ಇವು ನಮ್ಮ ಸಂಗೀತ ಪ್ರಪಂಚದಲ್ಲಿ ನೆಲೆಯಾಗಿ ನಿಂತುವು.

ಅವರನಂತರ ಪಿಟೀಲು ವಾದಕರಲ್ಲಿ ಅಗ್ರಗಣ್ಯರೆನಿಸಿಕೊಂಡವರು ಮರುಂಗಾಪುರಿ ಗೋಪಾಲಕೃಷ್ಣಯ್ಯರು (೧೮೮೩–೧೯೬೮). ಇವರದ್ದು ಪ್ರಮುಖವಾಗಿ ಪಕ್ಕವಾದ್ಯವೇ. ಆಯಾ ಗಾಯಕರ ಮನೋಧರ್ಮ, ಶೈಲಿ, ವೈಶಿಷ್ಟ್ಯಗಳನ್ನು ಚೆನ್ನಾಗಿ ಅರಿತುಕೊಂಡು ಅವುಗಳನ್ನು ಎತ್ತಿತೋರಿಸಲು ಶ್ರಮಿಸುತ್ತಿದ್ದರು; ಅವರ ಅನುಸರಣೆ ಅನ್ಯಾದೃಶವಾಗಿದ್ದಿತಂತೆ. ವಾದನದಲ್ಲಿ ಹಿತ, ಮಿತ, ಖಚಿತ ಮೂರೂ ಇದ್ದುವೆಂದು ಹೇಳುತ್ತಾರೆ. ಗೋವಿಂದಸ್ವಾಮಿ ಪಿಳ್ಳೈಯವರೊಂದಿಗೆ ನುಡಿಸುತ್ತಲೂ ಇದ್ದು ಅವರಿಂದ ತುಂಬ ಪ್ರಭಾವಿತರಾದರು. ಸಂಗೀತ ಸಭೆಗಳು ದೊಡ್ಡದಾಗುತ್ತ ಬಂದುವಾಗಿ ಪಿಟೀಲಿನ ಶಬ್ದ ಎಲ್ಲರಿಗೂ ಕೇಳಿಸುವಂತೆ 'ಫೋನ್

ವಯೊಲಿನ್' ಎಂಬ ವಿಶೇಷ ಸೇರ್ಪಡೆಯೊಂದನ್ನೂ ಮಾಡಿಕೊಂಡಿದ್ದರು. ಎಟ್ಟಿಯಾಪುರದ ರಾಮಚಂದ್ರ ಭಾಗವತರಲ್ಲಿ ಹಾಡಿಕೆಯನ್ನೂ ಅಭ್ಯಾಸ ಮಾಡಿದ್ದರಾಗಿ ಒಮ್ಮೊಮ್ಮೆ ಹಾಡುತ್ತಲೂ ಇದ್ದರು.

ಹಾಗೆಯೇ ಆಂಧ್ರದೇಶದ ಹರಿನಾಗಭೂಷಣಂ ಪಂತುಲು (೧೮೮೮–೧೯೫೯) ಪ್ರಸಿದ್ಧರಾದ ಪಿಟೀಲು ವಿದ್ವಾಂಸ ರಾಗಿದ್ದವರು. ಪಿಟೀಲನ್ನು ನುಡಿಸುತ್ತಲೇ ಹಾಡುತ್ತಲೂ ಇದ್ದರು. ಗಾಯನ ವಾದನಗಳನ್ನು ಒಟ್ಟಿಗೆ ನಡೆಸುತ್ತಿದ್ದ ಇನ್ನೊಬ್ಬರು ಪಿಟೀಲು ವಿದ್ವಾಂಸರೆಂದರೆ ಪಳಮನೇರಿ ಸ್ವಾಮಿನಾಥಯ್ಯರು.

ಅದೊಂದು ತಲೆಮಾರು. ಆ ವೇಳೆಗಾಗಲೇ ಸಂಗೀತ ಕಚೇರಿಯಲ್ಲಿ ಪಿಟೀಲು ಪ್ರಧಾನ ಪಕ್ಕವಾದ್ಯವಾಗಿ ಮೆರೆಯುತ್ತಿತ್ತು. ಆ ಕಾಲದ ಸಂಗೀತ ಸಾರ್ವಭೌಮರೆನಿಸಿದ್ದ ಮಹಾವೈದ್ಯನಾಥಯ್ಯರ (೧೮೪೪–೧೮೯೩) ಕಚೇರಿಗಳಲ್ಲಿ ಸಾಂಬಶಿವಯ್ಯರೆಂಬುವರ ಪಿಟೀಲು ಇದ್ದೇ ಇರುತ್ತಿದ್ದಿತು. ಈ ಸಾಂಬಶಿವಯ್ಯರ ಮಗನೇ ಸಂಗೀತಕಲಾನಿಧಿ ಟಿ. ಎಸ್. ಸಭೇಶಯ್ಯರು (೧೮೭೨–೧೯೪೮); ಚಿದಂಬರದ ರಾಜಾ ಅಣ್ಣಾಮಲೆ ಸಂಗೀತ ವಿದ್ಯಾಲಯದ ಪ್ರಥಮ ಪ್ರಧಾನರಾಗಿದ್ದವರು; ಪ್ರಸಿದ್ಧರಾದ ಮುಸಿರಿ ಸುಬ್ರಹ್ಮಣ್ಯಯ್ಯರ ಗುರುಗಳು. ಪಟ್ಟಣಂ ಸುಬ್ರಹ್ಮಣ್ಯಯ್ಯರೆಂಬ ಇನ್ನೊಂದು ಸಂಗೀತ ದಿಗ್ಗಜ ಆ ಕಾಲದಲ್ಲಿ ಸಂಗೀತ ಪದ್ಧತಿಯನ್ನು ಊರ್ಜಿತಪಡಿಸಿದವರು (೧೮೪೫–೧೯೦೨). ಇವರು ತ್ಯಾಗರಾಜ ಸ್ವಾಮಿಗಳ ಪ್ರಶಿಷ್ಯರು; ಮಾನಂಬುಚಾವಡಿ ವೆಂಕಟಸುಬ್ಬಯ್ಯರ ಶಿಷ್ಯರು. ಇವರ ಕಚೇರಿಗಳಲ್ಲಿ ಶೇಷಯ್ಯರ್ ಎಂಬುವರ ಅಥವಾ ತಿರುಕ್ಕೋಡಿಕಾವಲ್ ಕೃಷ್ಣಯ್ಯರ ಪಿಟೀಲು, ನನ್ನಮಯ್ಯ ಎಂಬುವರ ಢೋಲಕ್, ತುಕಾರಾಮ್ ಎಂಬುವರ ಮೃದಂಗ ಇರುತ್ತಿದ್ದುದು ವಾಡಿಕೆ.

ಇವರಲ್ಲದೆ ಪುದುಕ್ಕೋಟೆ ನಾರಾಯಣಸ್ವಾಮಿ (ಮಲೈಕೋಟ್ಟೈ ಗೋವಿಂದಸ್ವಾಮಿ ಪಿಳ್ಳೆ ಸಮಕಾಲಿಕರು), ಇಲಪ್ಪೂರು ಪೊನ್ನುಸ್ವಾಮಿ ಪಿಳ್ಳೆ (ನಾಯನಾ ಪಿಳ್ಳೆಯವರ ಪಕ್ಕವಾದ್ಯ), ಮುತ್ಯಾಲಪೇಟೆ

ಪೊನ್ನುಸ್ವಾಮಿ, ಸೀರ್ಕಾಳಿ ನಾರಾಯಣಸ್ವಾಮಿ ಪಿಳ್ಳೆ (ಪಂದನಲ್ಲೂರು ಮೀನಾಕ್ಷಿಸುಂದರಂ ಪಿಳ್ಳೆಯವರ ಗುರು), ಸೇಯತ್ತೂರು ಸುಂದರೇಶ ಭಟ್ಟರು (ದಂಡಪಾಣಿ ದೇಶಿಕರು, ಮಧುರೆ ಸೋಮಸುಂದರಂ, ಎಂ. ಎಸ್. ಸುಬ್ಬುಲಕ್ಷ್ಮಿ, ಬಾಲಸರಸ್ವತಿ ಇವರೆಲ್ಲರಿಗೂ ಗುರುಗಳು), ಶೆಮ್ಮಂಗುಡಿ ನಾರಾಯಣಸ್ವಾಮಿ (೧೮೮೯–೧೯೪೪, ಶೆಮ್ಮಂಗುಡಿ ಶ್ರೀನಿವಾಸಯ್ಯರ ಅಗ್ರಜರು ಮತ್ತು ಗುರುಗಳು), ಮಧುರೆ ಸುಬ್ರಹ್ಮಣ್ಯಯ್ಯರು (೧೮೯೭–೧೯೭೨, ತ್ಯಾಗರಾಜರ ಪರಂಪರೆಗೆ ಸೇರಿದ ಕರೂರು ಚಿನ್ನಸ್ವಾಮಿ ಶಿಷ್ಯರು, ಜಿ. ಎನ್. ಬಾಲಸುಬ್ರಹ್ಮಣ್ಯಂ ಅವರಿಗೆ ಗುರುಗಳು), ಟಿ. ಕೆ. ಜಯರಾಮಯ್ಯರು (೧೮೯೪–೧೯೭೧, ಎಂ. ಎಸ್. ಸುಬ್ಬುಲಕ್ಷ್ಮಿಯವರ ಪಕ್ಕವಾದಕರಾಗಿದ್ದ ತಿರುವಳ್ಳೂರು ಸುಬ್ರಹ್ಮಣ್ಯಂ ಅವರ ಗುರುಗಳು), ತಿರುವಾಲಂಗಾಡು ಸುಂದರೇಶಯ್ಯರು (ಶೆಮ್ಮಂಗುಡಿ ನಾರಾಯಣಸ್ವಾಮಿಯವರ ಶಿಷ್ಯರು, ಎಂ. ಎಸ್. ಸುಬ್ಬುಲಕ್ಷ್ಮಿಯವರಿಗೆ ಪಕ್ಕವಾದಕರು) ಮುಂತಾದವರು ಪಿಟೀಲು ಪಕ್ಕವಾದ್ಯವಾಗಿ ಹೇಗೆ ಸಭೆಗೆ ರಂಜನೆಯನ್ನೂ, ಯಶಸ್ಸನ್ನೂ ತರಬಲ್ಲುದು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

ಈ ತಲೆಮಾರಿನಲ್ಲಿ ಪಿಟೀಲುವಾದನ ಕ್ಷೇತ್ರದಲ್ಲಿ ಧ್ರುವತಾರೆಗಳಂತೆ ಕಂಗೊಳಿಸಿದವರು ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೆ (೧೮೯೮–೧೯೭೦), ದ್ವಾರಂ ವೆಂಕಟಸ್ವಾಮಿ ನಾಯುಡು (೧೮೯೩–೧೯೬೪), ಕರೂರು (ಪಾಪಾ) ವೆಂಕಟರಾಮಯ್ಯ (೧೯೦೧–೧೯೭೨) ಮತ್ತು ನಮ್ಮ ಚೌಡಯ್ಯನವರು. ರಾಜಮಾಣಿಕ್ಯಂ ಪಿಳ್ಳೆಯವರು ತಿರುಕ್ಕೋಡಿಕಾವಲ್ ಕೃಷ್ಣಯ್ಯರ ಪ್ರಶಿಷ್ಯರು. ಕರೂರಿನಲ್ಲಿ ಆಲಂಗುಡಿ ನಟೇಶಭಾಗವತರ ಗಾಯನಕ್ಕೆ ಇವರು ೧೯೧೬ರಲ್ಲಿ ನುಡಿಸಿದ ಪಿಟೀಲು ಪಕ್ಕವಾದ್ಯ ಇವರ ಯಶಸ್ಸನ್ನು ಖಚಿತಗೊಳಿಸಿತು: ಅದೇ ಅವರ ಮೊದಲ ಕಚೇರಿ. ನಮ್ಮ ಕಾಲದ ಹಿರಿಯ ಗಾಯಕರೆಲ್ಲ ಇವರ ಪಕ್ಕವಾದ್ಯವನ್ನು ಬಯಸಿದ್ದರು; ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರು, ಮಹಾರಾಜಪುರಂ ವಿಶ್ವನಾಥಯ್ಯರು, ಮುಸಿರಿ ಸುಬ್ರಹ್ಮಣ್ಯಯ್ಯರು, ಮಧುರೆ ಮಣಿ ಅಯ್ಯರು ಮೊದಲಾದವರಿಗೆಲ್ಲ

ಇವರು ಅಚ್ಚುಮೆಚ್ಚು. ಇವರ ಶಿಷ್ಯರಲ್ಲಿ ಪ್ರಮುಖರಾದವರು ಮಾಯವರಂ ಗೋವಿಂದರಾಜಪಿಳ್ಳೆ ಮತ್ತು ಅಭಿರಾಮಸುಂದರಿ.

ಕರೂರು ವೆಂಕಟರಾಮಯ್ಯ (ಪಾಪಾ ವೆಂಕಟರಾಮಯ್ಯ) ಹೀಗೆಯೇ ಸರ್ವಾನುರಾಗವನ್ನು ಪಡೆದುಕೊಂಡ ಪಿಟೀಲು ವಿದ್ವಾಂಸರು. ಆದರೆ

ಅವರು ಯಾರಿಗೆಂದರೆ ಅವರಿಗೆ ಪಕ್ಕವಾದ್ಯ ನುಡಿಸ ಲೊಪ್ಪು ತ್ತಿರಲಿಲ್ಲ. 'ಟೈಗರ್' ವರದಾ ಚಾರ್ಯರು, ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರು, ಮಧುರೆ ಮಣಿ ಅಯ್ಯರು, ಮಹಾರಾಜಪುರಂ ವಿಶ್ವನಾಥಯ್ಯರು ಹೀಗೆ ಮನೋಧರ್ಮವುಳ್ಳ, ಭಾವುಕರಾದ ಗಾಯಕರಿಗೆ ಪಿಟೀಲು ವಾದ್ಯದ ನೆರವನ್ನು ನೀಡುವಾಗ ತಮ್ಮ ಮನೋಧರ್ಮವನ್ನೂ ತೋರಿಸುತ್ತಿದ್ದರು. ತಾನ ನುಡಿಸುವುದರಲ್ಲಿ ಅವರದ್ದು ಎತ್ತಿದ ಕೈ. ಮಲೈಕ್ಕೋಟ್ಟೈ ಗೋವಿಂದಸ್ವಾಮಿ ಪಿಳ್ಳೆಯವರ ಗರಡಿಯಲ್ಲಿ ತಯಾರಾಗಿದ್ದವರು ತಾನೆ ?

ದ್ವಾರಂ ವೆಂಕಟಸ್ವಾಮಿ ನಾಯುಡು ಅವರ ಸ್ಥಾನ ವಿಶಿಷ್ಟವಾದುದು. ಅವರು ಪ್ರಮುಖವಾಗಿ ತನಿವಾದಕರು. ಅವರ ತಂದೆ ವೆಂಕಟರಾಯಲು ಪಿಟೀಲು ವಿದ್ವಾಂಸರು; ಆದರೆ ಹಾಡಿಕೊಂಡು ನುಡಿಸುವುದು ಅವರ ವಾಡಿಕೆ. ವೆಂಕಟಸ್ವಾಮಿಯವರು ಕಲಿತದ್ದು ತಮ್ಮ ಅಣ್ಣ ವೆಂಕಟಕೃಷ್ಣಯ್ಯನವರಲ್ಲಿ. ವೆಂಕಟಕೃಷ್ಣಯ್ಯ ಸಂಪ್ರದಾಯ ಸಂಗೀತವನ್ನು ಮಾತ್ರವಲ್ಲದೆ ಐರೋಪ್ಯ ಸಂಗೀತವನ್ನೂ ಬಲ್ಲವರು; ಪಾಶ್ಚಾತ್ಯ ವಯೊಲಿನ್ ವಾದನದ ಮರ್ಮಗಳನ್ನೆಲ್ಲ ಅರಿತಿದ್ದವರು. ದ್ವಾರಂ ವೆಂಕಟಸ್ವಾಮಿಯವರಿಗೆ ಈ ಎರಡು ಸಂಪ್ರದಾಯಗಳನ್ನೂ ಧಾರೆಯೆರೆದುಕೊಟ್ಟರು. ಮುಂದೆ ವೆಂಕಟಸ್ವಾಮಿ ತಮ್ಮದೇ ವಿಶಿಷ್ಟ ರೀತಿಯಲ್ಲಿ ಪಾಶ್ಚಾತ್ಯ ಸಂಗೀತ, ಹಿಂದೂಸ್ಥಾನೀ ಸಂಗೀತ ಇವೆರಡರ ಕೆಲವು

ರೀತಿ ನೀತಿಗಳನ್ನು ಕರ್ನಾಟಕ ಸಂಗೀತದ ಜಾಯಮಾನಕ್ಕೆ ವಿರೋಧ ವಾಗದಂತೆ ಅಳವಡಿಸಿಕೊಳ್ಳುವುದಾಯಿತು.

"ನನಗೆ ಇರುವವರು ಇಬ್ಬರು ಗುರುಗಳು"ಎಂದು ಆಗಾಗ ಅವರು ಹೇಳುತ್ತಿದ್ದರಂತೆ. ಒಬ್ಬರೇನೋ ಅವರಣ್ಣನಾದ ವೆಂಕಟಕೃಷ್ಣಯ್ಯ, ಇನ್ನೊಬ್ಬರು ಯಾರೆಂದರೆ "ನನ್ನ ಕಿವಿಗಳು" ಎಂದು ಅವರ ಉತ್ತರ. ದೃಷ್ಟಿಪಾಟವ ಸರಿಯಾಗಿರದೆ ಓದು ನಿಂತಾಗ, ತಮ್ಮ ಓಡಿಯಾಟವೂ ಕಷ್ಟವಾಗಿದ್ದಾಗ ಅಣ್ಣನ ನೆರವಿನಿಂದ ಅವರು ನಂದಿಗಾನ ವೆಂಕಣ್ಣ ಪಂತುಲು (ಇವರು ಪಟ್ಟಣಂ ಸುಬ್ರಹ್ಮಣ್ಯಯ್ಯರ ಸಂಗೀತದಿಂದ ತುಂಬ ಪ್ರಭಾವಿತರಾದವರು), ಅವರ ಶಿಷ್ಯ ತುಮುರಾಡ ಸಂಗಮೇಶ್ವರ ಶಾಸ್ತ್ರಿ, ವೀಣೆ ಶೇಷಣ್ಣ, ವೀಣೆ ಧನಮ್ಮಾಳ್, ತಿರುಕ್ಕೋಡಿಕಾವಲ್ ಕೃಷ್ಣಯ್ಯರ್, ಮಲೈಕ್ಕೋಟ್ಟೈ ಗೋವಿಂದಸ್ವಾಮಿ ಪಿಳ್ಳೈ ಇವರ ಸಂಗೀತವನ್ನು ಕೇಳಿ ಮೆಚ್ಚಿಕೊಂಡು ಇವರೆಲ್ಲರ ವೈಶಿಷ್ಟ್ಯಗಳನ್ನು ತಮ್ಮ ಸಂಗೀತದಲ್ಲಿ ಅಳವಡಿಸಿಕೊಂಡರು.

ಕೇಳ್ಮೆಯ ಜೊತೆಗೆ ಸಾಧನೆಯೂ ನಡೆಯಿತು. ಪ್ರತಿವರ್ಷವೂ ಚಳಿಗಾಲದಲ್ಲಿ 'ವೆಯ್ಯಿತ್ರಿಸ್ಥಾಯಿ' ಸಾಧನೆ ಮಾಡುತ್ತಿದ್ದರು. ಪ್ರತಿ ದಿನವೂ ಮೂರು ಸ್ಥಾಯಿಗಳಲ್ಲೂ ಒಂದು ಸಾವಿರ ಬಾರಿ ಅಭ್ಯಾಸಮಾಡಿ ಮೂರೂವರೆ ತಿಂಗಳಲ್ಲಿ ಒಂದು ಲಕ್ಷ ಆವರ್ತಿಯಾಗುವಂತೆ ಸಾಧಕ. ಇದು ಇಡೀ ವರ್ಷ ಅವರ ಪಿಟೀಲು ವಾದನಕ್ಕೆ ನೆರವಾಗುತ್ತಿದ್ದಿತಂತೆ. ಹೀಗೆ ಹಲವಾರು ಸಾಧಕಗಳನ್ನು ನಡೆಸುತ್ತಿದ್ದು ಮನೋಧರ್ಮ, ಸ್ವರಶುದ್ಧಿ, ವಾದನ ಕ್ರಮ, ಸಂಪ್ರದಾಯ ಶುದ್ಧಿ ಎಲ್ಲವನ್ನೂ ವಶಪಡಿಸಿಕೊಂಡಿದ್ದರು. "ಒಂದು ದಿನ ಸಾಧನೆಯನ್ನು ಬಿಟ್ಟರೆ ತನಗೇ ತಿಳಿಯುತ್ತದೆ, ಎರಡು ದಿನ

ಸಾಧನೆಯನ್ನು ಬಿಟ್ಟರೆ ಎಲ್ಲರಿಗೂ ತಿಳಿಯುತ್ತದೆ" ಎಂದು ಹೇಳುತ್ತಿದ್ದರು. ಅವರಿಗೆ ಖಂಜರಿವಾದ್ಯವೂ ತಿಳಿದಿದ್ದು ಲಯಜ್ಞಾನ ಖಚಿತವಾಗಿದ್ದಿತು. ಹೀಗೆ ಇಂಥ ಪ್ರಚಂಡರು ಪಿಟೀಲುವಾದನ ಕ್ಷೇತ್ರದಲ್ಲಿ ಬೆಳಗುತ್ತಿದ್ದಾಗ ಅವರೆಲ್ಲರ ನಡುವೆ ಗಣನೀಯರೆನಿಸಿ ಮೆರೆದರು ನಮ್ಮ ಚೌಡಯ್ಯನವರು.

ಟಿ. ಚೌಡಯ್ಯ

(೩)

ಸಾಧನೆಯ ಸುಳಿಯಲ್ಲಿ

ಮೈಸೂರು ನಗರದಿಂದ ಸುಮಾರು ಇಪ್ಪತ್ತು ಮೈಲಿ ದೂರ ಇರುವ ತಿರುಮಕೂಡಲು ಚೌಡಯ್ಯನವರ ತೌರೂರು. ಸಂಸ್ಕೃತದಲ್ಲಿ ಇದನ್ನು ತ್ರಿಮಹಾಕೂಟ ಎಂದು ಕರೆಯುವುದು ವಾಡಿಕೆ. ಇದನ್ನೇ ಚೌಡಯ್ಯನವರು ತಮ್ಮ ಕೃತಿಗಳಲ್ಲಿ 'ತ್ರಿಮಕುಟ' ಎಂಬ ಅಂಕಿತವಾಗಿ ಇರಿಸಿಕೊಂಡಿದ್ದಾರೆ. ಈ ಹೆಸರಿಗೆ ಕಾರಣ ಇಲ್ಲಿ ಕಾವೇರಿ, ಕಪಿಲಾ, ಸ್ಫಟಿಕಸರೋವರ ಎಂಬ ಮೂರು ನದಿಗಳು ಕೂಡುವುದರಿಂದ. ಕಾವೇರಿ ಮತ್ತು ಕಪಿಲಾ ಎರಡು ನದಿಗಳೇನೋ ಇಲ್ಲಿ ಸೇರುತ್ತವೆ; ಎಲ್ಲರೂ ಕಾಣಬಹುದು. ಸ್ಫಟಿಕಸರೋವರವೆನ್ನುವುದು ಕಾವೇರಿಯಲ್ಲಿ ಅಂತರ್ಗಾಮಿಯಾದುದೆಂದು ಹೇಳುತ್ತಾರೆ. ಕಾವೇರಿ ಮತ್ತು ಕಪಿಲಾ ಎರಡೂ ನದಿಗಳು ಹರಿದು ಬಂದು ಒಟ್ಟಿಗೆ ಕೂಡಿಕೊಳ್ಳುವ ಜಾಗವೇ ತಿರುಮಕೂಡಲು. ಊರಿನ ಒಂದು ಕೊನೆ ಕಾವೇರಿಯ ಕಡೆ, ಇನ್ನೊಂದು ಕೊನೆ ಕಪಿಲೆಯ ಕಡೆ; ನಡುವೆ ನಾಲಗೆಯಂತೆ ಊರು. ಕಪಿಲಾನದಿಯನ್ನು ದಾಟಿದರೆ ನರಸೀಪುರ; ನಂಜನಗೂಡಿಗೆ ಹದಿನೆಂಟು ಮೈಲಿ ದೂರ.

ತಿರುಮಕೂಡಲಿನಲ್ಲಿ ಅಗಸ್ತ್ಯೇಶ್ವರ ದೇವಾಲಯವಿದೆ. ಪ್ರಾಚೀನವಾದ, ವಿಶಾಲವಾದ ಗುಡಿ. ಅಲ್ಲಿ ಪೂಜೆಗೊಳ್ಳುವ ಅಗಸ್ತ್ಯೇಶ್ವರಲಿಂಗ ಮರಳಲಿಂಗ; ಅಗಸ್ತ್ಯ ಋಷಿಗಳು ಪ್ರತಿಷ್ಠೆ ಮಾಡಿದ್ದೆಂದು ಪ್ರತೀತಿ. ಲಿಂಗದ ಮೇಲ್ಭಾಗದಲ್ಲಿ ಹಳ್ಳವಿದ್ದು ಅದರ ಮೇಲೆ ನೀರು ಹಾಕಿದರೆ ಕೆಳಭಾಗಕ್ಕೆ ಒಳಗೇ ಹರಿದು ಬರುತ್ತದೆ. ಗುಡಿಯಲ್ಲಿ ಹನುಮಂತೇಶ್ವರಲಿಂಗವೂ ಇದೆ. ಪ್ರಾಕಾರದಲ್ಲಿ ವ್ಯಾಸರಾಯಸ್ವಾಮಿಗಳು ಪ್ರತಿಷ್ಠೆಮಾಡಿದ ಹನುಮಂತನ ಮೂರ್ತಿಗಳೂ ಇವೆ. ಬ್ರಹ್ಮಾಶ್ವತ್ಥವೆಂಬ ದೊಡ್ಡದೊಂದು ಅರಳೀಮರವೂ ಇದೆ. ವ್ಯಾಸರಾಯಮಠವಿರುವ ಸೋಸಲೆ ಊರಿಗೆ ಪೂರ್ವಕ್ಕೆ ಎರಡು ಮೈಲಿ ದೂರದಲ್ಲಿದೆ. ಕಪಿಲಾನದಿಯ ಆಚೆ ದಡದಲ್ಲಿರುವ ನರಸೀಪುರ ಸುಮಾರು ದೊಡ್ಡ ಊರು; ತಿರುಮಕೂಡಲು ಸಣ್ಣ ಹಳ್ಳಿ.

ಚೌಡಯ್ಯನವರ ಹಿರಿಯರು ತಿರುಮಕೂಡಲಿನವರು. ತಂದೆ ಅಗಸ್ತ್ಯೇಗೌಡರು ಬೇಸಾಯಗಾರರಾದರೂ ಸಾಹಿತ್ಯ, ಸಂಗೀತಗಳಲ್ಲಿ ಅಭಿರುಚಿ ಇದ್ದವರು. ತಾಯಿ ಸುಂದರಮ್ಮ 'ದಾಸಿಯಾಟ್ಟ' ಪಂಗಡದವರು; ಆ ಕಡೆಯೆಲ್ಲ ಹೆಸರಾದ ನರ್ತಕಿ. ಸಂಸ್ಕೃತವನ್ನು ಚೆನ್ನಾಗಿಯೇ ಬಲ್ಲವರು; ಸಂಗೀತದಲ್ಲಿ ವಿಶೇಷವಾದ ಪರಿಶ್ರಮವುಳ್ಳವರು. ಅದೇ ಊರಿನವರಾದ ಪಿಟೀಲು ವೆಂಕಟಸುಬ್ಬಯ್ಯನವರ ಬಳಿ ಕೊಂಚಮಟ್ಟಿಗೆ ಪಿಟೀಲನ್ನೂ ಕಲಿತವರು. ಚೌಡಯ್ಯ ಹುಟ್ಟಿದ್ದು ೧೮೯೫ರ ಜನವರಿ ಮೊದಲ ದಿನದಂದು. ಮೊದಲ ಸಂಗೀತ ಶಿಕ್ಷಣ ತಾಯಿಯಿಂದಲೇ ದೊರಕಿತು.

ಏಳೆಂಟು ವರ್ಷ ವಯಸ್ಸಾದ ಮೇಲೆ ಹುಡುಗನನ್ನು ಶಾಲೆಗೆ ಸೇರಿಸಿದ್ದಾಯಿತು. ತಿರುಮಕೂಡಲಿನಲ್ಲಿ ಈ ಸೌಕರ್ಯವಿರಲಿಲ್ಲ; ಶಾಲೆ ಇದ್ದದ್ದು ಹೊಳೆಯಾಚೆ ನರಸೀಪುರದಲ್ಲಿ. ದಿನವೂ ನದಿಯನ್ನು ದಾಟಿ ಶಾಲೆಗೆ ಹೋಗಬೇಕು; ದೋಣಿಯವನ ಅನುಕೂಲವನ್ನನುಸರಿಸಿ. ಚೌಡಯ್ಯ ಒಂಬತ್ತು ವರ್ಷದವನಿದ್ದಾಗ ನಡೆದ ಒಂದು ಪ್ರಸಂಗ ಇದನ್ನು ತಪ್ಪಿಸಿತು. ಚೌಡಯ್ಯನಿಗೆ ಓದು ಬರಹವೆಂದರೆ ಅಷ್ಟೇನೂ ಆಸಕ್ತಿ ಇರಲಿಲ್ಲ; ಸಂಗೀತವೆಂದರೆ ಪ್ರೀತಿ. ಒಂದು ದಿನ ಶಾಲೆಗೆ ಹೋಗಲು ಸಿದ್ಧನಾಗಿ ನದಿಯ ದಂಡೆಯ ಮೇಲೆ ಕಾದಿದ್ದಾನೆ; ಎಷ್ಟು ಹೊತ್ತಾದರೂ ದೋಣಿ ಬರಲಿಲ್ಲ. ವ್ಯಾಸರಾಯಮಠದ ಅಹೋಬಲಾಚಾರ್ಯ-ರೆಂಬುವರೂ, ಸೋಸಲೆಯಿಂದ ತಿರುಮಕೂಡಲಿಗೆ ಬಂದಿದ್ದವರು, ನರಸೀಪುರಕ್ಕೆ ಹೋಗಲು ದೋಣಿಗಾಗಿ ಕಾದು ನಿಂತಿದ್ದರು. ಆ ದಿನ ಅಲ್ಲಿ ಕಾದಿದ್ದವರು ಇವರಿಬ್ಬರೆ. ಹಿರಿಯರು ಹುಡುಗನನ್ನು ಮಾತನಾಡಿಸಿದರು. ಮಾತಿನ ನಡುವೆ, "ನಿನಗೆ ಓದು ಇಷ್ಟವೋ?" ಎಂದು ಕೇಳಿದಾಗ ಹುಡುಗ ಧೈರ್ಯವಾಗಿ "ಇಲ್ಲ" ಎಂದುತ್ತರ ಕೊಟ್ಟ. ಹಿರಿಯರಿಗೆ ನಗು ಬಂದಿತು: "ಎಲ್ಲಿ ನಿನ್ನ ಕೈ ತೋರಿಸು, ಮಗು" ಎಂದು ಕೇಳಿ ಅವನ ಬಲ ಅಂಗೈ ರೇಖೆಗಳನ್ನು ಪರೀಕ್ಷೆ ಮಾಡಿದರು.

ಸಾಮುದ್ರಿಕ ಶಾಸ್ತ್ರವನ್ನು ಬಲ್ಲ ಅವರು "ಏನೋ ಮಗು, ನಿನಗೆ ಓದು ಹತ್ತುವ ಯೋಗವಿಲ್ಲವಲ್ಲೊ! ಸಂಗೀತದಲ್ಲಿ ಭವಿಷ್ಯವಿದೆ" ಎಂದು ಹೇಳಿದರು. ಹುಡುಗನಿಗೆ ಸಂತೋಷವೇ ಆಯಿತು. ರೋಗಿ ಬಯಸಿದ್ದೂ ಅದೇ, ವೈದ್ಯ ಹೇಳಿದ್ದೂ ಅದೇ. ಆಚಾರ್ಯರು ಅಷ್ಟಕ್ಕೇ ಬಿಡಲಿಲ್ಲ. ಹುಡುಗನ ಮನೆ ಎಲ್ಲಿ, ತಂದೆ ತಾಯಿ ಯಾರು ಎಂದೆಲ್ಲ ವಿಚಾರಿಸಿ ಅವನ ಮನೆಗೆ ಅವನನ್ನು ಕರೆತಂದರು. ಹುಡುಗ ಶಾಲೆಗೆ ಹೋಗದೆ ಹಿಂದಿರುಗಿದನೇಕೆಂದು ತಾಯಿಗೆ ಕುತೂಹಲ. ಮಗ ಓದಿ, ಪರೀಕ್ಷೆಗಳನ್ನು ಪಾಸುಮಾಡಿ, ದೊಡ್ಡ ಕೆಲಸ ಮಾಡಬೇಕೆನ್ನುವ ಕನಸನ್ನು ಕಟ್ಟಿಕೊಂಡಿದ್ದವಳು ಆಕೆ. ಶಾಲೆಯೆಂದರೆ ಮಗನಿಗೆ ಇಷ್ಟವಿರದಿದ್ದುದೂ ಆಕೆಗೆ ತಿಳಿದಿದ್ದಿತು; ಆದರೂ ಓದಲೆಂದು ಬಲವಂತ ಮಾಡುತ್ತಿದ್ದಳು.

ಆಚಾರ್ಯರು ತಾಯಿಯನ್ನು ಕಂಡು, ತಾವು ಹುಡುಗನ ಹಸ್ತರೇಖೆಗಳಲ್ಲಿ ಕಂಡದ್ದನ್ನು ತಿಳಿಯಹೇಳಿದರು. "ಶಾಲೆಯನ್ನು ಬಿಡಿಸಿ, ಸಂಗೀತ ಕಲಿಸಿ; ಅದರಲ್ಲಿ ಹೆಸರುಪಡೆಯುತ್ತಾನೆ" ಎಂದು ಸೂಚಿಸಿದರು. ಅವರ ಮಾತಿಗೆ ಮರ್ಯಾದೆ ಕೊಟ್ಟು ಶಾಲೆಯನ್ನು ಬಿಡಿಸಿದ್ದಾಯಿತು. ಸಂಗೀತದ ಬಾಲಪಾಠವೇನೋ ಮನೆಯಲ್ಲೇ ನಡೆದಿತ್ತು. ಆದರೆ ಹೆಸರು ಬರಲು ಅಷ್ಟು ಸಾಕೇ? ತಾಯಿಗೇನೋ ಸಂಗೀತ ತಿಳಿದಿತ್ತು; ಆದರೆ ನರ್ತನಕ್ಕೆಷ್ಟು ಬೇಕೋ ಅಷ್ಟೆ.

ಮನೆಯಲ್ಲೇ ಪಕ್ಕಣ್ಣನೆಂಬ ಹುಡುಗನೊಬ್ಬನಿದ್ದ; ನೆಂಟ. ಅವನಿಗೆ ಸುಮಾರಾಗಿ ಸಂಗೀತ ಬರುತ್ತಿತ್ತು. ನಾಟಕದ ವರದಾಚಾರ್ಯರ ಕಂಪೆನಿಯಲ್ಲಿ ಪಿಟೀಲು ನುಡಿಸುತ್ತಿದ್ದ. ಸರಿ, ಚೌಡಯ್ಯನನ್ನು ಅವನ ಬಳಿ ಸಂಗೀತ ಶಿಕ್ಷಣಕ್ಕೆ ಬಿಟ್ಟರು. ಚೌಡಯ್ಯ ತುಂಬ ಚುರುಕೆಂದು ಕಂಡುಕೊಳ್ಳಲು ಅವನಿಗೆ ಕಷ್ಟವಾಗಲಿಲ್ಲ. ಅಸೂಯೆ ಚಿಗುರೊಡೆಯಿತು. ಪಾಠ ಹೇಳಿಕೊಡುವುದಿರಲಿ, ಹುಡುಗನ ಮೇಲೆ ಬಗೆಬಗೆಯ ದೂರು

ಶುರುವಾಯಿತು. ಕಡೆಗೆ ಅವನಿಗೆ ಸಂಗೀತ ಎಷ್ಟು ಮಾತ್ರಕ್ಕೂ ದಕ್ಕುವುದಿಲ್ಲವೆಂದು ತಾಯಿಗೆ ತಿಳಿಸಿಬಿಟ್ಟ !

ತಾಯಿಯಾದವಳಿಗೆ ಚಿಂತೆಯಾಗದಿರುವುದೆ? ಆಚಾರ್ಯರ ಮಾತು ಕೇಳಿ ಐದಾರು ವರ್ಷಗಳ ಹಿಂದೆಯೇ ಓದು ತಪ್ಪಿತು; ಈಗ ಸಂಗೀತವೂ ಬಾರದು ಎಂದು ಪಕ್ಕಣ್ಣ ಕೈತೊಳೆದುಕೊಂಡಿದ್ದಾನೆ. ಬೇರೆ ದಾರಿಯೇನು? ಆದರೆ ಆಕೆಯ ಪುಣ್ಯಕ್ಕೆ ಆಕೆಯ ಅಣ್ಣ ಮೈಸೂರಿನಲ್ಲಿ ಉದ್ಯೋಗದಲ್ಲಿದ್ದವರು ಒಮ್ಮೆ ಊರಿಗೆ ಬಂದರು. ಅವರ ಹೆಸರೂ ಚೌಡಯ್ಯನೆಂದೇ. ಎಸ್.ಎಸ್.ಎಲ್.ಸಿ. ಎಂಬ ಹನ್ನೆರಡು ರೂಪಾಯಿ ಪರೀಕ್ಷೆ ಮಾಡಿ, ಸರ್ಕಾರಿ ಇಲಾಖೆಯೊಂದರಲ್ಲಿ ಸಬ್-ಓವರ್ಸಿಯರ್ ಆಗಿ ಮೈಸೂರಿನಲ್ಲಿರುತ್ತಿದ್ದರು. ಅವರೂ ಸಂಗೀತದ ಅಭಿಮಾನಿಗಳು, ರಸಿಕರು, ಸಂಗೀತಗಾರರ ಪರಿಚಯವಿದ್ದವರು. ಅಣ್ಣನೆದುರು ಸುಂದರಮ್ಮ ತಮ್ಮ ಮಗನ ವಿಚಾರವಾಗಿ ದುಗುಡವನ್ನು ತೋಡಿಕೊಂಡರು. ಅಣ್ಣ ಆಕೆಯನ್ನು ಸಮಾಧಾನ ಮಾಡಿ "ನಾನು ಚೌಡನನ್ನು ಮೈಸೂರಿಗೆ ಕರೆದುಕೊಂಡು ಹೋಗುತ್ತೇನೆ. ಈ ಕೊಂಪೆಯಲ್ಲಿದ್ದರೆ ಬೆಳಗಾಗುವುದಿಲ್ಲ. ಅಲ್ಲಿ ಎಲ್ಲಿಯಾದರೂ ಒಳ್ಳೆ ಕಡೆ ಸಂಗೀತ ಶಿಕ್ಷಣದ ವ್ಯವಸ್ಥೆ ಮಾಡುತ್ತೇನೆ" ಎಂದರು. ಮೈಸೂರಿಗೆ ಹೀಗೆ ಚೌಡಯ್ಯ ಬಂದದ್ದೂ ಆಯಿತು.

ಕಾಕತಾಳೀಯದಂತೆ ಈ ಹಿರಿಯ ಚೌಡಯ್ಯನಿಗೆ ಬಿಡಾರದ ಕೃಷ್ಣಪ್ಪನವರ ಪರಿಚಯವಿದ್ದಿತು. ಆದರೆ ಆಗಲಿ, ಬಿಟ್ಟರೆ ಬಿಡಲಿ, ಒಂದು ಮಾತು ಕೇಳಿಯೇ ಬಿಡೋಣವೆಂದು ಇವರು ಹುಡುಗನನ್ನೂ ಜೊತೆಮಾಡಿಕೊಂಡು ಕೃಷ್ಣಪ್ಪನವರ ಮನೆಗೆ ಬಂದರು; "ಈ ಹುಡುಗನಿಗೆ ಸಂಗೀತಪಾಠ ಹೇಳಲು ಸಾಧ್ಯವೇ" ಎಂದು ಕೇಳಿದರು. ಕೃಷ್ಣಪ್ಪನವರು ಅವನ ಹಿನ್ನೆಲೆಯನ್ನು ಸ್ವಲ್ಪ ವಿಚಾರಿಸಿಕೊಂಡು, "ಎಲ್ಲಿ ಮಗು, ಏನಾದರೂ ಹಾಡು, ನೋಡೋಣ" ಎಂದು ಸೂಚಿಸಿದರು. ಸಂಗೀತವನ್ನು ಆಗಲೇ ಅಷ್ಟಿಷ್ಟು ಕಲಿತಿದ್ದ ಹುಡುಗ ಹಾಡಿದ. ಕೃಷ್ಣಪ್ಪನವರು ಕಿವಿಗೊಟ್ಟು

ಕೇಳಿದರು. "ಸ್ವರಜ್ಞಾನವಿದೆ, ಸಂಗೀತ ಕ್ರಮವೂ ತಿಳಿದಿದೆ; ಆದರೆ ಶಾರೀರ ಸೌಖ್ಯ ಇಲ್ಲ. ಹಾಡಿಕೆ ಬೇಡ, ಯಾವುದಾದರೂ ವಾದ್ಯ ನುಡಿಸಲು ಕಲಿಯಲಿ" ಎಂದು ಸೂಚಿಸಿದರು. ಹುಡುಗನ ತಾಯಿಯೂ ಕೊಂಚಮಟ್ಟಿಗೆ ಪಿಟೀಲಿನ ಅಭ್ಯಾಸವನ್ನು ಮಾಡಿದ್ದರೆಂಬುದನ್ನೂ, ಹುಡುಗನು ಪಕ್ಕಣ್ಣನ ಬಳಿ ಸ್ವಲ್ಪ ಪಿಟೀಲಿನ ಶಿಕ್ಷಣವನ್ನು ಪಡೆದಿದ್ದನೆನ್ನುವುದನ್ನೂ ತಿಳಿದು "ಪಿಟೀಲನ್ನೇ ಕಲಿಯಲಿ" ಎಂದು ಸೂಚಿಸಿದುದಲ್ಲದೆ ತಾವು ಹೇಳಿಕೊಡಲೂ ಒಪ್ಪಿದರು.

ಕೃಷ್ಣಪ್ಪನವರು ಗಾಯಕರೆಂದು ಪ್ರಸಿದ್ಧರಾದರೂ ಅವರಿಗೆ ಪಿಟೀಲು, ಕೊಳಲು ಮುಂತಾದ ಹಲವು ವಾದ್ಯಗಳ ಪರಿಶ್ರಮವಿದ್ದಿತು. ಆ ಕಾಲದ ಸಂಗೀತ ವಿದ್ವಾಂಸರೇ ಹಾಗೆ. ಶೇಷಣ್ಣನವರು ಹೆಸರಿಗೆ ವೈಣಿಕ ಶಿಖಾಮಣಿ; ಆದರೆ ಪಿಟೀಲನ್ನು ಚೆನ್ನಾಗಿ ನುಡಿಸುವರು, ಜಲತರಂಗವಾದನವನ್ನು ಅಭ್ಯಾಸ ಮಾಡಿದ್ದರು; ಸ್ವರಬತ್ತು, ತಬಲ ಹೀಗೆ ಹಲವು ವಾದ್ಯಗಳ ಮೇಲೆ ಅವರಿಗೆ ಹಿಡಿತವಿದ್ದಿತು. ಮೈಸೂರು ಸದಾಶಿವರಾಯರ ಬಳಿ ಹಾಡಿಕೆಯನ್ನೂ ಕಲಿತಿದ್ದರು. ತಿರುವಾಂಕೂರಿನಲ್ಲಿ ಸ್ವಾತಿ ತಿರುನಾಳರ ಆಸ್ಥಾನವಿದ್ವಾಂಸರಾಗಿದ್ದ ಪಾಲಕ್ಕಾಡು ಪರಮೇಶ್ವರ ಭಾಗವತರೂ (೧೮೧೫–೧೮೯೨) ಗಾಯಕರು; ಆದರೆ ಪಿಟೀಲು, ವೀಣೆ, ಸ್ವರಬತ್ತು ಮೂರೂ ವಾದ್ಯಗಳನ್ನು ಸೊಗಸಾಗಿ ನುಡಿಸುತ್ತಿದ್ದರು. ಬೆಳಕವಾಡಿ ಶ್ರೀನಿವಾಸಯ್ಯಂಗಾರ್ಯರು (೧೮೮೮–೧೯೫೬) ಹಾಡಿಕೆಯಲ್ಲಿ ಎತ್ತಿದ ಕೈ. ಪುರಂದರದಾಸರ 'ಜಗದೋದ್ಧಾರನ' (ಕಾಪಿ ರಾಗ) ಎಂದು ಆರಂಭವಾಗುವ ದೇವರನಾಮಕ್ಕೆ ಸ್ವರಸಂಯೋಜನೆ ಮಾಡಿದವರೇ ಅವರು; ಅವರು ಹಾಡಿದಂತೆಯೇ ಹಾಡಿ ಮುಂದೆ ಬಿ. ಎಸ್. ರಾಜಯ್ಯಂಗಾರ್ಯರು ಗ್ರಾಮೋಫೋನ್ ರೆಕಾರ್ಡ್ ಮಾಡಿ ಹಾಡನ್ನು ಜನಪ್ರಿಯವಾಗಿಸಿದರು. ಶ್ರೀನಿವಾಸಯ್ಯಂಗಾರ್ಯರು ಪಿಟೀಲನ್ನೂ ನುಡಿಸುತ್ತಿದ್ದುದಲ್ಲದೆ ಹಲವು ಶಿಷ್ಯರನ್ನೂ ತಯಾರು ಮಾಡಿದರು. ಚೌಡಯ್ಯನವರ ಒಡನಾಡಿಗಳಲ್ಲೇ 'ಗಾಯನಗಂಧರ್ವ'ರೆಂದು

ಪ್ರಸಿದ್ಧರಾದ ಚೆಂಬೈ ವೈದ್ಯನಾಥ ಭಾಗವತರು ಪಿಟೀಲನ್ನೂ ನುಡಿಸುತ್ತಿದ್ದರು. ಮಹಾರಾಜಪುರಂ ವಿಶ್ವನಾಥಯ್ಯರು ಮೃದಂಗವನ್ನು ನುಡಿಸುತ್ತಿದ್ದರು. ಕೊಳಲು ವಾದನದಲ್ಲಿ ಮುಗಿಲು ಮುಟ್ಟಿದ ಟಿ. ಆರ್. ಮಹಾಲಿಂಗಂ ಪಿಟೀಲನ್ನು ಕಚೇರಿ ಮಟ್ಟದಲ್ಲೇ ನುಡಿಸುತ್ತಿದ್ದರು. ದ್ವಾರಂ ವೆಂಕಟಸ್ವಾಮಿ ನಾಯುಡು ಖಂಜರಿಯನ್ನೂ ನುಡಿಸುತ್ತಿದ್ದರು.

ಅಂತೂ ಬಿಡಾರದ ಕೃಷ್ಣಪ್ಪನವರು ಚೌಡಯ್ಯನ ಗುರುಗಳಾಗ ಲೊಪ್ಪಿದುದು ಅವನ ಬದುಕಿನಲ್ಲಿ ಬೆಳಕಿನ ಹರವನ್ನು ಮೂಡಿಸಿತು. ಆಗ ಕೃಷ್ಣಪ್ಪನವರೆಂದರೆ ಸಂಗೀತ ಪ್ರಪಂಚದಲ್ಲಿ ಸಿಂಹ. ದಕ್ಷಿಣ ದೇಶದಲ್ಲೆಲ್ಲ ಅವರ ಹೆಸರು ಹರಡಿದ್ದಿತು. ಅವರ ಸಂಗೀತವೆಂದರೆ ಸಂಗೀತಗಾರರೂ ಹಂಬಲಿಸುತ್ತಿದ್ದರು. ಮೈಸೂರು ಆಸ್ಥಾನದಲ್ಲಂತೂ ಅವರು ಸರ್ವಮಾನ್ಯರು; ಶೇಷಣ್ಣನವರನ್ನು ಬಿಟ್ಟರೆ ಕೃಷ್ಣಪ್ಪನವರೇ ಸಂಗೀತ ಕ್ಷೇತ್ರದ ಕುಲಗುರು. ಇಂಥವರ ಬಳಿ ತಿರುಮಕೂಡಲಿನ ಹುಡುಗ ಸಂಗೀತ ಕಲಿಯಲು ತೊಡಗಿದನೆಂದರೆ ಪೂರ್ವಜನ್ಮದ ಸುಕೃತವಲ್ಲವೆ? ತಾಯಿ ಸುಂದರಮ್ಮ ಹಿಗ್ಗಿದರು; ಮಗನ ಭವಿಷ್ಯ ನಿಶ್ಚಿತವಾಯಿತೆಂದು ನೆಮ್ಮದಿಗೊಂಡರು.

ಹಿರಿಯ ಚೌಡಯ್ಯ ಹುಡುಗ ಚೌಡಯ್ಯನನ್ನು ಕೃಷ್ಣಪ್ಪನವರ ಬಳಿ ಕರೆದೊಯ್ದದ್ದು ಆಷಾಢಮಾಸದ ಅಮಾವಾಸ್ಯೆಯಂದು. ಕೃಷ್ಣಪ್ಪನವರು ಪಾಠ ಹೇಳಲು ಒಪ್ಪಿಕೊಂಡಮೇಲೆ, ಹುಡುಗನ ಹಿರಿಯರು "ಪಾಠಕ್ಕೆ ಯಾವತ್ತು ಕರೆದುಕೊಂಡು ಬರಲಿ ?" ಎಂದು ಕೇಳಿದರು. ಗುರುಗಳು ದಿನಶುದ್ಧಿಯನ್ನು ನೋಡಿ ಯಾವುದಾದರೂ ಒಳ್ಳೆಯ ದಿನವನ್ನು ಗೊತ್ತುಮಾಡುವರೆಂದು ಅವರ ಎಣಿಕೆ. ಆದರೆ ಕೃಷ್ಣಪ್ಪನವರು "ಕರೆದುಕೊಂಡು ಬಂದಿದ್ದೀರಲ್ಲಾ, ಈ ಹೊತ್ತೇ ಶುರು ಮಾಡೋಣ. ಎಲ್ಲ ದಿನಗಳೂ ಶುಭದಿನಗಳೇ!" ಎಂದು ಆಗಲೇ ಪಾಠ ಆರಂಭಿಸಿಯೇ ಬಿಟ್ಟರು! ಆಗ ಚೌಡಯ್ಯನಿಗೆ ಹದಿನಾರು ವರ್ಷ ವಯಸ್ಸು. ಪಾಠ ಮೊದಲಾದ ವರ್ಷ ೧೯೧೦. ಗುರುಗಳ ಮನೆಯಲ್ಲೇ ಇದ್ದುಕೊಂಡು ಕಲಿಯುವ ಏರ್ಪಾಟು; ಗುರುಕುಲವಾಸವೇ. ಹಾಗೆ ಆರಂಭವಾದ

ಗುರು–ಶಿಷ್ಯ ಸಂಬಂಧ ಇಪ್ಪತ್ತೊಂದು ವರ್ಷಗಳು, ಎಂದರೆ ಕೃಷ್ಣಪ್ಪನವರು ತೀರಿಕೊಳ್ಳುವವರೆಗೂ ಮುಂದರಿಯಿತು; ಗುರುಗಳು ತೀರಿಕೊಂಡಮೇಲೂ ಚೌಡಯ್ಯನವರ ಗುರುಭಕ್ತಿ ತಾವು ತೀರಿಕೊಳ್ಳುವವರೆಗೂ ಸಾಗಿಬಂದಿತು!

ಚೌಡಯ್ಯನಿಗೆ ಮೈಸೂರು ವಾಸ ಗಟ್ಟಿಯಾಯಿತು. ಬಿಡಾರದ ಕೃಷ್ಣಪ್ಪನವರ ಗುರುಕುಲ ದೊಡ್ಡದು. ಅನೇಕ ವಿದ್ಯಾರ್ಥಿಗಳು, ಹಾಡಿಕೆಯನ್ನು ಕಲಿಯುವವರು, ಬೇರೆ ಬೇರೆ ವಾದ್ಯಗಳನ್ನು ನುಡಿಸಲು ಕಲಿಯುವವರು, ಸಂಗೀತಶಾಸ್ತ್ರವನ್ನು ತಿಳಿಯಬಯಸುವವರು. ಇವರಲ್ಲಿ ಕೆಲವರ ಪ್ರಸ್ತಾಪ ಆಗಲೇ ಬಂದಿದೆ. ಕೃಷ್ಣಪ್ಪನವರು ಎಲ್ಲ ವಿದ್ಯಾರ್ಥಿಗಳಿಗೂ ವೈಯಕ್ತಿಕ ಗಮನವನ್ನು ಕೊಡುವರು; ಹಲವರನ್ನು ತಮ್ಮ ಕಚೇರಿಯಿದ್ದಾಗ ತಮ್ಮೊಂದಿಗೆ ಕರೆದೊಯ್ಯುವರು. ಬೇರೆ ವಿದ್ವಾಂಸರ ಸಂಗೀತವನ್ನೂ ಕೇಳುವಂತೆ ಕಳುಹಿಸುವರು. ಕೇಳ್ಮೆ ಸಂಗೀತದಲ್ಲಿ ತುಂಬ ಮುಖ್ಯವಾದ ನೆರವು ಎಂದು ಅವರ ವಿಶ್ವಾಸ.

ಅವರ ಶಿಷ್ಯವಾತ್ಸಲ್ಯ, ಮೃದುಹೃದಯ, ನಿಷ್ಕಪಟ ಸ್ವಭಾವ, ಮುಕ್ತಮನಸ್ಸಿನಿಂದ ಮಾಡುತ್ತಿದ್ದ ವಿದ್ಯಾದಾನ ಇವುಗಳನ್ನು ಅವರ ಎಲ್ಲ ಶಿಷ್ಯರೂ ಎತ್ತಿ ಹೇಳುತ್ತಾರೆ. ತಂದೆಯು ಮಕ್ಕಳನ್ನು ನೋಡಿಕೊಂಡಂತೆಯೇ ಅವರು ಶಿಷ್ಯರನ್ನು ನೋಡಿಕೊಳ್ಳುತ್ತಿದ್ದರಂತೆ. ಆದರೆ ಪಾಠಕ್ರಮದಲ್ಲಿ ಮಾತ್ರ ಕಠೋರವಾದ ಶಿಸ್ತು. ಶಿಸ್ತಿರದೆ ಸಂಗೀತ ಬರಲಾರದು ಎಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದರಂತೆ. ಒಳ್ಳೆಯ ಸಂಗೀತವೆಂದರೆ ಮೈ, ಮನಸ್ಸು ಎರಡೂ ಹಿಡಿತದಲ್ಲಿರಬೇಕು. ಶಿಷ್ಯರ ದೈಹಿಕ ಶಿಕ್ಷಣಕ್ಕೂ ಅವರು ಗಮನವೀಯುವರು. ಪ್ರತಿಯೊಬ್ಬ ವಿದ್ಯಾರ್ಥಿಯೂ ಮುಂಜಾನೆಯೇ ಎದ್ದು ವ್ಯಾಯಾಮ, ಚಂಕ್ರಮಣ (ಬಿರುಸಿನಿಂದ ನಡೆಯುವುದು), ಪ್ರಾಣಾಯಾಮ, ಕೆಲವು ಯೋಗಾಸನಗಳು ಇವುಗಳಲ್ಲಿ ತೊಡಗಬೇಕು. ಆನಂತರ ಉಪಾಹಾರ ಇತ್ಯಾದಿ ಮುಗಿದಮೇಲೆ ಸಂಗೀತಪಾಠ; ನಡುಹಗಲಿನವರೆಗೂ ನಡೆಯುವುದು.

ಸಾಧಕ ಮಾಡುವಾಗ ನಿರ್ದಿಷ್ಟವಾದ ಕ್ರಮವೊಂದಿದ್ದಿತು; ಯಾವ ವಿದ್ಯಾರ್ಥಿಯೂ ಅದನ್ನು ಮೀರುವಂತಿಲ್ಲ. ಪ್ರತಿದಿನವೂ ಕಡೆಯ ಪಕ್ಷ ಎಂಟು ಅಥವಾ ಒಂಬತ್ತು ಗಂಟೆಗಳು ಅಭ್ಯಾಸ ಮಾಡಬೇಕು. ಅಭ್ಯಾಸಕ್ರಮದಲ್ಲಿ ಸರಳಿ, ಜಂಟಿವರಸೆ, ಅಲಂಕಾರ, ವರ್ಣ ಇವು ಅಗತ್ಯವಾಗಿ ಸೇರಲೇಬೇಕು; ಮತ್ತು ಅವುಗಳನ್ನು ಹಾಡುವಾಗ ಅಥವಾ ವಾದ್ಯದಲ್ಲಿ ನುಡಿಸುವಾಗ ದಿನದಿನವೂ ಉತ್ತಮಗೊಳ್ಳಬೇಕು; ಅಭ್ಯಾಸದ ಲಾಭವನ್ನು ವಿದ್ಯಾರ್ಥಿ ಗಮನಿಸುತ್ತಿರಬೇಕು. ಯಾವುದಾದರೊಂದು ರಾಗವನ್ನು ಹೇಳಿಕೊಟ್ಟಾಗ ಅದರ ಮರ್ಮವನ್ನೆಲ್ಲ ಅಭ್ಯಾಸದಲ್ಲಿ ಅಳವಡಿಸಿಕೊಳ್ಳಬೇಕು. ವಾರಕ್ಕೊಂದು ರಾಗವನ್ನು ಗುರುಗಳು ಹೇಳಿಕೊಡುವುದು. ಅದನ್ನು ವಿದ್ಯಾರ್ಥಿ ಇಡೀ ವಾರ ಅಭ್ಯಾಸ ಮಾಡುವಾಗ ಆ ರಾಗದಲ್ಲೇ ಆಲಾಪನೆ, ಕೃತಿನಿರೂಪಣೆ, ಸ್ವರಪ್ರಸ್ತಾರ, ಪಲ್ಲವಿ, ತಾನ ಇವನ್ನೆಲ್ಲ ಮನದಟ್ಟುಮಾಡಿಕೊಳ್ಳಬೇಕು. ಆ ಸಮಯದಲ್ಲಿ ಬೇರೆ ರಾಗವನ್ನು ಆಲೋಚಿಸುವಂತೆಯೂ ಇಲ್ಲ.

ಒಂದು ಬಾರಿ ಕೃಷ್ಣಪ್ಪನವರು ಚೌಡಯ್ಯನವರಿಗೆ ಖರಹರಪ್ರಿಯ ರಾಗವನ್ನು ಹೇಳಿಕೊಟ್ಟರು; ಒಂದು ವಾರ ಅದನ್ನೇ ಅಭ್ಯಾಸ ಮಾಡಬೇಕು. ನಾಲ್ಕೈದು ದಿನಗಳ ಸಾಧಕ ಮುಗಿದಿತ್ತು. ಮನೆಯಲ್ಲಿ ಮಹಡಿಮೇಲೆ ಚೌಡಯ್ಯ ಸಾಧಕ ಮಾಡುತ್ತಿದ್ದಾರೆ; ಕೆಳಗೆ ಕೃಷ್ಣಪ್ಪನವರು ಯಾರೋ ಬಂದವರೊಂದಿಗೆ ಮಾತನಾಡುತ್ತ ಕುಳಿತಿದ್ದಾರೆ. ಚೌಡಯ್ಯನಿಗೆ ಖರಹರಪ್ರಿಯರಾಗವನ್ನೇ ಮತ್ತೆ ಮತ್ತೆ ನುಡಿಸಿ ಬೇಸರವಾಗಿದ್ದಿತು; ತನಗೇ ತಿಳಿಯದಂತೆ ಅದನ್ನು ನಿಲ್ಲಿಸಿ ಬೇರೊಂದು ರಾಗವನ್ನು ಎತ್ತಿಕೊಂಡರು. ಒಡನೆಯೇ ಕೆಳಗಿನಿಂದ "ಚೌಡಯ್ಯ, ಬಾ ಇಲ್ಲಿ!" ಎಂಬ ಗರ್ಜನೆ ಗುರುಗಳಿಂದ. ಹೆದರಿಕೊಂಡು ಚೌಡಯ್ಯ ಕೆಳಗಿಳಿದು ಬಂದರು. "ಏನೋ ವಿದ್ವಾಂಸ, ಖರಹರಪ್ರಿಯವನ್ನು ಅರೆದು, ತೇದು, ಕುಡಿದು ಜೀರ್ಣಿಸಿಕೊಂಡುಬಿಟ್ಟೆ! ಬೇರೆ ರಾಗವನ್ನು ನೀನೇ ಆರಿಸಿಕೊಳ್ಳುವ ಧೈರ್ಯವೂ ಬಂದುಬಿಟ್ಟಿತು: ಹೋಗು, ಖರಹರಪ್ರಿಯವನ್ನೇ ಅಭ್ಯಾಸ ಮಾಡು!" ಎಂದು ಕೃಷ್ಣಪ್ಪ ಗದರಿಸಿದರು. ಮರುಮಾತಾಡದೆ ಚೌಡಯ್ಯ ಮುಖ ಸಣ್ಣಗೆ ಮಾಡಿಕೊಂಡು ಮೇಲೆ ಬಂದು ಮತ್ತೆ ಖರಹರಪ್ರಿಯ ರಾಗವನ್ನೇ ನುಡಿಸತೊಡಗಿದರು.

ಬಂದಿದ್ದ ಸ್ನೇಹಿತರು ಹೋದಮೇಲೆ ಕೃಷ್ಣಪ್ಪನವರು ಮಹಡಿ ಹತ್ತಿ ಮೇಲೆ ಬಂದರು; ಚೌಡಯ್ಯನ ಕಣ್ಣಲ್ಲಿ ನೀರಿರುವುದನ್ನು ಕಂಡರು. ಒಡನೆಯೇ ಅವರ ಮನಸ್ಸು ಕರಗಿತು. ಹತ್ತಿರ ಬಂದು ಮೃದುವಾಗಿ "ಚೌಡಯ್ಯ, ಗದರಿಸಿದೆನೆಂದು ಬೇಜಾರುಪಟ್ಟುಕೊಂಡೆಯಾ?. ನಿನ್ನ ಒಳ್ಳೆಯದಕ್ಕಲ್ಲವೆ ನಾನು ಹೇಳುವುದು? ಒಂದು ರಾಗದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಎಷ್ಟು ಸಾಧಕ ಮಾಡಬೇಕು ಗೊತ್ತೆ? ಎಲ್ಲ ತಿಳಿಯಿತೆನ್ನುವ ಅಹಂಕಾರವಿದ್ದರೆ ವಿದ್ಯೆ ಹತ್ತುವುದಿಲ್ಲ. ಯಾವುದೇ ರಾಗವಾಗಲಿ ಅಷ್ಟು ಬೇಗ ತನ್ನ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಎಷ್ಟು ಸಾಧಕ ಮಾಡಿದರೆ ಅಷ್ಟು ಒಲಿಯುತ್ತದೆ! ಹೋಗು, ಹೊರಗೆ ಹೋಗಿ ಸ್ವಲ್ಪ ತಿರುಗಾಡಿಕೊಂಡು ಬಾ" ಎಂದು ಹೇಳಿ ಮೈದಡವಿದರು.

ಚೌಡಯ್ಯ ಈ ಪ್ರಸಂಗವನ್ನು ಎಂದೂ ಮರೆಯಲಿಲ್ಲ. ಇಂಥ ಗುರುವನ್ನು ಪಡೆಯಲು ಎಷ್ಟು ಪುಣ್ಯ ಮಾಡಿದ್ದೆನೋ ಎನ್ನುತ್ತಿದ್ದರು. ಎಲ್ಲ ಶಿಷ್ಯರ ಮೇಲೂ ಅವರಿಗೆ ಇದೇ ಕನಿಕರ, ವಿಶ್ವಾಸ, ಶ್ರದ್ಧೆ. ಆದರೆ ಚೌಡಯ್ಯನ ಮೇಲೆ ಸ್ವಲ್ಪ ಹೆಚ್ಚು. ಅವನ ಪ್ರತಿಭೆಯನ್ನು ಅವರು ಗುರುತಿಸಿದ್ದರು; ತನ್ನ ಹೆಸರನ್ನು ಉಳಿಸುವ ಶಿಷ್ಯ ಇವನೇ ಎಂಬುದು ಅವರಿಗೆ ಖಚಿತವಾಗಿದ್ದಿತು. ಆದ್ದರಿಂದ ಈ ಶಿಷ್ಯನ ಓರೆಕೋರೆಗಳನ್ನು ತಿದ್ದುವ ಗೀಳನ್ನು ಹಚ್ಚಿಕೊಂಡರು. ಉಳಿದವರು ಎಂಟು-ಒಂಬತ್ತು ಗಂಟೆಗಳಷ್ಟು ಕಾಲ ಸಾಧಕ ಮಾಡಿದರೆ ಚೌಡಯ್ಯ ಹನ್ನೆರಡು-ಹದಿಮೂರು ಗಂಟೆ ಮಾಡಬೇಕಾಗಿದ್ದಿತು.

ಹೀಗಾಗಿ ಪಾಠ ಆರಂಭಮಾಡಿ ಒಂದು ವರ್ಷ ಮುಗಿಯುವ ವೇಳೆಗೇ ಚೌಡಯ್ಯ ಗುರುಗಳು ಹಾಡುವಾಗ ಪಕ್ಕವಾದ್ಯ ನುಡಿಸುವಷ್ಟು ಪರಿಣತರಾಗಿಬಿಟ್ಟರು. ಮನೆಯಲ್ಲಿ ಎಷ್ಟೋ ಬಾರಿ ನುಡಿಸಿ ಅಭ್ಯಾಸವಾದಾಗ, ಗುರುಗಳು ಸಾರ್ವಜನಿಕ ಕಚೇರಿಗಳಲ್ಲೂ ಚೌಡಯ್ಯನನ್ನೇ ಪಕ್ಕವಾದ್ಯವಾಗಿ ಇರಿಸಿಕೊಳ್ಳತೊಡಗಿದರು. ಮೈಸೂರಿಗೆ ಶಿವಗಂಗೆ ಮಠದ ಸ್ವಾಮಿಗಳು ದಯಮಾಡಿಸಿದ್ದಾಗ, ಅವರ ಸನ್ಮಾನ ಸಮಾರಂಭವೊಂದರಲ್ಲಿ ಬಿಡಾರದ ಕೃಷ್ಣಪ್ಪನವರ ಕಚೇರಿ ಏರ್ಪಡಿಸಿದ್ದರು. ಅವರ ಹಾಡಿಕೆಗೆ ಪಿಟೀಲು ವಾದನವು ಚೌಡಯ್ಯನದೇ. ಅದು ಚೌಡಯ್ಯನವರ ಪ್ರಪ್ರಥಮ ರಂಗಪ್ರವೇಶ. ಒಳ್ಳೆಯ ಸುಸಂಧಿಯೆಂದೂ,

ತಮ್ಮ ಶಿಷ್ಯನಿಗೆ ಸ್ವಾಮಿಗಳ ಆಶೀರ್ವಾದ ದೊರಕಲೆಂದೂ ಕೃಷ್ಣಪ್ಪನವರು ಆಲೋಚಿಸಿದ್ದರು. ಸಭೆ ಚೆನ್ನಾಗಿಯೇ ನಡೆಯಿತು. ಗುರುಗಳ ಎತ್ತರಕ್ಕೆ ಶಿಷ್ಯ ಮುಟ್ಟುವನೆಂದು ಸ್ವಾಮಿಗಳು ಹೇಳಿದರು; ಗುರುಗಳಿಗಂತೂ ತುಂಬ ಸಂತೋಷವಾಯಿತು.

ಅಂದಿನಿಂದ ಕೃಷ್ಣಪ್ಪನವರು ತೀರಿಕೊಳ್ಳುವವರೆಗೂ ಅವರ ಹಾಡಿಕೆಗೆ ಚೌಡಯ್ಯನದೇ ಪಕ್ಕವಾದ್ಯ. ಅದಕ್ಕೆ ಮುಂಚೆ ಮಲೈಕೋಟ್ಟೈ ಗೋವಿಂದಸ್ವಾಮಿ ಪಿಳ್ಳೈ, ಪರೂರು ಸುಂದರಂ ಅಯ್ಯರು, ಮೈಸೂರು ಪಿಟೀಲು ತಾಯಪ್ಪ ಮೊದಲಾದವರು ಅವರಿಗೆ ಪಿಟೀಲು ನುಡಿಸುತ್ತಿದ್ದರು. ಕೃಷ್ಣಪ್ಪನವರು ಆ ಮೊದಲು ತಮಿಳುನಾಡಿನ ಕಡೆ ಸಂಚಾರಕ್ಕೆ ಹೊರಟಾಗ ವಿದ್ಯಾರ್ಥಿ ಚೌಡಯ್ಯನನ್ನೂ ಕರೆದೊಯ್ಯುತ್ತಿದ್ದರು; ಪಕ್ಕವಾದ್ಯವಾಗಿ ಅಲ್ಲ. ಒಮ್ಮೆ ಕೃಷ್ಣಪ್ಪನವರ ಕಚೇರಿಗೆ ತಿರುಕ್ಕೋಡಿಕಾವಲ್ ಕೃಷ್ಣಯ್ಯರ ಪಿಟೀಲು ಪಕ್ಕವಾದ್ಯ. ಚೌಡಯ್ಯ ಗುರುಗಳ ಹಿಂದೆ ಕುಳಿತಿದ್ದು ಕೃಷ್ಣಯ್ಯರ ವಿನಿಕೆಯನ್ನು ನೆಟ್ಟಮನಸ್ಸಿನಿಂದ ಕೇಳಿದರು. ಕೃಷ್ಣಯ್ಯರ ನುಡಿ ಸಾಣಿಕೆಯಲ್ಲಿದ್ದ ಸೌಖ್ಯ, ದಾರ್ಢ್ಯ, ಸುನಾದ ಇವು ಚೌಡಯ್ಯನ ಮನಸ್ಸಿನ ಮೇಲೆ ಅಚ್ಚೊತ್ತಿದುವು; ಅವರ ಗಮಕಪ್ರಯೋಗಗಳು, ಸ್ವರ ಪ್ರಸ್ತಾರಕ್ರಮ, ಕಮಾನನ್ನು ಲೀಲಾಜಾಲವಾಗಿ ಆಡಿಸುವ ರೀತಿ ಇವನ್ನೆಲ್ಲ ತಮಗರಿವಿಲ್ಲದೆಯೇ ಅಳವಡಿಸಿಕೊಂಡರು.

ಹಾಗೆಯೇ ಮತ್ತೊಮ್ಮೆ ಮಲೈಕ್ಕೋಟ್ಟೈ ಗೋವಿಂದಸ್ವಾಮಿ ಪಿಳ್ಳೈ ಕೃಷ್ಣಪ್ಪನವರಿಗೆ ಪಕ್ಕವಾದ್ಯ ನುಡಿಸುವಾಗಲೂ ಚೌಡಯ್ಯ ಅವರ ವಾದನ ಕ್ರಮವನ್ನು ಚೆನ್ನಾಗಿ ಗಮನಿಸಿ ಮನೆಗೆ ಬಂದಮೇಲೆ ಅದನ್ನೇ ಅಭ್ಯಾಸ ಮಾಡಿದರು. ಕೃಷ್ಣಪ್ಪನವರು ಇದಕ್ಕೆಲ್ಲ ಅವಕಾಶ ಮಾಡಿಕೊಟ್ಟುದು ಅವರ ದೊಡ್ಡತನ. ಚೌಡಯ್ಯ ದೊಡ್ಡ ವಿದ್ವಾಂಸನಾಗಿ ಬೆಳೆಯಲು ಅಗತ್ಯವಾದುದನ್ನೆಲ್ಲ ಅವರು ನಿರ್ವಂಚನೆಯಿಂದ ಒದಗಿಸಿದರು. ಎರಡು ಪ್ರಸಂಗಗಳನ್ನು ಚೌಡಯ್ಯನವರು ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳುತ್ತಿದ್ದರು.

ಒಂದು ಪ್ರಸಂಗ ಪ್ರಸನ್ನ ಸೀತಾರಾಮಮಂದಿರದಲ್ಲಿ ನಡೆದದ್ದು. ಕೃಷ್ಣಪ್ಪನವರು ರಸಿಕರಿಗೆ ಉತ್ತಮ ಸಂಗೀತವನ್ನು ಕೇಳುವ ಅವಕಾಶವನ್ನು

ವೀಣೆ ಶೇಷಣ್ಣವರು

ಕಲ್ಪಿಸಿಕೊಡಲೆಂದು ಪ್ರಸನ್ನಸೀತಾರಾಮಮಂದಿರವನ್ನು ಕಟ್ಟಿದ್ದರು. ಮೈಸೂರಿಗೆ ಬರುವ ವಿದ್ವಾಂಸರು ಅರಮನೆಯಲ್ಲಿ ಹಾಡಿಯೋ, ನುಡಿಸಿಯೋ ಹೋಗುತ್ತಾರೆ; ಅರಮನೆಯ ಆವರಣದಲ್ಲಿ ಸಾರ್ವಜನಿಕರಿಗೆ ಪ್ರವೇಶವಿಲ್ಲ. ಊರಿನ ರಸಿಕರಿಗೆ ಈ ಸಂಗೀತ ಮುಟ್ಟುವ ಬಗೆ ಹೇಗೆ?

ಇದನ್ನು ಆಲೋಚಿಸಿ ಶೇಷಣ್ಣನವರೂ, ಕೃಷ್ಣಪ್ಪನವರೂ ಬೇರೆ ವ್ಯವಸ್ಥೆ ಮಾಡಿದ್ದರು. ಮೈಸೂರಿಗೆ ಬಂದ ಹಿರಿಯ ಸಂಗೀತಗಾರರು ಶೇಷಣ್ಣನವರನ್ನು ಕಾಣದೆ, ತಮ್ಮ ಪ್ರತಿಭೆಯನ್ನೂ, ವಿದ್ವತ್ತನ್ನೂ ಅವರಿಗೆ ತೋರಿಸದೆ ಮಹಾರಾಜರೆದುರು ಹೋಗುವಹಾಗಿಲ್ಲ. ಅವರ ಸಂಗೀತವಿನಿಕೆ ಶೇಷಣ್ಣನವರ ಮನೆಯಲ್ಲಿ ಮೊದಲು ನಡೆಯಬೇಕು. ಈ ವಿನಿಕೆಗೆ ರಸಿಕರು ಯಾರಾದರೂ ಹೋಗಬಹುದು, ಜಾಗವಿದ್ದಲ್ಲಿ ಕೂಡಬಹುದು. ಅಧಿಕಾರಿಗಳು, ಶ್ರೀಮಂತರು, ಪ್ರಭಾವಶಾಲಿಗಳು, ಸಾಮಾನ್ಯ ಜನರು ಎಂಬ ವಿವೇಚನೆಯಾಗಲಿ, ತಾರತಮ್ಯವಾಗಲಿ ಏನೂ ಇರದು. ಯಾರು ಬರುವುದಕ್ಕೂ, ಹೋಗುವುದಕ್ಕೂ ಶೇಷಣ್ಣನವರ ನಿರ್ಬಂಧವೇನಿರಲಿಲ್ಲ.

ಆದರೆ ಶೇಷಣ್ಣನವರದ್ದು ಮನೆ. ನಡುಮನೆಯಲ್ಲೇ ಸಂಗೀತ ಸಭೆಗಳು. ಅದೇನೂ ದೊಡ್ಡ ಸಭಾಭವನವಲ್ಲ; ಬಹುಮಂದಿ ಕೂತು ಕೇಳ

ಬಹುದಾದುದಲ್ಲ. ಒಳಗೆ ಹೋಗಲು ಸಾಧ್ಯವಾಗದೆ ಮನೆಯ ಹೊರಗೇ ಜನರ ಪರಿಷೆ ನೆರೆದಿರುತ್ತಿದ್ದಿತು. ಶೇಷಣ್ಣನವರು ಏನು ತಾನೆ ಮಾಡಿಯಾರು? ಕೃಷ್ಣಪ್ಪನವರು ಸಾರ್ವಜನಿಕರ ಸಲುವಾಗಿ, ರಸಿಕರೆಲ್ಲರ ಉಪಯೋಗಕ್ಕಾಗಿ ದೊಡ್ಡದೊಂದು ಸಭಾಭವನವನ್ನೇ ಕಟ್ಟಿಸುವ ಮನಸ್ಸು ಮಾಡಿದರು. ತಮ್ಮ ಸಂಪಾದನೆಯನ್ನೆಲ್ಲ ಅದಕ್ಕಾಗಿಯೇ ಮುಡಿಪಿಟ್ಟು ಪ್ರಸನ್ನ ಸೀತಾರಾಮಮಂದಿರವನ್ನು ವ್ಯವಸ್ಥೆ ಮಾಡಿದರು. ಅವರು ರಾಮಭಕ್ತರು: ದೈವವನ್ನು ದೃಢವಾಗಿ ನಂಬಿದ್ದವರು. ಸಂಗೀತವನ್ನೂ ಭಗವದುಪಾಸನೆಯೆಂದು ಬಗೆದವರು. ಹೀಗಾಗಿ ರಾಮಮಂದಿರವು ಉತ್ಸವ ಸಂದರ್ಭದಲ್ಲೂ, ಸಂಗೀತವಿನಿಕೆಯ ಸಂದರ್ಭದಲ್ಲೂ ಊರಿನಲ್ಲಿ ಪ್ರಸಿದ್ಧವಾಯಿತು. ಊರಿನ ಮತ್ತು ಪರ ಊರಿನ ವಿದ್ವಾಂಸರ ಕಚೇರಿಗಳನ್ನು ಅಲ್ಲಿ ಏರ್ಪಡಿಸುತ್ತಿದ್ದರು. ಎಲ್ಲರಿಗೂ ಅಲ್ಲಿ ಸ್ವಾಗತ; ಪ್ರವೇಶ ಶುಲ್ಕವಿಲ್ಲ, ಅಧಿಕಾರದ ಒತ್ತಡವಿಲ್ಲ; ರಸಿಕರಾದರೆ ಸಾಕು.

ಮೊದಲನೆಯ ಪ್ರಸಂಗ ಪ್ರಸನ್ನ ಸೀತಾರಾಮಮಂದಿರದಲ್ಲಿ ನಡೆದದ್ದು ಎಂದು ಹೇಳಿದೆನಲ್ಲ. ಆದಿನ ಅಲ್ಲಿ ಬಿಡಾರದ ಕೃಷ್ಣಪ್ಪನವರದ್ದೇ ಕಚೇರಿ; ಶಿಷ್ಯ ಚೌಡಯ್ಯನ ಪಿಟೀಲು ಪಕ್ಕವಾದ್ಯ. ಸೊಗಸಾದ ಮನೋಧರ್ಮದಿಂದ ಕೃಷ್ಣಪ್ಪನವರು ರಾಗಾಲಾಪನೆ ಮಾಡುತ್ತಿದ್ದಾರೆ; ತುಂಬಿದ ಸಭೆಯಲ್ಲಿದ್ದವರೆಲ್ಲ ಅವರ ಹಾಡಿಕೆಯ ಮೋಡಿಯಲ್ಲಿ ಮೈಮರೆತು, ಇಂಪಾದ ಸೊಂಪಾದ ನಾದಮಾಧುರ್ಯವನ್ನು ಅನುಭವಿಸುತ್ತಿದ್ದಾರೆ. ಅವರ ಹಾಡಿಕೆಯನ್ನನುಸರಿಸುತ್ತಿದ್ದ ಚೌಡಯ್ಯ ದುಡುಕಿಯೋ ಕೈತಪ್ಪಿಯೋ ಇದ್ದಕ್ಕಿದ್ದಂತೆ ಪಿಟೀಲಲ್ಲಿ ಕರಕರ ಶಬ್ದ ಹೊರಡಿಸಿಬಿಟ್ಟರು. ಅಪಸ್ವರ ರಸಭಂಗವನ್ನುಂಟುಮಾಡಿತು.

ಕೃಷ್ಣಪ್ಪ ಹಾಡಿಕೆಯನ್ನು ಒಡನೆಯೇ ನಿಲ್ಲಿಸಿ, ಸಿಟ್ಟಿನಿಂದ ಚೌಡಯ್ಯನ ಕಪಾಳಕ್ಕೆ ಒಂದು ಪೆಟ್ಟು ಕೊಟ್ಟರು. ಚೌಡಯ್ಯ ತಲೆತಗ್ಗಿಸಿ ನುಡಿಸಾಣಿಕೆಯನ್ನು ಮುಂದರಿಸಿದರು; ಕೃಷ್ಣಪ್ಪನವರೂ ಸಿಟ್ಟನ್ನು ತಡೆದುಕೊಂಡು ಆಲಾಪನೆಯನ್ನು ಮುಂದರಿಸಿದರು. ಕಚೇರಿಯೇನೋ ಮುಗಿಯಿತು. ಆದರೆ ಒಳ್ಳೆಯ ಸಂಗೀತದಲ್ಲಿ ಚೌಡಯ್ಯ ಎಡವಿದ್ದು, ತುಂಬಿದ ಸಭೆಯಲ್ಲಿ ಕೃಷ್ಣಪ್ಪನವರು ಚೌಡಯ್ಯನಿಗೆ ಅವಮಾನಮಾಡಿದ್ದು, ಮುಂದೆ ಯಾವ ರೂಪ ತಳೆಯುವುದೋ ಎಂದು ಹಲವರು

ಕುತೂಹಲಗೊಂಡರು. ಕೃಷ್ಣಪ್ಪನವರ ಗುರುಕುಲವನ್ನು ಚೌಡಯ್ಯ ಬಿಟ್ಟುಹೋಗಬಹುದೆಂದು ಕೆಲವರು ಊಹಿಸಿದ್ದರು. ಆದರೆ ಅಂದು ಕಚೇರಿ ಮುಂದುವರಿದಾಗಲೂ, ಕಚೇರಿ ಮುಗಿದಮೇಲೂ ಚೌಡಯ್ಯ ಹಸನ್ಮುಖರಾಗಿಯೇ ಇದ್ದರು; ತನ್ನನ್ನು ಗುರುಗಳು ಅವಮಾನಕ್ಕೆ ಈಡುಮಾಡಿದರೆಂದು ಆತ ಬಗೆದಂತೆಯೇ ಕಾಣಲಿಲ್ಲ. ಗುರುಗಳಾದರೋ ಕಚೇರಿ ಮುಗಿದೊಡನೆ ಚೌಡಯ್ಯನನ್ನು ಹತ್ತಿರ ಕರೆದು "ಪೆಟ್ಟಾಯಿತೆ, ಮಗೂ?" ಎಂದು ಕೇಳಿದರು; ಅವರ ಕಣ್ಣು ಒದ್ದೆಯಾಗಿತ್ತು! ಚೌಡಯ್ಯ "ಇಲ್ಲ ಗುರುಗಳೆ!" ಎಂದುತ್ತರ ಕೊಟ್ಟರು. ಕೃಷ್ಣಪ್ಪನವರು "ಮಗೂ, ದುಡುಕಿಬಿಟ್ಟೆ. ಸಭೆಯಲ್ಲಿ ಹಾಗೆ ನಿನ್ನನ್ನು ಅವಮಾನ ಮಾಡಬಾರದಾಗಿತ್ತು. ನಾನೇನು ಮಾಡಲಿ? ಅಪಸ್ವರವನ್ನು ನಾನು ಸಹಿಸಲಾರೆ!" ಅವರು ಮಾತು ಮುಗಿಸುವುದರಲ್ಲೇ ಚೌಡಯ್ಯ "ಗುರುಗಳೇ, ನೀವು ಮಾಡಿದ್ದು ನನ್ನ ಹಿತಕ್ಕಾಗಿಯೇ ಅಲ್ಲವೆ? ಮುಂದೆ ಎಚ್ಚರವಾಗಿರುತ್ತೇನೆ. ನೀವು ಬೇಜಾರುಪಟ್ಟುಕೊಳ್ಳಬಾರದು. ನಡೆದದ್ದು ನನ್ನ ಅವಮಾನವಲ್ಲ; ಅದು ನನಗೆ ಆಶೀರ್ವಾದವೇ!" ಎಂದು ಸಮಾಧಾನಪಡಿಸಿದರು. ಅವರ ಗುರುಭಕ್ತಿ ಇಮ್ಮಡಿಸಿತು.

ಇನ್ನೊಂದು ಪ್ರಸಂಗ ಶೇಷಣ್ಣನವರ ಮನೆಯಲ್ಲಿ ನಡೆದದ್ದು. ಅಂದು ಯಾರೋ ಪರ ಊರ ವಿದ್ವಾಂಸರು ಹಾಡುತ್ತಿದ್ದಾರೆ; ಚೌಡಯ್ಯನೇ ಅವರಿಗೆ ಪಕ್ಕವಾದ್ಯ. ಸಭೆಯಲ್ಲಿ ಅಂದಿನ ವಿದ್ವಾಂಸರೆಲ್ಲ ನೆರೆದಿದ್ದಾರೆ. ಎದುರೇ ಶೇಷಣ್ಣನವರು, ಪಕ್ಕದಲ್ಲಿ ಕೃಷ್ಣಪ್ಪನವರು. ಕಚೇರಿ ನಡೆಯುತ್ತಿದ್ದಾಗ ನಡುವೆ ಚೌಡಯ್ಯ ಜಾಡು ತಪ್ಪಿದರು; ಪಿಟೀಲಿನ ಅನುಸರಣೆ ಹಾಡಿಗೆ ಸರಿಯಾಗಿರಲಿಲ್ಲ. ತಮ್ಮ ಶಿಷ್ಯ ಹೀಗೆ ಮಾಡಿದ್ದರಿಂದ ಕೃಷ್ಣಪ್ಪನವರಿಗೆ ತಡೆಯಲಾರದಷ್ಟು ಸಿಟ್ಟು ಬಂದಿತು. ಹತ್ತಿರ ಇದ್ದ ಕೋಲನ್ನೆತ್ತಿಕೊಂಡು ಚೌಡಯ್ಯನನ್ನು ಹೊಡೆಯಲು ಎದ್ದರು. ಒಡನೆಯೇ ಶೇಷಣ್ಣನವರೂ ಎದ್ದು, ಅವರನ್ನು ಹಿಡಿದು "ಇದೇನು ಕೃಷ್ಣಪ್ಪ, ಸಮಾಧಾನ ತಂದುಕೋ! ಎಷ್ಟಾದರೂ ಹುಡುಗನಲ್ಲವೆ ಅವನು? ಏನೋ ತಪ್ಪಿದ್ದಾನೆ, ಅದೇನು ದೊಡ್ಡ ಅಪರಾಧವೆ? ನಾವೇ ಎಷ್ಟೋ ಸಾರಿ ತಪ್ಪುವುದಿಲ್ಲವೆ? ಸಭೆಯಲ್ಲಿ ಅವನನ್ನು ಅವಮಾನಮಾಡುವುದೆ?" ಎಂದು ತಡೆದರು.

ಚೌಡಯ್ಯ ತಲೆತಗ್ಗಿಸಿಕೊಂಡು ನುಡಿಸುವುದನ್ನು ಮುಂದರಿಸಿದರು. ಕಚೇರಿ ಮುಗಿಯಿತು. ಚೌಡಯ್ಯ ಮನೆಗೆ ಹೋದರು; ಎಂದಿನಂತೆ ಊಟ ಮುಗಿಸಿ ಮಲಗಿದರು. ಆದರೆ ಆ ದಿನದ ಘಟನೆಯಿಂದ ಮನಸ್ಸು ಭಾರವಾಗಿತ್ತು; ನಿದ್ರೆ ಬರಲಿಲ್ಲ. ತಾನು ನುಡಿಸಾಣಿಕೆಯಲ್ಲಿ ತಪ್ಪು ಮಾಡಿ ಗುರುಗಳಿಗೇ ಅವಮಾನಮಾಡಿಬಿಟ್ಟೆನಲ್ಲಾ ಎಂಬ ಕೊರಗು. ಅವರು ಅಷ್ಟು ಪ್ರೀತಿಯಿಂದ, ಶ್ರದ್ಧೆಯಿಂದ ಹೇಳಿಕೊಟ್ಟರೂ ಅವರ ಮನಸ್ಸಿಗೆ ಸಂತೋಷವನ್ನುಂಟುಮಾಡದೆ ಹೋದೆನಲ್ಲಾ; ಅವರು ಸಿಟ್ಟಾಗುವಂತೆ ಮಾಡಿಬಿಟ್ಟೆನಲ್ಲಾ ಎಂದು ಪರಿತಾಪ. ಏನು ತೋಚಿತೋ ಏನೋ, "ಛೆ, ನಾನು ಬದುಕಿದ್ದು ಏನು ಪ್ರಯೋಜನ? ಕೆರೆಗೆ ಹಾರಿ ಪ್ರಾಣ ಬಿಡುತ್ತೇನೆ!" ಎಂದು ನಿರ್ಧರಿಸಿ ಮನೆಯಿಂದ ಹೊರಗಾದರು.

ಆಗ ಮುಂಜಾನೆ ನಾಲ್ಕು ಗಂಟೆಯ ಸಮಯ. ಮನೆಯಲ್ಲಿ ಯಾರೂ ಎದ್ದಿರಲಿಲ್ಲ; ಬೀದಿಯಲ್ಲೂ ಜನಸಂಚಾರವಿಲ್ಲ. ಚೌಡಯ್ಯ ನೇರ ಕುಕ್ಕರಹಳ್ಳಿ ಕೆರೆಯ ಕಡೆ ನಡೆದರು. ಕೆರೆಯ ಏರಿಯ ಮೇಲೆ ತಲೆ ಬಗ್ಗಿಸಿಕೊಂಡು ನಡೆಯುತ್ತಿರುವಾಗ ಮುಂದೆ ಯಾರೋ ಹೋಗುತ್ತಿರುವುದು ಕಾಣಿಸಿತು. ಮುಂಜಾನೆಯ ಮಬ್ಬಿನಲ್ಲಿ ಅವರು ಯಾರೆಂಬುದು ತಿಳಿಯಲಿಲ್ಲ. ಅವರು ಮುಂದೆ ಹೋಗಲೆಂದು ಚೌಡಯ್ಯ ಅಲ್ಲಿಯೇ ನಿಂತರು. ಮುಂದೆ ಹೋಗುತ್ತಿದ್ದಾತ ಇದ್ದಕ್ಕಿದ್ದಂತೆ ಹಿಂದಿರುಗಿ ನೋಡಿದರು; ಅಲ್ಲಿಯೇ ನಿಂತ ಚೌಡಯ್ಯನನ್ನು ನೋಡಿ ಏನೋ ಅನುಮಾನವಾಗಿ 'ಯಾರದು' ಎಂದು ಕೂಗಿ ಕೇಳಿದರು. ಚೌಡಯ್ಯ ಅವರ ಕಡೆ ನೋಡಿದಾಗ ಅವರು ಕೃಷ್ಣಪ್ಪನವರ ಇನ್ನೊಬ್ಬ ಶಿಷ್ಯರಾದ ಬಿ. ರಾಚಪ್ಪನವರು.

ರಾಚಪ್ಪ ಹಿಂದಕ್ಕೆ ಬಂದು, ನಿಂತ ವ್ಯಕ್ತಿ ಚೌಡಯ್ಯನೆಂದು ಅರಿತುಕೊಂಡು, "ಇಲ್ಲಿ ಏನು ಮಾಡುತ್ತಿದ್ದೀಯೋ, ಈ ಹೊತ್ತಿನಲ್ಲಿ?" ಎಂದು ಕೇಳಿದರು. ವಿಧಿಯಿಲ್ಲದೆ ಚೌಡಯ್ಯ ತನ್ನ ನಿರ್ಧಾರವನ್ನು ತಿಳಿಸಬೇಕಾಯಿತು. ಹಿಂದಿನ ದಿನ ನಡೆದ ವಿಚಾರ ರಾಚಪ್ಪನಿಗೆ ತಿಳಿದಿದ್ದಿತು. ಅವರು ಚೌಡಯ್ಯನ ಕೈಹಿಡಿದು "ಏ ಮಂಕೆ, ಏನು ಮಾಡುತ್ತಿರುವುದು ನೀನು? ಗುರುಗಳಿಗೆ ನಿನ್ನ ಮೇಲೆ ಎಷ್ಟು ಪ್ರೀತಿಯಿದೆ, ನಿನ್ನ ವಿಚಾರವಾಗಿ ಎಷ್ಟು ಭರವಸೆಯಿದೆ ಎಂಬುದನ್ನು ಅರಿಯೆಯಾ? ಏನೋ ಮಹಾ

ಆಗಿಹೋಯಿತು ಎಂದು ಕೆರೆಗೆ ಹಾರುತ್ತೀಯಾ? ನೀನು ಹೀಗೆ ಸತ್ತರೆ ಗುರುಗಳೂ ದುಃಖದಿಂದ ಸತ್ತಾರು! ಸುಮ್ಮನೆ ನಡಿ ಮನೆಗೆ!" ಎಂದು ಹೇಳಿದರು.

ಚೌಡಯ್ಯನನ್ನು ಅಲ್ಲಿಯೇ ಬಿಡದೆ ಅವನ ಕೈಹಿಡಿದು ಗುರುಗಳ ಮನೆಯವರೆಗೂ ಕರೆತಂದರು. ಮನೆಯ ಬಾಗಿಲಲ್ಲೇ ಗುರುಗಳು ಕಾತರದಿಂದ ನಿಂತಿದ್ದಾರೆ. ಮುಂಜಾನೆ ಎದ್ದು, ಇನ್ನೂ ಚೌಡಯ್ಯ ಬಾರದಿರುವುದನ್ನು ಅರಿತು ಕಳವಳದಿಂದ ಬೀದಿಗೆ ಬಂದಿದ್ದಾರೆ. ಚೌಡಯ್ಯನನ್ನು ಕಂಡೊಡನೆ, "ಬಂದೆಯಾ, ಬಾ! ನೆನ್ನೆಯ ಘಟನೆಯಿಂದ ಬೇಜಾರಾಯಿತೆ?" ಎಂದೆಲ್ಲ ವಿಚಾರಿಸಿಕೊಂಡು ಒಳಗೆ ಕರೆದುಕೊಂಡು ಹೋದರು.

ಇನ್ನೂ ಒಂದು ಪ್ರಸಂಗವನ್ನು ಇಲ್ಲಿ ನಿರೂಪಿಸಬಹುದು. ಇನ್ನೊಮ್ಮೆ ಬಿಡಾರದ ಕೃಷ್ಣಪ್ಪನವರ ಕಚೇರಿಯಲ್ಲಿಯೇ ಚೌಡಯ್ಯನ ಪಕ್ಕವಾದ್ಯ; ಮೈಸೂರಿನಲ್ಲಿ. ಆ ವೇಳೆಗಾಗಲೇ ಚೌಡಯ್ಯನ ಹೆಸರು ಕೊಂಚಮಟ್ಟಿಗೆ ಪ್ರಸಿದ್ಧಿಗೆ ಬಂದಿದ್ದು ಯಾವುದೋ ಸಂಸ್ಥೆಯವರು ಅವರಿಗೆ ಒಂದು ಬಂಗಾರದ ಮೆಡಲನ್ನು ಕೊಟ್ಟಿದ್ದರು. ಅಂದಿನ ಕಚೇರಿಗೆ ಅವರು ಅದನ್ನು ಎಲ್ಲರಿಗೂ ಕಾಣುವಂತೆ ಧರಿಸಿ ಬಂದಿದ್ದರು. ಕಚೇರಿ ನಡೆಯುತ್ತಿರುವಾಗ ಮೆಡಲಿನ ಕಡೆಯೇ ಅವರ ಗಮನ; ಸಭೆಯವರು ಅದನ್ನು ನೋಡಬೇಕೆಂದು ಅವರ ತವಕ. ವಾದನದ ಕಡೆ ಗಮನ ಕಡಮೆಯಾದದ್ದು ಸಹಜವೇ. ನುಡಿಸಾಣಿಕೆ ಸಪ್ಪೆಯಾಗುತ್ತ ಬಂದಿತು. ಇದನ್ನು ಕೃಷ್ಣಪ್ಪನವರು ಗಮನಿಸಿದರು. ಕೊಂಚ ಹೊತ್ತು ನೋಡಿದರು; ನುಡಿಸಾಣಿಕೆಯು ಸಮರ್ಪಕವಾಗಿಲ್ಲವೆಂದೂ ಸೂಚಿಸಿಯೂ ಸೂಚಿಸಿದರು. ಚೌಡಯ್ಯನೇನೂ ಮಣಿಯಲಿಲ್ಲ. ಕಡೆಗೆ ಕೃಷ್ಣಪ್ಪನವರು ಹಾಡುವುದನ್ನು ನಿಲ್ಲಿಸಿ, ಸಿಟ್ಟಿನ ನೋಟದಿಂದ "ಚೌಡಯ್ಯ, ಮೆಡಲನ್ನು ತೆಗೆದು ಕಿಸೆಯಲ್ಲಿರಿಸಿಕೋ! ಇಲ್ಲವಾದರೆ ಎದ್ದುಹೋಗು!" ಎಂದು ಹೇಳಿದರು. ಮರುಮಾತಾಡದೆ ಚೌಡಯ್ಯ ಮೆಡಲನ್ನು ತೆಗೆದು ಕಿಸೆಯಲ್ಲಿರಿಸಿಕೊಂಡು, ನುಡಿಸಲಾರಂಭಿಸಿದರು. ಈಗ ಅವರ ಗಮನವೆಲ್ಲ ನುಡಿಸುವುದರಲ್ಲೇ ಇದ್ದಿತಾಗಿ, ಸೊಗಸು ಕೂಡಿಕೊಂಡಿತೆಂದು ಬೇರೆ ಹೇಳಬೇಕೆ ?

ಚೌಡಯ್ಯನವರು ಮಧುರೆ ಮಣಿ ಅಯ್ಯರ್ ಜೊತೆ ಇರುವುದು

(೪)

ಪ್ರಯೋಗಗಳ ಪ್ರಸಿದ್ಧಿ

ಬಿಡಾರದ ಕೃಷ್ಣಪ್ಪನವರಲ್ಲಿ ಚೌಡಯ್ಯನವರ ಗುರುಕುಲವಾಸ ೧೯೧೦ ರಿಂದ ೧೯೨೮ರ ವರೆಗೆ ಎಂದು ಹೇಳಬಹುದು. ಆರಂಭವಾದ ಒಂದೆರಡು ವರ್ಷಗಳಲ್ಲೇ ಗುರುಗಳ ಹಾಡಿಕೆಗೆ ಪಿಟೀಲನ್ನು ನುಡಿಸುವಷ್ಟು ಸಾಮರ್ಥ್ಯ ಬಂದಿತು. ಆದರೆ ಸಾರ್ವಜನಿಕವಾಗಿ ಗುರುಗಳ ಕಚೇರಿಗೆ ಪಕ್ಕವಾದ್ಯವಾಗಿ ವೇದಿಕೆಯ ಮೇಲೆ ಕುಳಿತುಕೊಳ್ಳುವುದು ೧೯೨೬ರಿಂದಲೇ ಶುರುವಾದದ್ದು. ಇತರ ಗಾಯಕರಿಗೂ ಪಕ್ಕವಾದ್ಯವಾಗಿ ನುಡಿಸಲು ಗುರುಗಳು ಅನುಮತಿ ಕೊಟ್ಟದ್ದು ಮಾತ್ರವಲ್ಲ, ತಮ್ಮ ಇತರ ವಿದ್ಯಾರ್ಥಿಗಳಿಗೆ ಇವರು ಪಾಠ ಹೇಳಲೂ ಬಿಟ್ಟರು. ಕಲಿಯುವುದು, ಪಕ್ಕವಾದ್ಯ ನುಡಿಸುವುದು, ಪಾಠ ಹೇಳುವುದು ಎಲ್ಲವೂ ನಡೆಯತೊಡಗಿದ್ದು ೧೯೨೮ರ ತರುವಾಯ. ಆದರೆ ಗುರುಗಳ ನೆರಳಲ್ಲೇ ಗುರುಗಳು ಬದುಕಿರುವವರೆಗೂ ನಡೆದದ್ದು.

ಚೌಡಯ್ಯನವರದ್ದು ಧೈರ್ಯದ ಸ್ವಭಾವ. ಏನಾದರೊಂದು ಹೊಸತನ್ನು ಮಾಡಬೇಕು, ಬೇರೆಯವರು ಮಾಡದೆ ಇದ್ದುದನ್ನು ಮಾಡಬೇಕು ಎನ್ನುವ ಕಾತರವೂ ಇದ್ದಿತು. ಆ ಕಾಲದ ಗಾಯಕರದ್ದು ಸಾಧನೆಯಿಂದಲೂ, ಸ್ವಭಾವದಿಂದಲೂ ಭೋರ್ಗರೆಯುವ ಶಾರೀರ. ಸಭೆಯಲ್ಲಿ ಸಾವಿರ ಮಂದಿ ಇದ್ದರೂ ಎಲ್ಲರಿಗೂ ಕೇಳಿಸುವಂಥ ನಾದ ಅದರಿಂದ ಹೊರಡುತ್ತಿದ್ದಿತು. ಮತ್ತೆ ಮೂರೂ ಸ್ಥಾಯಿಗಳಲ್ಲಿ ಸರಾಗವಾಗಿ ಏರಿಳಿಯುವ ಸಾಮರ್ಥ್ಯ. ಬಿಡಾರದ ಕೃಷ್ಣಪ್ಪನವರದ್ದೇ ಅಂಥ ಶಾರೀರ; ನಮ್ಮ ಕಾಲದ ಚೆಂಬೈ ವೈದ್ಯನಾಥ ಭಾಗವತರ ಶಾರೀರದಂತೆ. ಸಭೆಯಲ್ಲಿ ಅವರ ಪಕ್ಕ ಕುಳಿತು ಪಿಟೀಲನ್ನು ನುಡಿಸಿದರೆ ವಾದ್ಯದ ಶಬ್ದವನ್ನೂ ಅಡಗಿಸಿಕೊಂಡು ಅವರ ಧ್ವನಿ ಮೊರೆಯುತ್ತಿದ್ದಿತಂತೆ.

ಇದನ್ನು ಚೌಡಯ್ಯ ಗಮನಿಸಿ, ಪಿಟೀಲಿನ ನಾದವನ್ನು ಹೇಗಾದರೂ ಹೆಚ್ಚಿಸಬೇಕು ಎಂದು ಹಾತೊರೆಯುತ್ತಿದ್ದರು. ಇದೇ ಪರಿಸ್ಥಿತಿಯಲ್ಲಿ ಮರುಂಗಾಪುರಿ ಗೋಪಾಲಕೃಷ್ಣ ಅಯ್ಯರು ತಮ್ಮ ಪಿಟೀಲಿಗೆ "ಫೋನ್" (ಧ್ವನಿವರ್ಧಕ) ಅಳವಡಿಸಿಕೊಳ್ಳುತ್ತಿದ್ದರು. ಅವರ ಕಾಲದಲ್ಲಿಯೂ ಮಹಾವೈದ್ಯನಾಥಯ್ಯರು, ಕೋನೇರಿರಾಜಪುರಂ ವೈದ್ಯನಾಥಯ್ಯರು,

ಪಟ್ಟಣಂ ಸುಬ್ರಹ್ಮಣ್ಯಯ್ಯರು, ಹರಿಕೇಶನಲ್ಲೂರು ಮುತ್ತಯ್ಯ ಭಾಗವತರು, ಪಾಲಕ್ಕಾಡು ರಾಮ ಭಾಗವತರು ಇವರೆಲ್ಲ ಸಿಂಹಗರ್ಜನೆಯ ಶಾರೀರದವರೇ. ಆದರೆ ಪಿಟೀಲಿಗೆ "ಫೋನ್" ಕೃತಕವಾದ ವ್ಯವಸ್ಥೆಯಾಯಿತು; ಅಷ್ಟು ಪರಿಣಾಮಕಾರಿಯೂ ಆಗಲಿಲ್ಲ. ಗಾಯಕರ ಶಾರೀರಕ್ಕೆ ಇದು ಹೊಂದಿಕೊಳ್ಳುವಂತಿರಲಿಲ್ಲ.

ಚೌಡಯ್ಯನವರು ಪಿಟೀಲಿನಲ್ಲಿಯೇ ಏನಾದರೂ ಮಾರ್ಪಾಡು ಮಾಡಬಹುದೋ ಎಂದು ನೋಡುತ್ತಿದ್ದರು. ಅದನ್ನು ಕುರಿತಂತೆ ಪ್ರಯೋಗಗಳನ್ನು ನಡೆಸುತ್ತಲೇ ಇದ್ದರು. ಆದರೆ ಇದನ್ನು ಯಾರಿಗೂ ತಿಳಿಸಲಿಲ್ಲ. ಪಿಟೀಲಿನ ತಂತಿಗಳನಾದ ಸಾಮರ್ಥ್ಯವನ್ನು ಹಿಗ್ಗಿಸಿದಾಗಲೂ ಶ್ರುತಿಶುದ್ಧವಾಗಿರಬೇಕಲ್ಲವೇ? ಸ್ವರಗಳ ಸ್ವಭಾವ ಅಬ್ಬರದಲ್ಲಿ ಕದಡಿಹೋಗಬಾರದಲ್ಲ? ಕೃತಿನಿರೂಪಣೆಯಲ್ಲಿ ಏರುಪೇರಾಗಬಾರದಲ್ಲ. ಇವೆಲ್ಲವನ್ನೂ ಗಮನದಲ್ಲಿರಿಸಿಕೊಂಡು ಚೌಡಯ್ಯನವರ ಪ್ರಯೋಗಗಳು ಗುಟ್ಟಾಗಿ ನಡೆಯುತ್ತಲೇ ಇದ್ದುವು. ಕಡೆಗೆ ವಾದ್ಯದ ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ತಂತಿಗಳಿಗೆ ಸಮಾನಾಂತರವಾಗಿ ಜೋಡಿ ತಂತಿಗಳನ್ನು ಸೇರಿಸಿ, ಎರಡು ತಂತಿಗಳಿಗೂ ಒಂದು ಸ್ಥಾಯಿಯ ಅಂತರವನ್ನೇರ್ಪಡಿಸಿ ನೋಡಿದರು. ಮೊದಲನೆಯ ತಂತಿಗೆ ಒಂದು ಸ್ಥಾಯಿ ಕಡಮೆ ಶ್ರುತಿಯ ಇನ್ನೊಂದು ತಂತಿಯನ್ನು ಸೇರಿಸಬೇಕಾದರೆ ಅದು ತೀರ ದಪ್ಪವಾಗಿ, ವಾದ್ಯದ ಹರವಿನಲ್ಲಿ ಸೇರುವಂತಿರಲಿಲ್ಲ; ಹಾಗಾಗಿ ಅದನ್ನು ಹಾಗೆಯೇ ಉಳಿಸಿಕೊಂಡರು. ಉಳಿದ ಮೂರು ತಂತಿಗಳಿಗೆ ಒಂದೊಂದಕ್ಕೂ ಒಂದು ಸ್ಥಾಯಿ ಕೆಳಗಿರುವ ಇನ್ನೊಂದು ತಂತಿಯನ್ನು ಅಳವಡಿಸಿದರು. ಇದು ಏಳು ತಂತಿಗಳ ಪಿಟೀಲಾಯಿತು. ನಾದಸಾಮರ್ಥ್ಯ ಗಣನೀಯವಾಗಿ ಹೆಚ್ಚಿತು.

ಸ್ವಲ್ಪ ಸಮಯದನಂತರ ಸಿತಾರಿಗಿರುವಂತೆ ಮತ್ತೆ ಹನ್ನೆರಡು ತಂತಿಗಳನ್ನು ಅನುರಣನಕ್ಕಾಗಿ ತಮ್ಮ ಪಿಟೀಲಿಗೆ ಸೇರಿಸಿದರು: ಹತ್ತೊಂಬತ್ತು ತಂತಿಗಳ ಪಿಟೀಲು ಸಿದ್ಧವಾಯಿತು. ಆದರೆ ಅದನ್ನು ಶ್ರುತಿ ಮಾಡಿಕೊಳ್ಳುವ ಪ್ರಯಾಸವನ್ನು ಕಂಡು ಅವರೇ ಅದನ್ನು ಕೈಬಿಟ್ಟರು. ಏಳು ತಂತಿಗಳ ಪಿಟೀಲೇನೋ ಅವರಿಗೆ ಒಪ್ಪಿಗೆಯಾಯಿತು. ತಮ್ಮ ಪ್ರಯೋಗವನ್ನು ತಾವೇ ಮೆಚ್ಚಿಕೊಂಡರು. ಚೌಡಯ್ಯನವರ

ಗುಣಗಳಲ್ಲೊಂದು ಅವರ ಅಪಾರವಾದ ಆತ್ಮವಿಶ್ವಾಸ; ತಾನು ಗಟ್ಟಿಗ ಎಂಬುದು ಅವರಿಗೆ ಹುಡುಗನಾಗಿದ್ದಾಗಲೇ ಮನವರಿಕೆಯಾಯಿತು; ಸಾಯುವವರೆಗೂ ಅದನ್ನು ಅವರು ಮರೆಯಲೇ ಇಲ್ಲ! ಈ ಆತ್ಮವಿಶ್ವಾಸಕ್ಕೆ ಅನುರೂಪವಾದ ಧೈರ್ಯವೂ ಇದ್ದಿತು.

ಆದರೆ ಗುರುಭಕ್ತಿಯೂ ಇದ್ದಿತಲ್ಲ? ಈ ಏಳುತಂತಿ ಪಿಟೀಲನ್ನು ತಮ್ಮ ಗುರುಗಳು ಒಪ್ಪಿಯಾರೆ? ಅವರು ಸಂಪ್ರದಾಯಶೀಲರು; ಹೊಸತನಕ್ಕೆ ಅಷ್ಟಾಗಿ ಒಲಿಯದವರು. ಪ್ರಯೋಗಗಳ ಮೇಲೆ ಅವರಿಗೆ ನಂಬಿಕೆಯಿಲ್ಲ. ತಾನು ಏನೋ ಹೊಸತು ಸಾಧಿಸಿದ್ದೇನೆ ಎನ್ನುವ ಮನೋವೃತ್ತಿ ಅವರಿಗೆ ಹಿಡಿಸದು. ಏನು ಮಾಡುವುದು? ಏಳುತಂತಿ ಪಿಟೀಲಿನ ಗುಣವನ್ನು ಗುರುಗಳಿಗೆ ಮನವರಿಕೆ ಮಾಡಿಕೊಡುವುದು ಹೇಗೆ? ಈ ಸಮಸ್ಯೆಯನ್ನು ಶೇಷಣ್ಣನವರ ಬಳಿ ಎತ್ತಿಕೊಂಡು ಹೋದರು. ಆ ಕಾಲದಲ್ಲಿ ವೈಣಿಕಶಿಖಾಮಣಿ ಶೇಷಣ್ಣ ನಾಡಿನಲ್ಲೇ ಪ್ರಖ್ಯಾತರಾದವರು; ಮೈಸೂರಿನಲ್ಲಂತೂ ಸಂಗೀತ ಪ್ರಪಂಚದ ಸಾರ್ವಭೌಮ. ಅವರಿಗೆ ಎದುರಾಡುವ ಎದೆಗಾರಿಕೆ ಯಾರಿಗೂ ಇರಲಿಲ್ಲ. ಆದರೆ ಅವರದ್ದು ತುಂಬ ಸರಳ ಸ್ವಭಾವ, ಮಗುವಿನಂಥ ಮನಸ್ಸು, ಸರ್ವಸುಲಭರು. ತಮ್ಮ ಹಿರಿಮೆಯನ್ನು ಅರಿಯದಿದ್ದುದೇ ಅವರ ದೊಡ್ಡತನ!

ಕೃಷ್ಣಪ್ಪನವರಿಗೂ ಅವರಿಗೂ ತುಂಬ ಸ್ನೇಹ; ಪರಸ್ಪರ ಪ್ರೀತಿ ಗೌರವಗಳು. ಕೃಷ್ಣಪ್ಪನವರು ಕೊಂಚ ಕಾಲ ಶೇಷಣ್ಣನವರಲ್ಲಿ ಶಿಷ್ಯವೃತ್ತಿಯನ್ನೂ ಮಾಡಿದ್ದುದರಿಂದ 'ಗುರುಗಳೇ' ಎಂದೇ ಅವರನ್ನು ಕರೆಯುತ್ತಿದ್ದರು; ಅವರ ಮಾತನ್ನು ಮೀರುತ್ತಿರಲಿಲ್ಲ. ಚೌಡಯ್ಯನವರಿಗೆ ಶೇಷಣ್ಣನವರು ತನ್ನ ಪ್ರಯೋಗವನ್ನು ಮೆಚ್ಚಿಕೊಂಡಾರು ಎಂಬ ವಿಶ್ವಾಸವಿದ್ದಿತು; ಅವರು ಮೆಚ್ಚಿಕೊಂಡರೆ ಕೃಷ್ಣಪ್ಪನವರು ಪ್ರತಿ ಹೇಳುವಂತಿಲ್ಲ ಎಂಬುದು ಚೌಡಯ್ಯನವರ ತಂತ್ರ. ಶೇಷಣ್ಣನವರು ಸಾವಧಾನದಿಂದ ಚೌಡಯ್ಯನ ಪ್ರಯೋಗದ ವಿಚಾರವನ್ನು ಕೇಳಿ ತಿಳಿದುಕೊಂಡರು; 'ಆಗಲಿ, ನುಡಿಸು ನೋಡೋಣ!' ಎಂದು ಹೇಳಿದುದು ಮಾತ್ರವಲ್ಲದೆ ಅವರು ಅನುಸರಿಸಬೇಕಾದ ಉಪಾಯವನ್ನೂ ತಿಳಿಯಹೇಳಿದರು.

ಈ ಮಾತುಕತೆಯಾದ ಕೆಲವು ದಿನಗಳಲ್ಲೇ ಶೇಷಣ್ಣನವರ ಮನೆಯಲ್ಲಿ ಕೃಷ್ಣಪ್ಪನವರ ಗಾಯನ ಕಾರ್ಯಕ್ರಮ; ಚೌಡಯ್ಯನವರದ್ದೇ ಪಿಟೀಲು ಪಕ್ಕವಾದ್ಯ. ಸಭೆ ನಡೆದಿದೆ; ಚೌಡಯ್ಯ ಎಂದಿನಂತೆ ನಾಲ್ಕುತಂತಿ ಪಿಟೀಲನ್ನೇ ನುಡಿಸುತ್ತಿದ್ದಾರೆ. ಸಭೆ ಮುಗಿಯುವ ಸಮಯದಲ್ಲಿ, ಚೌಡಯ್ಯ ಈ ಪಿಟೀಲನ್ನು ಕೆಳಗಿಟ್ಟು, ಪಕ್ಕದಲ್ಲೇ ಇರಿಸಿಕೊಂಡಿದ್ದ ಇನ್ನೊಂದು ಪಿಟೀಲನ್ನು (ಇದು ಏಳುತಂತಿಯದು) ಎತ್ತಿಕೊಂಡು ಶ್ರುತಿ ಮಾಡಿಕೊಳ್ಳತೊಡಗಿದರು. ಕೃಷ್ಣಪ್ಪನವರು ಚೌಡಯ್ಯನನ್ನು ದುರುಗುಟ್ಟಿ ಕೊಂಡು ನೋಡಿ "ಏನಾಯಿತೋ? ಇಷ್ಟು ಹೊತ್ತು ಸರಿಯಾಗಿಯೇ ಇದ್ದಿತಲ್ಲ? ಬೇರೆ ಪಿಟೀಲನ್ನು ಯಾತಕ್ಕೆ ತೆಗೆದಿದ್ದೀ?" ಎಂದು ಕೇಳಿದರು. ಚೌಡಯ್ಯನವರು ವಿನಯವಾಗಿ "ಗುರುಗಳೇ, ಇದು ಏಳುತಂತಿಯ ಪಿಟೀಲು; ಹೊಸದಾಗಿ ನಾನು ಸಿದ್ಧಮಾಡಿದ್ದೇನೆ" ಎಂದು ಅರಿಕೆ ಮಾಡಿಕೊಂಡರು. ಕೃಷ್ಣಪ್ಪನವರು "ಓಹೋ, ಸಂಗೀತವನ್ನು ಕೆಡಿಸಲು ನಿನಗೆ ನಾಲ್ಕುತಂತಿ ಪಿಟೀಲು ಸಾಲದೋ? ಮತ್ತೆ ಮೂರು ತಂತಿಗಳೂ ಬೇಕೋ?" ಎಂದು ಹೇಳುತ್ತಿರುವಂತೆಯೇ ಶೇಷಣ್ಣನವರು ಏನೂ ಅರಿಯದವರಂತೆ "ಏನಪ್ಪಾ ಅದು, ತಕರಾರು?" ಎಂದು ಕೇಳಿದರು.

ಕೃಷ್ಣಪ್ಪನವರು, "ನೋಡಿ, ಗುರುಗಳೇ, ಈ ಚೌಡಯ್ಯ ಇದೇನೋ ಏಳು ತಂತಿ ಪಿಟೀಲಂತೆ, ತಂದಿದ್ದಾನೆ; ನುಡಿಸಬೇಕೆನ್ನುತ್ತಿದ್ದಾನೆ" ಎಂದು ಮುನಿಸಿಕೊಂಡು ಹೇಳಲು, ಶೇಷಣ್ಣನವರು "ಹುಡುಗ ಏನೋ ಹೊಸದು ಮಾಡಿದ್ದಾನೆ; ನುಡಿಸಲಿ ಬಿಡು, ನೋಡೋಣ!" ಎಂದು ಸೂಚಿಸಿದರು. ಕೃಷ್ಣಪ್ಪನವರು ಈಗ ಏನು ಮಾಡಿಯಾರು? ಸಭೆ ಮುಂದರಿಯಿತು; ಚೌಡಯ್ಯ ಏಳುತಂತಿ ಪಿಟೀಲನ್ನೇ ನುಡಿಸಿದರು. ಶೇಷಣ್ಣನವರು ದಿಟವಾಗಿ, ಮನಸಾರೆ ಮೆಚ್ಚಿಕೊಂಡರು. "ಸೊಗಸಾಗಿದೆಯಲ್ಲ, ಕೃಷ್ಣಪ್ಪ! ಚೌಡಯ್ಯ ಇನ್ನು ಮುಂದೆ ಇದನ್ನೇ ನುಡಿಸಲಿ, ಬಿಡು. ಕೀರ್ತಿವಂತನಾಗುತ್ತಾನೆ!" ಎಂದು ಹೇಳಿಬಿಟ್ಟರು.

ಅಲ್ಲಿಂದ ಮುಂದೆ ಚೌಡಯ್ಯನವರು ಎಲ್ಲ ಕಚೇರಿಗಳಲ್ಲೂ ಏಳುತಂತಿಗಳ ಪಿಟೀಲನ್ನೇ ನುಡಿಸುತ್ತಿದ್ದರು. ಗುರುಗಳು ಮೊದಲು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡರು; ಶೇಷಣ್ಣನವರ ಮಾತು, ಎದುರಾಡುವ ಹಾಗಿಲ್ಲ. ಬರುಬರುತ್ತ ಅದರ ಗುಣವನ್ನು ತಾವೂ

ಮೆಚ್ಚಿಕೊಂಡು, ಚೌಡಯ್ಯನನ್ನು ಪ್ರೋತ್ಸಾಹಿಸಿದರು. ಏಳುತಂತಿಯ ಪಿಟೀಲು ಕಷ್ಟಸಾಧ್ಯವಾದ ವಾದ್ಯ. ಅದನ್ನು ಹಿಡಿದುಕೊಳ್ಳುವ ಹಸ್ತಭಂಗಿಯಾಗಲಿ, ಕಮಾನು ಹಾಕುವ ರೀತಿಯಾಗಲಿ, ಶ್ರುತಿ ಮಾಡಿಕೊಳ್ಳುವ ಕ್ರಮವಾಗಲಿ ವಿಶೇಷವಾದ ಸಾಧನೆಯಿಂದ ಬರತಕ್ಕದ್ದು. ಚೌಡಯ್ಯನಂಥ ಸಾಧಕನಿಗೆ ಅದು ವಶವಾಗುವಂತೆ ಎಲ್ಲ ಸಾಧಕರಿಗೂ ಆದೀತೆ?

ಅವರ ಶಿಷ್ಯರಾದ ವಿ. ಸೇತುರಾಮಯ್ಯ, ಆರ್. ಆರ್. ಕೇಶವಮೂರ್ತಿ ಮೊದಲಾದವರು ಏಳುತಂತಿ ಪಿಟೀಲನ್ನೇ ನುಡಿಸುತ್ತಿದ್ದರು. ಚೌಡಯ್ಯನವರ ಪಿಟೀಲನ್ನು ಕೇಳಿ ಅದರಿಂದ ಪ್ರಭಾವಿತರಾಗಿ ತಾವೂ ಏಳುತಂತಿ ಪಿಟೀಲನ್ನೇ ನುಡಿಸಲಾರಂಭಿಸಿದವರು ಮದರಾಸ್ ಬಾಲಕೃಷ್ಣಯ್ಯರು. ಹಳೆಯ ತಲೆಮಾರಿನವರು (೧೮೮೮–೧೯೫೭); ಚೌಡಯ್ಯನವರಿಗಿಂತ ವಯಸ್ಸಿನಲ್ಲೂ, ಅನುಭವದಲ್ಲೂ ಹಿರಿಯರು. ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರಿಗೆ ಮತ್ತು ತಂಜಾವೂರು ಕೃಷ್ಣಭಾಗವತರಿಗೆ (ಕಥಾಕಾಲಕ್ಷೇಪ) ಪಿಟೀಲು ನುಡಿಸುತ್ತಿದ್ದವರು. ತಮ್ಮ ಹದಿನಾರನೆಯ ವಯಸ್ಸಿನಿಂದಲೇ ಪಿಟೀಲನ್ನು ನುಡಿಸಲು ಆರಂಭಿಸಿದ್ದವರು. ಅವರೂ ಸಭೆಗಳಲ್ಲಿ ಪಿಟೀಲಿನ ನಾದ ಆಕರ್ಷಕ ವಾಗಿರಬೇಕೆಂದು ಪ್ರಯತ್ನಮಾಡಿ ವಿಫಲರಾಗಿದ್ದರು. ತಮ್ಮ ಇಳಿ ವಯಸ್ಸಿನಲ್ಲಿ ಚೌಡಯ್ಯನವರ ತನಿವಿನಿಕೆಯನ್ನು ಕೇಳಿದ ಮೇಲೆ ತಮ್ಮ ಪಿಟೀಲಿಗೂ ಏಳು ತಂತಿಗಳ ವ್ಯವಸ್ಥೆ ಮಾಡಿಕೊಂಡರು.

ಈ ಬಗೆಯ ಪ್ರಯೋಗಗಳು ಹಿಂದೆ ನಡೆದಿರಲಿಲ್ಲವೆಂದಲ್ಲ. ಮಹಾವೈದ್ಯನಾಥಯ್ಯರಿಗೂ (೧೮೪೪–೧೮೯೩) ಹಿರಿಯರಾದ ಮಾಸಿಲಾಮಣಿ ಮುದಲಿಯಾರ್ ಎಂಬ ಪಿಟೀಲು ವಿದ್ವಾಂಸರು ತಮ್ಮ ಪಿಟೀಲಿಗೆ ಐದನೆಯ ತಂತಿಯನ್ನು ಸೇರಿಸಿಕೊಂಡಿದ್ದರು. ಅವರು ವಿಶೇಷವಾಗಿ ಕೊಯಮತ್ತೂರು ರಾಘವಯ್ಯರೆಂಬ ವಿದ್ವಾಂಸರಿಗೆ ಪಕ್ಕವಾದ್ಯ ನುಡಿಸುತ್ತಿದ್ದರು. ಇವರು ಹಾಡುವಾಗ ಅನುಮಂದ್ರ ಸ್ಥಾಯಿಯ ಪಂಚಮವನ್ನು ಸರಾಗವಾಗಿ ಧಾರಾಳವಾಗಿ ಬಳಸುತ್ತಿದ್ದರು. ಆದ್ದರಿಂದ ಮುದಲಿಯಾರರು ಅದನ್ನು ವಾದ್ಯದಲ್ಲೂ ತರಲು ಅನುಕೂಲ ವಾಗುವಂತೆ ಅನುಮಂದ್ರ ಪಂಚಮಕ್ಕೆ ಶ್ರುತಿ ಮಾಡಿಕೊಂಡ ಐದನೆಯ

ತಂತಿಯೊಂದನ್ನು ಅಳವಡಿಸಿಕೊಂಡು ಅದನ್ನು 'ರಾಘವತಂತಿ' ಎಂದೇ ಕರೆಯುತ್ತಿದ್ದರು. ಹಿಂದೂಸ್ಥಾನೀ ಸಂಗೀತದಲ್ಲೂ ರತ್ನಾಕರಭಟ್ಟ ಗುಲವಾಡಿ ಎಂಬ ಪಿಟೀಲು ವಿದ್ವಾಂಸರು ಐದುತಂತಿ ಪಿಟೀಲನ್ನು ನುಡಿಸುತ್ತಿದ್ದರು.

ತ್ಯಾಗರಾಜ ಸ್ವಾಮಿಗಳ ಕಾಲದಲ್ಲಿದ್ದ ಷಟ್ಕಾಲ ಗೋವಿಂದ ಮಾರಾರ್ ಎಂಬ ವಿದ್ವಾಂಸರು ಏಳು ತಂತಿಗಳ ತಂಬೂರಿಯನ್ನು ಬಳಸುತ್ತಿದ್ದರಂತೆ. ಅತ್ಯತಿವಿಲಂಬಿತ, ಅತಿವಿಲಂಬಿತ, ವಿಲಂಬಿತ, ಮಧ್ಯ, ದ್ರುತ, ಅತಿದ್ರುತ ಎಂಬ ಆರು ಕಾಲಗಳಲ್ಲೂ ಹಾಡುವುದರಲ್ಲಿ ಅವರು ಗಟ್ಟಿಗರಾಗಿದ್ದರು. ಈ ಆರು ಕಾಲಗಳಲ್ಲೂ ಅಕಾರ ಸಾಧನೆ ಮಾಡಿದರೆ ಶಾರೀರ ಪುಟಗೊಳ್ಳುವುದು ಮಾತ್ರವಲ್ಲದೆ ರಾಗವಿಸ್ತಾರಕ್ಕೆ (ನೆರವಲ್) ನೆರವಾಗುವುದೆಂದು ಚೌಡಯ್ಯನವರು ಹೇಳುತ್ತಿದ್ದರು.

ಆದರೆ ಚೌಡಯ್ಯನವರ ಏಳುತಂತಿ ಪಿಟೀಲಿನ ಪ್ರಯೋಗ ಬೇರೆ ರೀತಿಯದು. ಅದು ಅವರ ಪ್ರತಿಭೆ, ಪ್ರಯಾಸ, ಸಾಧನೆ, ಸಹನೆ, ಸ್ಥೈರ್ಯ, ಪಾಂಡಿತ್ಯ ಎಲ್ಲಕ್ಕೂ ನಿದರ್ಶನವಾಗಿದೆ; ಹಿಡಿದ ಪಟ್ಟು ಬಿಡದೆ, ಯಮಸಾಧನೆ ಮಾಡಿ, ಅಸಾಧ್ಯವಾದುದನ್ನೂ ಸಾಧಿಸುವ ಕೆಚ್ಚು ಅವರದ್ದು. ಈ ಪ್ರಯೋಗದಿಂದಲೇ ಅವರ ಪ್ರಸಿದ್ಧಿಯೂ ಒದಗಿ ಬಂದಿತೆನ್ನಿ. ತಮಿಳುನಾಡಿನಲ್ಲಿ ಅವರು ಪಕ್ಕವಾದ್ಯ ನುಡಿಸುವಾಗ ಅವರ ವಾದನದ್ದೇ ಮೇಲುಗೈ; ಜನ ಕೇಳಲು ಕಾತರರಾಗಿರುತ್ತಿದ್ದುದು ಅವರ ನುಡಿಸಾಣಿಕೆಯನ್ನೇ. ಅವರೊಮ್ಮೆ ಪಿಟೀಲಿನ ಮೇಲೆ ಕಮಾನು ಹಾಕಿದರೆಂದರೆ ಕೈ ಚಪ್ಪಾಳೆ ಶುರುವಾಗುತ್ತಿತ್ತು. ಸಭಾ ಭವನವನ್ನೆಲ್ಲ ಮೊಳಗಿಸಿ, ಕೇಳುವವರ ಮೈಮರೆಸಿ ಹರಡಿಕೊಳ್ಳುತ್ತಿದ್ದ ಅವರ ಸಂಗೀತವಾಗಲಿ, ಅವರ ಸಂಗೀತದಲ್ಲಿ ಎದ್ದು ತೋರಿಕೊಳ್ಳುತ್ತಿದ್ದ ಅದ್ಭುತ ಮನೋಧರ್ಮವಾಗಲಿ ಅವರ ಏಳುತಂತಿ ಪಿಟೀಲಿನ ಪ್ರಭಾವವೇ. ಶೇಷಣ್ಣನವರು "ಚೌಡಯ್ಯ ಇದರಿಂದ ಕೀರ್ತಿವಂತನಾಗುತ್ತಾನೆ" ಎಂದು ನುಡಿದದ್ದು ದಿಟವಾಯಿತು.

ಅವರ ಹೆಸರು ಕರ್ನಾಟಕ ಸಂಗೀತ ಪ್ರಪಂಚದಲ್ಲಿ ಮೊಟ್ಟಮೊದಲು ಆಕರ್ಷಕವಾದದ್ದು ೧೯೨೬ರಲ್ಲಿ; ಆಗಿನ್ನೂ ಏಳುತಂತಿಗಳ ಪಿಟೀಲು

ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರೊಂದಿಗೆ ಚೌಡಯ್ಯನವರು
(೧೯೨೪ರ ಚಿತ್ರ), ವೇಣುನಾಯ್ಕರರ ಮೃದಂಗ

ಹೊರಬಂದಿರಲಿಲ್ಲ. ಆ ವರ್ಷ ಮದರಾಸಿನ ಸೌಂದರ್ಯ ಮಹಲಿನಲ್ಲಿ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಕಚೇರಿ ಏರ್ಪಟ್ಟಿದ್ದಿತು. ತೊಂಡಮಂಡಲಂ ಸಂಗೀತ ಸಭೆಯ ಕಾರ್ಯಕ್ರಮ ಅದು. ಅಂದು ಅವರಿಗೆ ಪಿಟೀಲು ಪಕ್ಕವಾದ್ಯ ಮದರಾಸ್ ಬಾಲಕೃಷ್ಣಯ್ಯರಿಂದ ನಡೆಯ ಬೇಕಾಗಿದ್ದಿತು. ಆ ದಿನ ಬಿಡಾರದ ಕೃಷ್ಣಪ್ಪನವರೂ ಮದರಾಸಿನಲ್ಲೇ ಇದ್ದುದು ತೊಂಡಮಂಡಲಂ ಸಂಗೀತ ಸಭೆಯ ಕಾರ್ಯದರ್ಶಿ ಮುನಿಸಾಮಿ ನಾಯುಡು ಅವರಿಗೆ ಹೇಗೋ ತಿಳಿದು, ಸಂಜೆ ಸಂಗೀತ ಸಭೆಗೆ ಕೃಷ್ಣಪ್ಪನವರನ್ನೂ ಕರೆತಂದರು; ಜೊತೆಗೆ ಶಿಷ್ಯ ಚೌಡಯ್ಯನೂ ಇದ್ದರು. ಏನೋ ಕಾರಣದಿಂದ ಮದರಾಸ್ ಬಾಲಕೃಷ್ಣಯ್ಯರು (ಪಿಟೀಲು ವಾದಕರು) ಬರಲಾಗಲಿಲ್ಲ. ಮುನಿಸಾಮಿ ನಾಯುಡು ಚೌಡಯ್ಯನ ನುಡಿಸಾಣಿಕೆಯ ವಿಚಾರ ಕೇಳಿದ್ದರು. ಅವರನ್ನು ರಾಮಾನುಜ ಅಯ್ಯಂಗಾರ್ಯರಿಗೆ ಪಕ್ಕವಾದ್ಯ ನುಡಿಸುವಂತೆ ಕೇಳಿಕೊಂಡು, ಕೃಷ್ಣಪ್ಪನವರ ಅನುಮತಿಯನ್ನು ಪಡೆದುಕೊಂಡರು.

ಒಡನೆಯೇ ತಮ್ಮ ವಸತಿಗೆ ಹೋಗಿ ಚೌಡಯ್ಯ ತಮ್ಮ ಪಿಟೀಲನ್ನು ತಂದರು. ಪ್ರವಾಸ ಕಾಲದಲ್ಲೂ ಸಂಗೀತಾಭ್ಯಾಸ ತಪ್ಪಬಾರದೆಂದು ಯಾವಾಗಲೂ ಪಿಟೀಲು ಜೊತೆಗೇ ಇರುತ್ತಿದ್ದಿತು. ಅಂದು ವೇದಿಕೆಯೇರಿ

ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರಿಗೆ ಪಕ್ಕವಾದ್ಯವಾಗಿ ನುಡಿಸಿದ ರೀತಿ ಕೃಷ್ಣಪ್ಪನವರಿಗೆ ತುಂಬ ಸಂತೋಷವನ್ನು ತಂದಿತು. ನೆರೆದವರೆಲ್ಲ ಅಚ್ಚರಿಗೊಂಡರು. ಮೈಸೂರಿನ ಈ ಅಜ್ಞಾತ ವಾದಕನ ಪ್ರತಿಭೆಯನ್ನು ಕಂಡು ರಾಮಾನುಜಯ್ಯಂಗಾರ್ಯರೂ ದಂಗಾದರು.

ಅವರೆಗೆ ಚೌಡಯ್ಯನವರು ಪಕ್ಕವಾದ್ಯ ನುಡಿಸಿದ್ದುದು ತಮ್ಮ ಗುರುಗಳಿಗೆ ಮಾತ್ರ. ವೇದಿಕೆಯ ಅನುಭವ ಸ್ವಲ್ಪಮಟ್ಟಿಗೆ ಇದ್ದಿತಾದರೂ ಅರಿಯಕ್ಕುಡಿಯಂಥ ಪ್ರಸಿದ್ಧ ವಿದ್ವಾಂಸರಿಗೆ ನುಡಿಸುವಷ್ಟು ಆತ್ಮವಿಶ್ವಾಸ ಇರಲಿಲ್ಲ. ಆ ಕಾಲಕ್ಕೆ ಅವರಿಗೆ ನುಡಿಸುತ್ತಿದ್ದ ಪಿಟೀಲುವಾದಕರು ಘಟಾನುಘಟಿಗಳು; ಗಾಯಕರಿಗೆ ಸರಿಸಮಾನ ವಿದ್ವತ್ತುಳ್ಳವರು. ಆದರೂ ಚೌಡಯ್ಯನ ಧೈರ್ಯ ನೆರವಿಗೆ ಬಂದಿತು. ಅಂದು ಅವರು ನುಡಿಸಿ ಜಯಭೇರಿ ಹೊಡೆದರು. ಮೈಸೂರಿನ ಹುಲಿ ಎಂದು ಕರೆಸಿಕೊಂಡರು. ರಾಮಾನುಜಯ್ಯಂಗಾರ್ಯರೂ ತುಂಬ ಮೆಚ್ಚಿಕೊಂಡು ಅಂದಿನಿಂದ ಅವರಿಬ್ಬರೂ ಸ್ನೇಹಿತರಾಗಿಬಿಟ್ಟರು.



ಅರಿಯಕ್ಕುಡಿಯವರೊಂದಿಗೆ ಚೌಡಯ್ಯನವರು

ಮರುದಿನವೆಲ್ಲ ಮದರಾಸಿನಲ್ಲಿ ಮೈಸೂರು ಚೌಡಯ್ಯನ ಮಾತೇ. ಹೀಗೆ ಒಂದೇ ಕಚೇರಿಯಿಂದ ಪ್ರಸಿದ್ಧರಾದವರು ಚೌಡಯ್ಯ. ಮುಂದೆ ಎಲ್ಲ ಪ್ರಖ್ಯಾತ ಗಾಯಕರೂ ಚೌಡಯ್ಯನ ಪಕ್ಕವಾದ್ಯವನ್ನು ಬಯಸುವವರೇ!

ಮುಂದೆ ಅವರ ಏಳುತಂತಿ ಪಿಟೀಲು ಹೊರಗೆ ಬಂದಮೇಲಂತೂ ಚೌಡಯ್ಯನವರ ಹೆಸರು ಮನೆಮಾತಾಯಿತು. ತಮಿಳುನಾಡಿನಲ್ಲಿ ಹೀಗೆ ಜನಪ್ರಿಯರಾದ ಸಂಗೀತ ವಿದ್ವಾಂಸರು ತೀರ ಕಡಮೆ.

ಆದರೆ ಚೌಡಯ್ಯನವರ ಪ್ರಸಿದ್ಧಿಗೆ ಏಳುತಂತಿ ಪಿಟೀಲು ಒಂದೇ ಕಾರಣ ಎನ್ನುವುದಾಗದು. ಅವರ ಬಹುಮುಖ ಪ್ರತಿಭೆಯ ಒಂದು ಮುಖ ಅದು ಅಷ್ಟೆ. ವಿದ್ವಾಂಸರು ಅವರನ್ನು ಮೆಚ್ಚಿಕೊಂಡು ಅವರ ಪಕ್ಕವಾದ್ಯವನ್ನು ಅಪೇಕ್ಷಿಸುತ್ತಿದ್ದುದಕ್ಕೂ ಅನೇಕ ಕಾರಣಗಳಿವೆ; ರಸಿಕಜನ ಅವರನ್ನು ಕೊಂಡಾಡಿದುದಕ್ಕೂ ಹಲವು ಕಾರಣಗಳು.

ಅವರು ಪಕ್ಕವಾದ್ಯ ನುಡಿಸಿದ ಗಾಯಕರಲ್ಲಿ ತಮ್ಮ ಗುರುಗಳಲ್ಲದೆ ಪಾಲಕ್ಕಾಡು ರಾಮಭಾಗವತರು, 'ಟೈಗರ್' ವರದಾಚಾರ್ಯರು, ಕೆ. ವಾಸುದೇವಾಚಾರ್ಯರು, ಚಿಕ್ಕರಾಮರಾಯರು ಇವರಂಥ ಹಳೆಯ ತಲೆಮಾರಿನವರಿದ್ದರು. ಈ ಪೀಳಿಗೆಯ ನಂತರ ಕರ್ನಾಟಕ ಸಂಗೀತಪ್ರಪಂಚದಲ್ಲಿ ಬೆಳಗಿದವರು ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರು, ಮಹಾರಾಜಪುರಂ ವಿಶ್ವನಾಥಯ್ಯರು, ಚೆಂಬೈ ವೈದ್ಯನಾಥಯ್ಯರು, ಮುಸಿರಿ ಸುಬ್ರಹ್ಮಣ್ಯಯ್ಯರು, ಜಿ. ಎನ್. ಬಾಲಸುಬ್ರಹ್ಮಣ್ಯಂ, ಶೆಮ್ಮಂಗುಡಿ ಶ್ರೀನಿವಾಸಯ್ಯರು, ಆಲತ್ತೂರು ಸಹೋದರರು (ಶಿವಸುಬ್ರಹ್ಮಣ್ಯಯ್ಯರು, ಶ್ರೀನಿವಾಸಯ್ಯರು), ತಿಟ್ಟೆ ಕೃಷ್ಣಯ್ಯಂಗಾರ್ಯರು, ಮಧುರೆ ಮಣಿ ಅಯ್ಯರು. ಇವರೆಲ್ಲರಿಗೆ ಚೌಡಯ್ಯನವರು ಪಕ್ಕವಾದ್ಯ ಒದಗಿಸಿದುದು ಮಾತ್ರವಲ್ಲ, ಅವರ ಸ್ನೇಹವನ್ನೂ, ಆದರವನ್ನೂ, ಗೌರವವನ್ನೂ ಪಡೆದುಕೊಂಡರು. ಅವರೆಲ್ಲ ಸುಮಾರಾಗಿ ಚೌಡಯ್ಯನವರ ಓರಗೆಯವರೇ. ಮುಂದೆ ಪಾಲಕ್ಕಾಡು ಕೆ. ಎಸ್. ನಾರಾಯಣಸ್ವಾಮಿ (ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಶಿಷ್ಯರು), ಸಾತ್ತೂರು ಸುಬ್ರಹ್ಮಣ್ಯಂ (ಟಿ. ಎಸ್. ಸಭೇಶಯ್ಯರ ಶಿಷ್ಯರು), ಮಣಕ್ಕಾಲ್ ರಂಗರಾಜನ್, ತಾಂಡಾಳಂ (ಟಿ. ಕೆ.) ರಂಗಾಚಾರಿ (೧೯೭೨–೧೯೧೯, ಪೊನ್ನಯ್ಯ ಪಿಳ್ಳೈ ಮತ್ತು ಸಭೇಶಯ್ಯರ ಶಿಷ್ಯರು), ತಿರುವಡಮರದೂರ್ (ಟಿ. ಆರ್.) ಮಹಾಲಿಂಗಂ (೧೯೨೬–೧೯೮೬ ಕೊಳಲು), ಬಿ. ಕೆ. ಪದ್ಮನಾಭರಾಯರು (೧೯೦೩–೧೯೬೬) ಮುಂತಾದ ಕಿರಿಯ ಪೀಳಿಗೆಯ ವಿದ್ವಾಂಸರಿಗೂ ಪಕ್ಕವಾದ್ಯ ನುಡಿಸಿದರು.

ಮಧುರೆ ಮಣಿ ಅಯ್ಯರಿಗೆ ಪಕ್ಕವಾದ್ಯವಾಗಿ ಚೌಡಯ್ಯನವರ ಪಿಟೀಲು
(ಮೃದಂಗ—ಪಳನಿ ಸುಬ್ರಹ್ಮಣ್ಯ ಪಿಳ್ಳೆ, ಘಟ—ಮಂಜುನಾಥ್)

ಹೀಗೆ ಮೂರು ತಲೆಮಾರುಗಳ ವಿದ್ವಾಂಸರಿಗೆ ನೆರವಾಗಿ ನಿಂತವರು ಚೌಡಯ್ಯ. ಚೌಡಯ್ಯನವರು ಪಕ್ಕವಾದ್ಯ ನುಡಿಸಿದರೆ ತಮ್ಮ ಗಾಯನಕ್ಕೆ ಕಳೆ ಕಟ್ಟುತ್ತದೆ ಎಂದು ಇವರೆಲ್ಲರ ಸಮಾನವಾದ ಅಭಿಪ್ರಾಯ. ಚೌಡಯ್ಯನವರ ಅನುಕೂಲವನ್ನು ತಿಳಿದುಕೊಂಡು ತಮ್ಮ ಕಾರ್ಯಕ್ರಮವನ್ನು ಗೊತ್ತುಮಾಡಿಕೊಳ್ಳುತ್ತಿದ್ದುದೂ ಉಂಟು. ಚೌಡಯ್ಯನವರ ಪಿಟೀಲನ್ನು ಕೇಳಲೆಂದೇ ಬರುತ್ತಿದ್ದ ರಸಿಕರ ಸಂಖ್ಯೆಯೂ ದೊಡ್ಡದೇ. ಈ ಜನಪ್ರೀತಿಯ ರಹಸ್ಯವೇನೆಂದರೆ ಗಾಯಕರ ಶೈಲಿಯನ್ನೂ, ಮನೋಧರ್ಮವನ್ನೂ ತಟ್ಟನೆ ಗ್ರಹಿಸಿ, ಅನುಸರಿಸಿ ವಿಸ್ತರಿಸುವ ಜಾಣತನ ಅವರಿಗಿದ್ದುದು.

ಮೇಲ್ಮಟ್ಟದ ಪ್ರಸಿದ್ಧ ಸಂಗೀತ ವಿದ್ವಾಂಸರ ಶೈಲಿ, ಮನೋಧರ್ಮ, ನಿರೂಪಣೆಗಳಲ್ಲಿ ವೈವಿಧ್ಯವಿರುತ್ತದೆ; ಒಬ್ಬೊಬ್ಬರದು ಒಂದೊಂದು ದಾರಿ; ಒಂದೊಂದು ದಾರಿಯಲ್ಲಿ ಒಂದೊಂದು ವಿಶೇಷ. ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಸಂಗೀತದಲ್ಲಿ ಶಿಸ್ತು, ಸಂಯಮ, ಸಂಗ್ರಹ, ಸಾರಗ್ರಹಣ, ಸಂಪ್ರದಾಯ ಶುದ್ಧಿ. ಮಹಾರಾಜಪುರಂ ವಿಶ್ವನಾಥಯ್ಯರ ಸಂಗೀತದಲ್ಲಿ ವಿಚಿತ್ರ ಕಲ್ಪನೆ, ಭಾವುಕತೆ, ಸ್ವಾತಂತ್ರ್ಯ. ಮಧುರೆ ಮಣಿ

ಅಯ್ಯರ ಸಂಗೀತದಲ್ಲಿ ರಾಗಭಾವ, ಸರ್ವಲಘುಸ್ವರ ಕಲ್ಪನೆ, ಲಯಪ್ರಜ್ಞೆ. ಮುಸಿರಿ ಸುಬ್ರಹ್ಮಣ್ಯಯ್ಯರ ಸಂಗೀತದಲ್ಲಿ ಮಾರ್ದವ, ಭಾವಶುದ್ಧಿ, ರಾಗವಿಸ್ತಾರ, ಸಾಹಿತ್ಯ ಜ್ಞಾನ, ಸ್ವರ ನಿರ್ಣಯ. ಚೆಂಬೈ ವೈದ್ಯನಾಥಯ್ಯರ ಸಂಗೀತದಲ್ಲಿ ಧೀರ ಗಂಭೀರ ಗತಿ, ಭಕ್ತಿಭಾವ, ನಾದಪ್ರವಾಹ. ಜಿ. ಎನ್. ಬಾಲಸುಬ್ರಹ್ಮಣ್ಯಂ ಅವರ ಸಂಗೀತದಲ್ಲಿ ಚಕಮಕಿಯ ಬಿರ್ಕಾಗಳು, ರಾಗಮಾಧುರ್ಯ, ಕೃತಿ ನಿರೂಪಣೆಯ ಸೊಗಸು. ಆಲತ್ತೂರು ಸಹೋದರರ ಪ್ರಗಲ್ಭ ಪಲ್ಲವಿಗಳು, ಜಟಿಲವಾದ ತಾಳಬಂಧ, ಪಾಂಡಿತ್ಯ.



ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಕಚೇರಿ
(ಚೌಡಯ್ಯನವರ ಪಿಟೀಲು, ಪಾಲಕ್ಕಾಡು ಮಣಿ ಅಯ್ಯರ ಮೃದಂಗ, ಮಂಜುನಾಥರ ಘಟ)

ಹೀಗೆ ನಾನಾಗೋತ್ರದ ಗಾಯಕರು. ಅವರೆಲ್ಲರಿಗೂ ಚೌಡಯ್ಯನವರ ಪಕ್ಕವಾದ್ಯ ಸೊಗಯಿಸುತ್ತಿದ್ದಿತು. ಅವರವರ ಮನೋಧರ್ಮ, ಶೈಲಿ, ವೈಶಿಷ್ಟ್ಯಗಳನ್ನು ಚೆನ್ನಾಗಿ ಅರಿತುಕೊಂಡು ಅವರ ಸಂಗೀತವು ಸಹೃದಯರಿಗೆ ರುಚಿಸುವಂತೆ ಮಾಡಬೇಕಾದುದು ಪಕ್ಕವಾದ್ಯದವರ ಧರ್ಮ, ಕರ್ತವ್ಯ. ಇದನ್ನು ಚೌಡಯ್ಯನವರು ನಿಷ್ಠೆಯಿಂದ ಮಾಡುತ್ತಿದ್ದರು. ಇದಕ್ಕೆ ಅಗತ್ಯವಾದ ಸೌಜನ್ಯ, ಚಾತುರ್ಯ, ಸಾಮರ್ಥ್ಯಗಳು ಅವರಿಗಿದ್ದುವು. ತಮ್ಮ ಹಿರಿಮೆಯನ್ನು ಮೆರೆಯಲು ತನಿ ಕಚೇರಿಗಳಿವೆ; ಪಕ್ಕವಾದ್ಯ

ನುಡಿಸುವಾಗ ಗಾಯಕನಿಗೆ ಅಗ್ರಪಟ್ಟ. ಇದನ್ನು ಚೌಡಯ್ಯನವರು ತುಂಬ ಪ್ರಸಿದ್ಧರಾದಾಗಲೂ ಮರೆಯಲಿಲ್ಲ.

ಇದೊಂದು ಆಶ್ಚರ್ಯವೇ ಎನ್ನಬೇಕು. ಚೌಡಯ್ಯನವರ ಸ್ವಭಾವದಲ್ಲೇ ಧೈರ್ಯ, ಕೆಚ್ಚು, ಆತ್ಮವಿಶ್ವಾಸ, ಸ್ವಾಭಿಮಾನ, ಗರ್ವ, ಗತ್ತು ಎಲ್ಲವೂ ಇದ್ದುವು; ಅವೆಲ್ಲಾ ಸಾಲದೆನ್ನುವಂತೆ, ನಾಡಿನ ಒಳಗೂ ಹೊರಗೂ ವಿಪುಲವಾದ ಪ್ರಸಿದ್ಧಿಯೂ ದೊರಕಿತು. ಗಾಯಕರೆಲ್ಲ ಇವರನ್ನು ಆಶ್ರಯಿಸುವಂತಾಯಿತು. ಇಷ್ಟಾದರೂ ಪಕ್ಕವಾದ್ಯಕ್ಕೆ ಕುಳಿತರೆ ಸೌಜನ್ಯ, ವಿನಯ. ಆದರೆ ಉತ್ಸಾಹಕ್ಕೇನೂ ಕೊರತೆಯಿರದು. ಗಾಯಕರನ್ನು ಹುರಿದುಂಬಿಸುವುದರಲ್ಲಿ ನಿಸ್ಸೀಮರು. ತಮ್ಮ ನುಡಿಸಾಣಿಕೆಯಿಂದ ಗಾಯಕರಲ್ಲಿ ಸುಪ್ತವಾಗಿರುವ ಅನೇಕ ಕಲ್ಪನೆಗಳನ್ನು ಹೊರಗೆಳೆಯುವರು; ವಿಶೇಷ ವಿನ್ಯಾಸಗಳಿಗೆ ದಾರಿ ತೋರಿಸುವರು. ಅವರು ಪಕ್ಕವಾದ್ಯಕ್ಕೆ ಕೂತರೆಂದರೆ ಕಚೇರಿಯಲ್ಲಿ ಬೇಸರದ ಗಳಿಗೆಯೆಂಬುದಿರದು. ಅವರಿದ್ದಾಗ ಗಾಯಕ ಸಪ್ಪೆಯಾಗಿರುವುದು ಸಾಧ್ಯವಿಲ್ಲ.

ಪೈಪೋಟಿ, ಮೇಲಾಟ ಎಂಬುದು ಕಚೇರಿಯ ಕಳೆಗಟ್ಟಲು ಮಾತ್ರ; ಗಾಯಕರನ್ನು ಕೆರಳಿಸಲು ಅಷ್ಟೆ. ಅವರ ಕಚೇರಿಯಲ್ಲಿ ಎಂದೂ ಗಾಯಕರನ್ನು ಅವರು ಕಡೆಗಾಣಿಸಿದ್ದಿಲ್ಲ. ತಮಗೆ ಗಾಯಕರ ಸಂಗೀತ ಮೆಚ್ಚಿಗೆಯಾಯಿತೆಂದು ಅಡಿಗಡಿಗೆ ಸೂಚಿಸುವರು. ವಾಡಿಕೆಯಲ್ಲ ದಿದ್ದರೂ, ಪಕ್ಕವಾದ್ಯದ ಚೌಡಯ್ಯ ಪ್ರಧಾನ ಗಾಯಕರಿಗೆ 'ಭಲೆ', 'ಓಹೋ' ಎಂದು ವೇದಿಕೆಯ ಮೇಲೇ ಪ್ರಶಂಸನೆ ನೀಡುವರು. ಅವರು ಮನಸಾರೆ ಮೆಚ್ಚಿಕೊಂಡಿದ್ದ ಗಾಯಕರಲ್ಲಿ ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರು, ಮಧುರೆ ಮಣಿ ಅಯ್ಯರ್, ಜಿ. ಎನ್. ಬಾಲಸುಬ್ರಹ್ಮಣ್ಯಂ ಸೇರುತ್ತಾರೆ. ಕಾರೈಕ್ಕುಡಿ ಸಾಂಬಶಿವಯ್ಯರ ವೀಣೆಯೆಂದರೆ ಚೌಡಯ್ಯನಿಗೆ ಬಲು ಪ್ರೀತಿ. ಪಾಲಕ್ಕಾಡು ಮಣಿ ಅಯ್ಯರ ಮೃದಂಗವೆಂದರೂ ಅಷ್ಟೇ ಅಕ್ಕರೆ. ಟಿ. ಆರ್. ಮಹಾಲಿಂಗಂ ಅವರ ಕೊಳಲು ವಾದನಕ್ಕೆ ಮನಸೋತಿದ್ದವರು ಅವರು.

ಒಮ್ಮೆ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರ ಕಚೇರಿ; ಚೌಡಯ್ಯನವರದ್ದೇ ಪಕ್ಕವಾದ್ಯ. ಅಯ್ಯಂಗಾರ್ಯರು ದೇವಮನೋಹರಿ

ರಾಗದ ತ್ಯಾಗರಾಜರ ಕೃತಿ "ಎವರಿಕೈ ಅವತಾರಮೆತ್ತಿತಿವೋ" ಎಂಬುದನ್ನು ಹಾಡುತ್ತಿದ್ದರು. ಚೌಡಯ್ಯ ನುಡಿಸುವುದನ್ನು ಬಿಟ್ಟು, ಕಣ್ಣು ಮುಚ್ಚಿ ಕೇಳುತ್ತಾ ಕುಳಿತರು. ಕೃತಿಯನ್ನು ಹಾಡಿ ಮುಗಿಸಿದಾಗ, ಚೌಡಯ್ಯ ಕೈಜೋಡಿಸಿ "ತಮಗಾಗಿಯೇ ತ್ಯಾಗರಾಜರು ಈ ಕೃತಿಯನ್ನು ರಚಿಸಿದಂತಿದೆ. ಇವತ್ತಿನ ಹಾಡಿಕೆ ದೇವಲೋಕದವರು ಕೇಳಬೇಕಾದುದು. ತಮ್ಮನ್ನು ಹೀಗೆಯೇ ಹಾಡುತ್ತಾ ನೂರುವರ್ಷ ಇರುವಂತೆ ದೇವರು ಅನುಗ್ರಹಿಸಲಿ!" ಎಂದರು. ಅದಕ್ಕೆ ಅಯ್ಯಂಗಾರ್ಯರು, "ಚೌಡಯ್ಯ, ನೀವು ಅಷ್ಟು ಕಾಲವೂ ಪಕ್ಕವಾದ್ಯ ನುಡಿಸುತ್ತಲೇ ಇರುವುದಾದರೆ ಹಾಗೆಯೇ ಆಗಲಿ, ಅದಕ್ಕೇನು?" ಎಂದು ನಕ್ಕರು.

ಇನ್ನೊಂದು ಸಾರಿ ಮೈಸೂರಿನ ಪ್ರಸನ್ನ ಸೀತಾರಾಮಮಂದಿರದಲ್ಲಿ ಟಿ. ಆರ್. ಮಹಾಲಿಂಗಂ ಅವರ ಕೊಳಲು ಕಚೇರಿ; ಚೌಡಯ್ಯನವರ ಪಿಟೀಲು. ಮಹಾಲಿಂಗಂ ಸೊಗಸಾದ ಭೈರವಿ ಆಲಾಪನೆ ಮಾಡಿ ಮುಗಿಸಿದರು. ಚೌಡಯ್ಯನವರಿಗೆ ನುಡಿಸಲು ಅವಕಾಶ ಮಾಡಿಕೊಟ್ಟು ಕೊಳಲನ್ನು ಕೆಳಗಿಟ್ಟರು. ಚೌಡಯ್ಯ "ನೀವು ಭೈರವಿ ರಾಗದ ಸಂಚಾರಗಳನ್ನೆಲ್ಲ ದಿವ್ಯವಾಗಿ ನುಡಿಸಿ ಸಭೆಯಲ್ಲೊಂದು ರಸಸನ್ನಿವೇಶವನ್ನು ಸೃಷ್ಟಿಸಿದ್ದೀರಿ. ನನ್ನ ನುಡಿಸಾಣಿಕೆಯಿಂದ ಅದನ್ನು ಕೆಡಿಸಲು ನನಗೆ ಇಷ್ಟವಿಲ್ಲ! ನೀವೇ ಮುಂದರಿಸಿ" ಎಂದು ಹೇಳಿ ಸುಮ್ಮನಾದರು. ಅಷ್ಟು ಸಹೃದಯತೆ ಅವರದ್ದು.

ಮತ್ತೊಮ್ಮೆ ಶೆಮ್ಮಂಗುಡಿ ಶ್ರೀನಿವಾಸಯ್ಯರ ಕಚೇರಿಯಲ್ಲೂ ಹೀಗೆಯೇ ಆಯಿತು. ಅವರು ಮುಖಾರಿ ರಾಗವನ್ನು ವಿಸ್ತಾರವಾಗಿ ಆಲಾಪನೆ ಮಾಡಿ, ಚೌಡಯ್ಯನವರಿಗೆ ತನಿ ಪಿಟೀಲನ್ನು ನುಡಿಸಲು ಬಿಟ್ಟರು. ಚೌಡಯ್ಯನವರು "ಅಣ್ಣಾ, ನಾನು ನುಡಿಸಬಹುದಾದುದು ಏನಿದೆ? ಮುಖಾರಿಯ ಸರ್ವಸ್ವವನ್ನೂ ಸುಂದರವಾಗಿ ತೋರಿಸಿಬಿಟ್ಟಿದ್ದೀರಿ! ಶ್ರೋತೃಗಳ ಕಿವಿಯಲ್ಲಿ ಅದು ಇನ್ನೂ ಮೊರೆಯುತ್ತಿದೆ. ಆ ಅನುಭವವನ್ನು ನಾನು ಕೆಡಿಸಲೆ?" ಎಂದು ವಿನಯದಿಂದ ಪಿಟೀಲನ್ನು ಕೆಳಗಿಟ್ಟರು.

ಅವರ ಶಿಷ್ಯರಾದ ವಿ. ಸೇತುರಾಮಯ್ಯನವರು ಉಲ್ಲೇಖಿಸಿರುವ ಇನ್ನೊಂದು ಸಂದರ್ಭ. ಮಹಾರಾಜಪುರಂ ವಿಶ್ವನಾಥಯ್ಯರು ಮದ್ರಾಸಿನ

ರಸಿಕರಂಜನಿ ಸಭೆಯಲ್ಲಿ ಸಾವೇರಿ ರಾಗದ ಆಲಾಪನೆ ಮಾಡಿ, ಚೌಡಯ್ಯನವರಿಗೆ ತನಿ ಬಿಟ್ಟರು. ಆ ಹೊತ್ತು ವಿಶ್ವನಾಥಯ್ಯರವರದ್ದು ಅಪೂರ್ವವಾದ ಮನೋಧರ್ಮ, ಅದ್ಭುತವಾದ ಕಲ್ಪನೆ, ಮೋಹಕವಾದ ಶಾರೀರ. ಚೌಡಯ್ಯ ಕೇಳುತ್ತ ಕೇಳುತ್ತಾ ಮುಗ್ಧರಾಗಿಬಿಟ್ಟರು; ಪಿಟೀಲು ನುಡಿಸುವುದನ್ನೂ ಬಿಟ್ಟು ಕಣ್ಣು ಮುಚ್ಚಿ ಭಾವಸಮಾಧಿಯೋ ಎಂಬಂತೆ ಕೂತುಬಿಟ್ಟರು. ತನಿ ನುಡಿಸುವ ಕರೆ ಬಂದಾಗ “ಅಣ್ಣಾ, ನೀವು ಹಾಡಿದಂತೆ ನಾನು ನುಡಿಸಬಲ್ಲೆನೆ? ಈಗ ನಾನು ನುಡಿಸಿದರೆ ಸಾವೇರಿ ರಾಗಕ್ಕೇ ಅಪಚಾರವಾದೀತು! ರಸಿಕರು ನನ್ನನ್ನು ಸುಮ್ಮನೆ ಬಿಟ್ಟಾರೇ? ತನಿ ಬೇಡ; ಕೃತಿಯನ್ನು ಹಾಡಿಬಿಡಿ!” ಎಂದರು.

ಅವರು ಎಷ್ಟು ದೊಡ್ಡ ವಿದ್ವಾಂಸರೋ ಅಷ್ಟೇ ದೊಡ್ಡ ರಸಿಕರು. ರಸಾನುಭವ ಎಲ್ಲಿಂದ ಬಂದರೂ ಸವಿದು ಸಂತೋಷ ಪಡುತ್ತಿದ್ದವರು. ಸಮಯಸ್ಫೂರ್ತಿ ಅವರ ವಿಶೇಷ ಗುಣವೆಂಬುದನ್ನು ಇನ್ನೊಂದು ನಿದರ್ಶನದಿಂದ ತಿಳಿಯಬಹುದು. ಇದನ್ನು ಅವರ ಮಿತ್ರರು ಮೈಸೂರಿನ ಶ್ರೀಕಂಠಯ್ಯನವರು ಉಳಿಸಿದ್ದಾರೆ. ಮೈಸೂರಿನಲ್ಲಿ ಚೌಡಯ್ಯನವರ ಅಭಿಮಾನಿಗಳಲ್ಲಿ, ಆಪ್ತಮಿತ್ರರಲ್ಲಿ ಅಡ್ವೊಕೇಟ್ ಕೆ. ಪುಟ್ಟೊರಾಯ ರೆಂಬುವರು (೧೮೯೪–೧೯೫೯) ಪ್ರಮುಖರು. ಇವರ ಬಂಗಲೆಯಲ್ಲಿ ಸಂಗೀತ ಸಮಾರಾಧನೆ ನಡೆಯುತ್ತಲೇ ಇದ್ದಿತು. ಅರಮನೆಯಲ್ಲಿ ನಡೆಯುವ ಸಭೆಗಳು ಕೆಲವರಿಗೆ ಮಾತ್ರವಾದರೆ ಇಲ್ಲಿನವು ಹಲವರಿಗೆ. ಅವರ ಮಕ್ಕಳಿಗೆಲ್ಲ ಚೌಡಯ್ಯನವರು ಪ್ರಿಯರೇ. ಒಬ್ಬ ಮಗ ಕೆ. ಕೆ. ಮೂರ್ತಿಯವರ ಸಾಹಸದ ಫಲವೇ ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನ. ಇನ್ನೊಬ್ಬ ಮಗ ಕೆ. ಕೆ. ಶ್ರೀಕಂಠಯ್ಯ ಮೈಸೂರಿನಲ್ಲೇ ಇದ್ದುಕೊಂಡು ಚೌಡಯ್ಯನವರ ನೆನಪಿಗಾಗಿ ಪ್ರತಿ ವರ್ಷವೂ ಹನ್ನೆರಡು ದಿನಗಳ ರಾಮೋತ್ಸವವನ್ನು ನಡೆಸುತ್ತಿದ್ದಾರೆ.

ಬಿಡಾರದ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮಮಂದಿರದಲ್ಲಿ ಒಂದು ವರ್ಷ ರಾಮೋತ್ಸವದ ಕಚೇರಿಗಳು ನಡೆಯುತ್ತಿದ್ದುವು; ಚೌಡಯ್ಯನವರದ್ದೇ ವ್ಯವಸ್ಥೆ. ಆ ದಿನ ಆಲತ್ತೂರು ಸಹೋದರರ ದ್ವಂದ್ವ ಗಾಯನ; ಚೌಡಯ್ಯನವರದ್ದೇ ಪಿಟೀಲು ಪಕ್ಕವಾದ್ಯ; ಪಾಲಕ್ಕಾಡು ಮಣಿ ಅಯ್ಯರ ಮೃದಂಗ. ಕಚೇರಿಯ ಕಡೆಯಲ್ಲಿ ರಾಗ, ತಾನ, ಪಲ್ಲವಿ. ಸಹೋದರರು

ತೀರ ಅಪುರೂಪವಾದ ಪಲ್ಲವಿಯೊಂದನ್ನು ಸಿದ್ಧಪಡಿಸಿಕೊಂಡು ಬಂದಿದ್ದರು; ತಾಳ ಯಾವುದೆಂದು ತಟ್ಟನೆ ತಿಳಿಯುವಂತಿರಲಿಲ್ಲ. ಸಭೆಯಲ್ಲಿದ್ದ ಚೌಡಯ್ಯನವರ ಮಿತ್ರರು ಕೊಂಚ ಕಳವಳಕ್ಕೀಡಾದರು; ಚೌಡಯ್ಯನವರು ಇದನ್ನು ಹೇಗೆ ನಿರ್ವಹಿಸುತ್ತಾರೋ ಎಂಬ ಚಿಂತೆ. ಚೌಡಯ್ಯನವರೇನೋ ನೆಮ್ಮದಿಯಿಂದಲೇ ಇದ್ದರು. ಪಲ್ಲವಿ ಹಾಡುತ್ತಿರುವಾಗ ಜೊತೆಗೆ ಪಿಟೀಲಿನ ನಾದ ಮೇಲೆ ಮೇಲೆ ಅನುಸರಿಸುತ್ತಿತ್ತು. ಪಲ್ಲವಿ ಹಾಡಿಕೆ ಮುಗಿದ ಮೇಲೆ ಪಿಟೀಲಿನ ತನಿವಿನಿಕೆ ನಡೆಯಬೇಕಷ್ಟೆ. ಚೌಡಯ್ಯನವರ ಪಿಟೀಲಿನಿಂದ ಭೋರ್ಗರೆಯುವ ತನಿಯ ಅಲೆಗಳು ಮೇಲೆದ್ದು ಸಭಾಭವನವನ್ನೆಲ್ಲ ತುಂಬಿಸಿದುವು; ತನಿವಿನಿಕೆಯಿಂದ ಗಾಯಕರೂ ಸ್ಫೂರ್ತಿಗೊಂಡು ಸ್ವರಪ್ರಸ್ತಾರವನ್ನು ಉತ್ತಮ ಮನೋಧರ್ಮದಿಂದ ಪೂರೈಸಿದರು. ಸಭೆಯಲ್ಲಿದ್ದವರು ಪಿಟೀಲಿನ ಮೋಡಿಯಿಂದ ಹೊರಹೊಮ್ಮಿಸಿದ ಕೈ ಚಪ್ಪಾಳೆ ಕೆಲ ನಿಮಿಷಗಳು ನಿಲ್ಲಲೇ ಇಲ್ಲ.

ಮರುದಿನ ಇದೇ ಸಭಾಭವನದಲ್ಲಿ ಇನ್ನೊಂದು ಬೇರೊಬ್ಬರ ಕಚೇರಿ; ಬೇರೆ ಪಕ್ಕವಾದ್ಯದವರು. ಚೌಡಯ್ಯನವರೂ, ಶ್ರೀಕಂಠಯ್ಯನವರೂ ಸಭೆಯಲ್ಲಿ ಮುಂದಿನ ಸಾಲಲ್ಲೇ ಕುಳಿತಿದ್ದಾರೆ. ಚೌಡಯ್ಯನವರು ಯಾವುದೋ ಧ್ಯಾನದಲ್ಲಿದ್ದಂತೆ ಇದ್ದರು. ಕೈ ಬೆರಳುಗಳಿಂದ ತಾಳದ ಎಣಿಕೆ ನಡೆಯುತ್ತಲಿತ್ತು; ಆದರೆ ಆಗ ನಡೆಯುತ್ತಿದ್ದ ಹಾಡಿಕೆಯ ತಾಳವಲ್ಲ ಇದು. ಪಕ್ಕದಲ್ಲಿ ಕೂತಿದ್ದ ಶ್ರೀಕಂಠಯ್ಯನವರಿಗೆ ಇದು ಸೋಜಿಗವೆನಿಸಿತು; ಆದರೂ ಅವರೇನೂ ಮಾತನಾಡಲಿಲ್ಲ. ಕೊಂಚ ಹೊತ್ತಾದ ಮೇಲೆ, ಚೌಡಯ್ಯನವರು ಶ್ರೀಕಂಠಯ್ಯನ ಕಿವಿಯಲ್ಲಿ "ನೆನ್ನೆ ಪಲ್ಲವಿ ಹಾಡಿದರಲ್ಲ, ಆ ತಾಳ ಯಾವುದು?" ಎಂದು ಪಿಸುಮಾತಿನಲ್ಲಿ ಕೇಳಿದರು.

ಶ್ರೀಕಂಠಯ್ಯನವರಿಗೆ ಇನ್ನಷ್ಟು ಆಶ್ಚರ್ಯವಾಯಿತು. "ಏನು ಹೀಗೆ ಕೇಳುತ್ತೀರಿ? ಅಷ್ಟು ಭರ್ಜರಿಯಾಗಿ ತನಿ ನುಡಿಸಿ ಎಲ್ಲರನ್ನೂ ದಿಗ್ಭ್ರಮೆಗೊಳಿಸಿದಿರಿ. ನಿಮಗೆ ತಾಳ ತಿಳಿಯಲಿಲ್ಲವೆಂದು ಯಾರು ನಂಬಿಯಾರು? ತಮಾಷೆ ಮಾಡುತ್ತಿದ್ದೀರಿ!" ಎಂದರು. ಚೌಡಯ್ಯನವರು ಗಂಭೀರವಾಗಿ "ಇಲ್ಲಯ್ಯ, ತಮಾಷೆ ಮಾಡುತ್ತಿಲ್ಲ. ತಾಳ ತಿಳಿಯಲಿಲ್ಲ;

ಅದನ್ನೇ ಕುರಿತು ನೆನ್ನೆ ರಾತ್ರಿಯಿಂದ ಆಲೋಚನೆ ಮಾಡುತ್ತಿದ್ದೇನೆ. ಹಿಡಿತಕ್ಕೆ ಸಿಗವೊಲ್ಲದು!" ಎಂದು ಹೇಳಿದರು.

ಪಲ್ಲವಿಯ ತಾಳ ನಿರ್ದಿಷ್ಟವಾಗಿ ತಿಳಿಯದಿದ್ದರೂ, ನಡೆಯ ಜಾಡಿನಿಂದಲೇ ತಾವು ಪಲ್ಲವಿ ತನಿಯನ್ನು, ಯಾರಿಗೂ ತಮಗೆ ತಿಳಿಯದೆಂಬ ಸುಳಿವು ತಿಳಿಯದಂತೆ, ಅಚ್ಚುಕಟ್ಟಾಗಿ, ಎಲ್ಲರೂ ಮೆಚ್ಚುವಂತೆ, ನುಡಿಸಿದ ಆ ಎದೆಗಾರಿಕೆ, ಸಮಯಸ್ಫೂರ್ತಿ ಬೇರೆ ಯಾರಿಗಿದ್ದೀತು? ಆದರೆ ಆ ಅಪುರೂಪ ತಾಳದ ವಿಶೇಷವನ್ನು ತಿಳಿದುಕೊಳ್ಳಬೇಕೆಂಬ ತವಕವೂ ಇದ್ದಿತಲ್ಲ! ಮರುದಿನ ಸಂಜೆಯೂ ಅದರದ್ದೇ ಚಿಂತೆ ! ಅದೊಂದು ಅವರ ವಿಶೇಷ ಗುಣ.

ತಿರುಚ್ಚಿರಪಳ್ಳಿಯಲ್ಲಿ ಅವರದ್ದೊಂದು ತನಿ ಪಿಟೀಲು ಕಚೇರಿ. ಕಡೆಯಲ್ಲಿ ರಸಿಕರೊಬ್ಬರು ಎದ್ದು ನಿಂತು ಜನರಂಜನಿರಾಗವನ್ನು ನುಡಿಸಿರೆಂದು ಅರಿಕೆ ಮಾಡಿಕೊಂಡರು. ಆ ರಾಗವನ್ನು ವಿಸ್ತಾರವಾಗಿ ಚೌಡಯ್ಯ ಅವರೆಗೆ ಎಂದೂ ನುಡಿಸಿದ್ದಿಲ್ಲ. ಅದಕ್ಕಾಗಿ ಅವರು "ಯಾವ ದೊಡ್ಡ ರಾಗವೆಂದು ಅದನ್ನು ಕೇಳಿದಿರಿ?" ಎಂದು ಹೇಳಿ ಮತ್ತೆ ಯಾವುದೋ ಕೃತಿಯನ್ನು ನುಡಿಸಿ ಸಭೆಯನ್ನು ಮುಗಿಸಿದರು. ಆದರೆ ರಾತ್ರಿ ಒಬ್ಬರೇ ಹೋಟೆಲಿನ ಕೋಣೆಯಲ್ಲಿದ್ದಾಗ ಸಭೆಯಲ್ಲಿ ತಾವು ಮಾಡಿದ್ದು ತಪ್ಪೆನಿಸಿತು. ಒಡನೆಯೇ ಎದ್ದು ಜನರಂಜನಿ ರಾಗದಲ್ಲಿ ತಮಗೆ ತಿಳಿದಿದ್ದ ಕೀರ್ತನೆಗಳನ್ನೆಲ್ಲಾ ನುಡಿಸಿ ರಾಗದ ಸ್ವರೂಪವನ್ನು ಮನದಟ್ಟು ಮಾಡಿಕೊಂಡರು. ರಾತ್ರಿ ಬಹು ಹೊತ್ತಿನವರೆಗೆ ಆ ರಾಗವನ್ನು ನುಡಿಸಿ ಅದನ್ನು ಗಟ್ಟಿಮಾಡಿಕೊಂಡರು.

ಮರುದಿನ ಬೆಳಿಗ್ಗೆ ಅವರ ಮಿತ್ರರೂ ಮತ್ತೆ ಕೆಲವರು ರಸಿಕರೂ ವಾಡಿಕೆಯಂತೆ ಚೌಡಯ್ಯನವರನ್ನು ಕಾಣಲು, ಹಿಂದಿನ ದಿನದ ಕಚೇರಿಯಿಂದಾದ ಸಂತೋಷವನ್ನು ತಿಳಿಸಲು, ಬಂದರು; ಔಪಚಾರಿಕವಾಗಿ ಭೇಟಿಯಾಗಲು ಅಷ್ಟೆ. ಬಂದವರಲ್ಲಿ ಜನರಂಜನಿ ರಾಗವನ್ನು ಕೇಳಲು ಬಯಸಿದ್ದವರೂ ಇದ್ದರು. ಅವರ ಆಗಮನವನ್ನು ಚೌಡಯ್ಯನವರು ನಿರೀಕ್ಷಿಸಿರಲಿಲ್ಲ. ಅವರನ್ನು ಕಂಡೊಡನೆ ಚೌಡಯ್ಯ, "ನಿನ್ನೆ ನೀವು ಜನರಂಜನಿ ರಾಗವನ್ನು ನುಡಿಸುವಂತೆ ಕೇಳಿದಿರಿ. ನಾನು ಏನೋ ಹೇಳಿ

ನಿಮಗೆ ಅಪಚಾರವನ್ನು ಮಾಡಿದೆ. ಈಗ ಕೂಡಿ. ಆ ರಾಗವನ್ನು ನುಡಿಸುತ್ತೇನೆ, ಕೇಳಿ!" ಎಂದು ಹೇಳಿ ಒಂದು ಗಂಟೆಯ ಕಾಲ ಜನರಂಜನಿ ರಾಗದ ಆಲಾಪನೆಯನ್ನು ನುಡಿಸಿ ಅವರನ್ನು ತಣಿಸಿದರು.

ಇಷ್ಟು ಕರ್ತವ್ಯಶ್ರದ್ಧೆ ಚೌಡಯ್ಯನವರದ್ದು. ರಸಿಕರನ್ನು ಕುರಿತಂತೆ ತಮ್ಮದೊಂದು ಹೊಣೆಗಾರಿಕೆ ಇದೆ ಎಂದು ನಂಬಿದ್ದವರು ಅವರು. ಭಗವಂತ ತಮಗೆ ಈ ಬಗೆಯ ಪ್ರವೃತ್ತಿಯನ್ನೂ, ಸಾಮರ್ಥ್ಯವನ್ನೂ ಕೊಟ್ಟು ಇಲ್ಲಿಗೆ ಕಳುಹಿಸಿ, ಚೆನ್ನಾಗಿ ಇರಿಸಿರುವಾಗ ತಮ್ಮದೊಂದು ಕರ್ತವ್ಯವೂ ಇದೆಯಲ್ಲವೆ? ರಸಿಕರ ಮನಸ್ಸಿಗೆ ಸಂತೋಷ‌ವನ್ನುಂಟುಮಾಡಬೇಕಾದುದು ತಮ್ಮ ಕರ್ತವ್ಯ. ಅವರು ಬಯಸಿದುದನ್ನು ಕಡೆಗಾಣಿಸಬಾರದು; ಅವರನ್ನು ಅಸಡ್ಡೆಯಿಂದ ಕಾಣಬಾರದು. ರಸಿಕರಲ್ಲಿಯೇ ಭಗವಂತ ಇದ್ದುಕೊಂಡು ತಮ್ಮನ್ನು ಪರೀಕ್ಷೆ ಮಾಡುತ್ತಿರುತ್ತಾನೆ ಎಂದು ವೀಣೆ ಶೇಷಣ್ಣನವರೂ, ಬಿಡಾರದ ಕೃಷ್ಣಪ್ಪನವರೂ ಅಡಿಗಡಿಗೆ ಹೇಳುತ್ತಿದ್ದುದು ಚೌಡಯ್ಯನವರ ಮೇಲೆ ಬಲವಾದ ಮುದ್ರೆಯನ್ನೊತ್ತಿದ್ದಿತು.

ಅವರ ಸಹೃದಯತೆಗೆ, ಸೌಹಾರ್ದಕ್ಕೆ, ಔದಾರ್ಯಕ್ಕೆ ಮತ್ತೊಂದು ನಿದರ್ಶನ. ಚೌಡಯ್ಯನವರ ಹಿಂದಿನ ಪೀಳಿಗೆಯ ಸಂಗೀತಪ್ರಪಂಚದಲ್ಲಿ ಪ್ರಸಿದ್ಧರಾಗಿದ್ದವರು ಕಾಂಚೀಪುರಂ ನಾಯನಾ ಪಿಳ್ಳೆ. ಅವರ ದಿಟವಾದ ಹೆಸರು ಸುಬ್ರಹ್ಮಣ್ಯ ಪಿಳ್ಳೆಯೆಂದು; ಅವರ ತಾಯಿ ಅವರನ್ನು 'ನಾಯನಾ' ಎಂದರೆ 'ಅಪ್ಪಾ' ಎಂದು ಕರೆಯುತ್ತಿದ್ದುದರಿಂದ ಅವರಿಗೆ ನಾಯನಾ ಪಿಳ್ಳೆಯೆಂದೇ ಎಲ್ಲರೂ ಕರೆಯುತ್ತಿದ್ದರು; ತುಂಬ ದೊಡ್ಡ ಗಾಯಕರು (೧೮೮೮—೧೯೩೪). ಶಾರೀರ, ಕಲ್ಪನೆ, ಮನೋಧರ್ಮ, ನಿರೂಪಣೆ ಎಲ್ಲದರಲ್ಲೂ ಎತ್ತಿದ ಕೈ. ಅಷ್ಟೇ ಉದಾರಿಗಳು, ನಿಷ್ಠುರು, ಗುಣಗ್ರಾಹಿಗಳು. ಆ ಕಾಲದಲ್ಲಿ ಅವರನ್ನು ಮೀರಿಸುವ ಪ್ರತಿಭೆ ಯಾರಿಗೂ ಇರಲಿಲ್ಲ. ಅವರು ಹಾಡುತ್ತಿದ್ದ ಚೆಂಚುರುಟಿ, ದೇವಗಾಂಧಾರಿ, ಬೇಗಡೆ ರಾಗಗಳಿಗೆ ರಸಿಕರೆಲ್ಲ ಮಾರುಹೋಗಿದ್ದರು. ಅವರ ಕಚೇರಿಯೆಂದರೆ 'ಫುಲ್ ಬೆಂಚ್' ಎಂದು ವಿನೋದವಾಗಿ ವರ್ಣಿಸುತ್ತಿದ್ದರು. ಸಾಮಾನ್ಯವಾಗಿ ಅವರಿಗೆ ಪಿಟೀಲು ಪಕ್ಕವಾದ್ಯ ಸೇಯತ್ತೂರು ಸುಂದರೇಶಭಟ್ಟರದ್ದು, ಅಥವಾ ಮಲೈಕ್ಕೋಟ್ಟೈ (ತಿರುಚಿ) ಗೋವಿಂದಸ್ವಾಮಿ ಪಿಳ್ಳೆಯವರದ್ದು.

ಜೊತೆಗೆ ಅಳಗನಂಬಿಯವರ ಮೃದಂಗ, ಪುದುಕ್ಕೋಟೆ ದಕ್ಷಿಣಾಮೂರ್ತಿ ಪಿಳ್ಳೆಯವರ ಖಂಜೀರ, ಮನ್ನಾರ್‌ಗುಡಿ ಪಕ್ಕೀರಯ್ಯ ಪಿಳ್ಳೆಯವರ ಕೊನಕ್ಕೋಲು, ಉಮಯಾಳ್ಪುರಂ ಸುಂದರಮಯ್ಯರ ಘಟ, ಕುಂಭಕೋಣಂ ವೇಣು ಚೆಟ್ಟಿಯಾರರ ಡೋಲಕ್, ಆದಿತ್ಯಪುರಂ ಸೀತಾರಾಮಯ್ಯರ ಮೋರ್ಸಿಂಗ್! ಒಮ್ಮೆಮ್ಮೆ ಅವಿಡಯಾರ್ ಕೋವಿಲ್ ಹರಿಹರ ಭಾಗವತರ ಗೆತ್ತು ವಾದ್ಯವೂ ಸೇರುತ್ತಿತ್ತು.

ಅವರು ಸಂಗೀತದಿಂದ ಅಪಾರವಾದ ಸಂಪತ್ತನ್ನು ಗಳಿಸಿ ರಾಜಠೀವಿಯಿಂದ ಬದುಕಿದವರು; ಔದಾರ್ಯದಿಂದ ಅಷ್ಟೂ ಸಂಪತ್ತನ್ನು ವೆಚ್ಚಮಾಡಿ ಬಡತನವನ್ನು ವರಿಸಿದವರು. ಅವರ ಕಡೆಗಾಲದಲ್ಲಿ ಹಣವಿಲ್ಲದೆ ತುಂಬ ಪರದಾಡುವ ಸ್ಥಿತಿ ಬಂದುದು ಚೌಡಯ್ಯನವರ ಗಮನಕ್ಕೆ ಬಂದಿತು. ಚೌಡಯ್ಯ ಅವರಿಗೆ ಎಂದೂ ಪಕ್ಕವಾದ್ಯ ನುಡಿಸಿದ್ದಿಲ್ಲ. ಆದರೆ ಅವರೊಂದಿಗೆ ಪಕ್ಕವಾದ್ಯ ನುಡಿಸುತ್ತಿದ್ದ ಮಲೈಕ್ಕೋಟ್ಟೈ ಗೋವಿಂದಸ್ವಾಮಿ ಪಿಳ್ಳೆಯವರ ಪರಿಚಯವಿದ್ದಿತು; ಪಿಳ್ಳೆಯವರ ವಿಚಾರವಾಗಿ ತುಂಬ ಗೌರವವೂ ಇದ್ದಿತು.

ನಾಯನಾ ಪಿಳ್ಳೆಯವರಿಗೆ ಹಣವನ್ನು ಹಾಗೆಯೇ ಕೊಟ್ಟರೆ ಅವರು ಮುಟ್ಟರು ಎಂಬುದು ಚೌಡಯ್ಯನವರಿಗೆ ತಿಳಿದಿತ್ತು. ಪಿಳ್ಳೆಯವರ ಸ್ವಾಭಿಮಾನ, ಗಾಂಭೀರ್ಯ, ನೇಮಗಳು ಎಲ್ಲರಿಗೂ ತಿಳಿದಿದ್ದುವು. ಯಾವ ಶ್ರೀಮಂತನನ್ನೂ ಅರಸನನ್ನೂ ಅವರು ಆಶ್ರಯಿಸುತ್ತಿರಲಿಲ್ಲ. ತಾವು ಹಾಡಿ ಪ್ರತಿಫಲವಾಗಿ ಕೊಟ್ಟದ್ದನ್ನಷ್ಟೆ ಅವರು ಸ್ವೀಕರಿಸುವರು. ಬಂದು ಕೇಳಿದವರಿಗೆ ಕೊಟ್ಟೂ ಬಿಡುವರು! ಚೌಡಯ್ಯ ಅದಕ್ಕೊಂದು ಉಪಾಯ ಹೂಡಿದರು. ಆಗ ಬ್ರಾಡ್‌ಕ್ಯಾಸ್ಟ್ ರೆಕಾರ್ಡಿಂಗ್ (ಗ್ರಾಮೋಫೋನ್) ಕಂಪೆನಿ ಎಂಬುದೊಂದು ಸಂಸ್ಥೆ ಇದ್ದಿತು. ಸಂಗೀತವನ್ನು ಯಾಂತ್ರಿಕವಾಗಿ ಮುದ್ರಿಸಿಕೊಂಡು ಪ್ರತಿಗಳನ್ನು ಮಾಡಿ ಮಾರಾಟಮಾಡುವ ಹವಣಿಕೆ

ಅದರದ್ದು. ಅದರಿಂದ ಸಂಸ್ಥೆಗೆ ಆದಾಯ; ಅದರಲ್ಲೊಂದು ಪಾಲು ಸಂಗೀತ ಹಾಡಿದವರಿಗೆ, ಪಕ್ಕವಾದ್ಯ ನುಡಿಸಿದವರಿಗೆ ಸಂಭಾವನೆ; ಮೇಲಾಗಿ ಸಂಗೀತಗಾರರಿಗೆ ಪ್ರಚಾರ, ಜನಪ್ರೀತಿ. ಚೌಡಯ್ಯನವರು ಆ ವೇಳೆಗಾಗಲೇ ಪ್ರಸಿದ್ಧರಾಗಿದ್ದರು; ಅವರ ಮಾತು ನಡೆಯುತ್ತಿತ್ತು. ಈ ಸಂಸ್ಥೆಯವರೂ ಚೌಡಯ್ಯನವರ ನೆರವನ್ನು ಆಗಾಗ ಬಯಸುತ್ತಿದ್ದರು.

ಚೌಡಯ್ಯನವರು ಸಂಸ್ಥೆಯವರೊಂದಿಗೆ ಮಾತನಾಡಿ ಕಾಂಚೀಪುರಂ ನಾಯನಾ ಪಿಳ್ಳೈಯವರ ಸಂಗೀತವನ್ನು ಮುದ್ರಿಸಿಕೊಳ್ಳುವ ಏರ್ಪಾಡು ಮಾಡಿದರು. ಅವರ ಮುಖ್ಯ ಉದ್ದೇಶ ಪಿಳ್ಳೈಯವರ ಕಷ್ಟಕಾಲದಲ್ಲಿ ಇದು ಪ್ರಯೋಜನಕ್ಕೆ ಬಂದೀತು ಎಂದು. ಪಿಳ್ಳೈಯವರ ಹಾಡಿಕೆಗೆ ತಾವೇ ಪಿಟೀಲು ಪಕ್ಕವಾದ್ಯ ನುಡಿಸುವುದಾಗಿಯೂ ಆದರೆ ತಾವು ಯಾವ ಸಂಭಾವನೆಯನ್ನೂ ಸ್ವೀಕರಿಸುವುದಿಲ್ಲವೆಂದೂ, ಉಳಿದ ಪಕ್ಕವಾದ್ಯದವರನ್ನೂ ಇದೇ ರೀತಿ ಒಪ್ಪಿಸುವುದಾಗಿಯೂ, ಮುದ್ರಣಕ್ಕಾಗಿ ಕೊಡಬೇಕಾಗುವ ಹತ್ತು ಸಾವಿರ ರೂಪಾಯಿಗಳ ಇಡೀ ಮೊತ್ತವನ್ನು ನಾಯನಾ ಪಿಳ್ಳೈಯವರಿಗೇ ಕೊಡತಕ್ಕದ್ದೆಂದೂ ಕರಾರು ಮಾಡಿಕೊಂಡರು.

ಚೌಡಯ್ಯನವರು ಎಲ್ಲ ವ್ಯವಸ್ಥೆಯನ್ನೂ ಮಾಡಿ ಕಡೆಗೆ ನಾಯನಾ ಪಿಳ್ಳೈಯವರಲ್ಲಿ ಪ್ರಸ್ತಾಪ ಮಾಡಿದಾಗ ಅವರು, "ಎಲ್ಲಾದರೂ ಉಂಟೆ? ನಾನು ತ್ಯಾಗರಾಜಸ್ವಾಮಿಗಳ 'ನಿಧಿ ಚಾಲಾ ಸುಖಮಾ' ಕೀರ್ತನೆಯನ್ನು ಭಕ್ತಿಯಿಂದ ಹಾಡುವುದು, ಅದರ ಧ್ವನಿಮುದ್ರಿಕೆಯನ್ನು ಚಾ ಅಂಗಡಿಯವನು ಗಟ್ಟಿಯಾಗಿ ಹಾಕಿ ಬೀದಿಯಲ್ಲಿ ಬೀಡಿ ಸೇದಿಕೊಂಡು ಹೋಗುವವರಿಗೆಲ್ಲ ಕೇಳಿಸುವುದು! ನನ್ನ ಸಂಗೀತವನ್ನು ಹೀಗೆ ಬೀದಿಪಾಲು ಮಾಡಲಾರೆ. ನಾನು ಇಷ್ಟು ಕಾಲ ನಂಬಿಕೊಂಡು ಬದುಕಿರುವ ಸಂಗೀತಕ್ಕೇ ದ್ರೋಹ ಬಗೆದು ಬರುವ ಹಣ ನನಗೆ ಬೇಕಾದುದಿಲ್ಲ!" ಎಂದು ನಿರಾಕರಿಸಿಬಿಟ್ಟರು.

ಈ ಪ್ರಸಂಗದಿಂದ ಚೌಡಯ್ಯನವರ ಔದಾರ್ಯವೂ ತಿಳಿಯುತ್ತದೆ, ನಾಯನಾ ಪಿಳ್ಳೈಯವರ ಘನತೆಯೂ ತಿಳಿಯುತ್ತದೆ. ಸಂಗೀತ ಒದಗಿಸಬೇಕಾದ ಸಂಸ್ಕಾರವೆಂದರೆ ಇದೇ ಅಲ್ಲವೆ?

ಚೌಡಯ್ಯನವರು ಮತ್ತು ಬೆಂಬೈ ವೈದ್ಯನಾಥ ಭಾಗವತರು (ಕಾವಡಿಯ ಪಕ್ಕಗಳಲ್ಲಿ)

ಇನ್ನು ಚೆಂಬೈ ವೈದ್ಯನಾಥ ಭಾಗವತರಿಗೂ ಚೌಡಯ್ಯನವರಿಗೂ ಇದ್ದ ಸ್ನೇಹ, ಸೌಹಾರ್ದ ಎಲ್ಲರಿಗೂ ತಿಳಿದದ್ದೇ. ಎರಡು ದೇಹ, ಒಂದು ಪ್ರಾಣ ಎಂಬಂತಿದ್ದವರು ಅವರು. ಚೌಡಯ್ಯನವರ ಗುರುಗಳಾದ ಬಿಡಾರದ ಕೃಷ್ಣಪ್ಪನವರೇ ಭಾಗವತರ ಸಂಗೀತಕ್ಕೆ ಮಾರುಹೋಗಿದ್ದರು; ಅವರದ್ದು ಎಂಥ ಶಾರೀರ, ಎಂಥ ವಿದ್ವತ್ತು ಎಂದು ಹಾಡಿ ಹೊಗಳುತ್ತಿದ್ದರು; ಭಾಗವತರೂ ಕೃಷ್ಣಪ್ಪನವರ ಸಂಗೀತವನ್ನು ಕೇಳಿ ಅವರ ಭಾವಶುದ್ಧಿಗೆ, ಸ್ವರಶುದ್ಧಿಗೆ, ಸಂಪ್ರದಾಯಶುದ್ಧಿಗೆ ಮಣಿದಿದ್ದರು. ಈ ಪರಸ್ಪರವಾದ ಆದರ ಚೌಡಯ್ಯ–ಭಾಗವತರಲ್ಲಿಯೂ ಮುಂದರಿಯಿತು. ಅವರಿಬ್ಬರೂ ಜೊತೆಯಾಗಿ ಸಂಗೀತವನ್ನು ಒದಗಿಸಿದ ಸಂದರ್ಭಗಳು ಲೆಕ್ಕಕ್ಕೆ ಸಿಗಲಾರವು. ಅವರಿಬ್ಬರೂ ವೇದಿಕೆಯ ಮೇಲಿದ್ದರೆ ಸ್ಪಷ್ಟವಾಗುತ್ತಿದ್ದ ಗಂಧರ್ವ ಲೋಕವನ್ನು ರಸಿಕರು ಬಲ್ಲರು. ಚೌಡಯ್ಯನವರು ತೀರಿಕೊಂಡಾಗ, ಭಾಗವತರು ಮಗುವಿನಂತೆ ಕಣ್ಣೀರಿಟ್ಟರು; ಇನ್ನು ತಾವು ಮೈಸೂರಿನ ಕಡೆಯೇ ಬರಲಾರೆನೆಂದರು. ಮುಂದೆ ಚೌಡಯ್ಯನ ಹೆಸರನ್ನು ಯಾರಾದರೂ ಎತ್ತಿದರೆ ಸಾಕು, ಭಾಗವತರ ಕಣ್ಣಲ್ಲಿ ನೀರು ಚಿಮ್ಮುವುದು.

ಒಮ್ಮೆ ಭಾಗವತರು ತಮ್ಮೂರಿನ ಗುಡಿಯ ಪಾರ್ಥಸಾರಥಿಸ್ವಾಮಿ ಎಂಬ ದೇವರಿಗೆ ಬಂಗಾರದ ಕವಚವನ್ನು ಮಾಡಿಸಿಕೊಡುವ ಯೋಚನೆ ಮಾಡಿದರು. ಬಹುಕಾಲವಾದರೂ ಅದನ್ನು ನೆರವೇರಿಸುವ ಅನುಕೂಲ ಅವರಿಗಾಗಲಿಲ್ಲ; ಅದಕ್ಕೆ ಬೇಕಾದಷ್ಟು ಹಣ ಕೂಡಿಸಲಾಗಲಿಲ್ಲ. ಇದು ಹೇಗೋ ಚೌಡಯ್ಯನವರಿಗೆ ತಿಳಿಯಿತು; ಮೂರನೆಯ ಕಡೆಯಿಂದ. ಆ ಕಾಲದಲ್ಲಿ ಚೌಡಯ್ಯ 'ವಾಣಿ' ಎಂಬ ಚಲಚ್ಚಿತ್ರವನ್ನು ತೆಗೆಯುವ ಸನ್ನಾಹ ಮಾಡುತ್ತಿದ್ದರು. ಅದರಲ್ಲಿ ಒಂದು ಸಂಗೀತಸಭೆಯ ದೃಶ್ಯವನ್ನು ಕಲ್ಪಿಸಿಕೊಂಡು, ಇದರ ನಿರ್ವಹಣೆಗಾಗಿ ಭಾಗವತರನ್ನು ಕೇಳಿದರು. ಚಿತ್ರದಲ್ಲಿ ಪಾತ್ರ ಅವರದ್ದು ಸಂಗೀತಗಾರರಾಗಿ ಅಷ್ಟೆ; ನಿತ್ಯಜೀವನದಿಂದ ಬೇರೆಯೇನೂ ಅಲ್ಲ. ಭಾಗವತರು ಒಪ್ಪಿ ಚಿತ್ರದಲ್ಲಿ ಹಾಡಿದರು. ಈ ಪಾತ್ರ ನಿರ್ವಹಣೆಯಿಂದ ಭಾಗವತರಿಗೆ ಬಂದ ಸಂಭಾವನೆ (ಐದು ಸಾವಿರ ರೂಪಾಯಿಗಳು) ಅವರೂರ ದೇವರಿಗೆ ಕವಚ ಮಾಡಿಸಿಕೊಡಲು ಸಾಕಾಯಿತು. ಭಾಗವತರಿಗೆ ಚೌಡಯ್ಯನ ತಂತ್ರ ತಿಳಿದದ್ದು ಅನಂತರವೆ!

ಇದೇ ಸಂದರ್ಭದಲ್ಲಿ ಚೌಡಯ್ಯನವರ ಇನ್ನೊಂದು ಪ್ರಯೋಗವನ್ನೂ ಕುರಿತು ಹೇಳಬೇಕು. ಅದು ಅವರ 'ವಾಣಿ' ಎಂಬ ಚಲಚ್ಚಿತ್ರದ ನಿರ್ದೇಶನವನ್ನು ಕುರಿತದ್ದು. ಇದೇನೂ ಯಶಸ್ವಿಯಾದ ಪ್ರಯೋಗ ವಾಗಲಿಲ್ಲವೆನ್ನಿ. ೧೯೪೩ನೆಯ ಇಸ್ವಿಯಲ್ಲಿ ಹೊಸ ವರ್ಷದ ಹರುಷದಲ್ಲೇ ಈ ಕನ್ನಡ ಚಿತ್ರದ ಪಡಿಯಚ್ಚು (ಪ್ರಿಂಟ್) ಸಿದ್ಧವಾಯಿತು. ಅದರಲ್ಲಿ ನಾಯಕ ಪಾತ್ರ ಚೌಡಯ್ಯನವರದ್ದೇ. ಪಾತ್ರ ವಹಿಸಿದುದು ಮಾತ್ರವಲ್ಲ, ನಿರ್ದೇಶನವೂ ಅವರದ್ದೇ; ನಿರ್ಮಾಪಕರೂ ಅವರೇ; ಸುಪ್ರಸಿದ್ಧ ಹಾಸ್ಯನಟ ಕೆ. ಹಿರಣ್ಣಯ್ಯ ಸಹನಿರ್ಮಾಪಕರು. 'ಎಚ್‌ಆರ್‌ಜಿಸಿ ಶ್ರೀ ಪಿಕ್ಚರ್ಸ್' ಎಂಬ ಸಂಸ್ಥೆ ಇದರ ನಿರ್ಮಾಣವನ್ನು ಕೈಗೊಂಡಿದ್ದಿತು. ನಾಗೇಂದ್ರರಾಯರ 'ಸತ್ಯ ಹರಿಶ್ಚಂದ್ರ' (ಕನ್ನಡ–ತಮಿಳು), ಕೆ. ಸುಬ್ರಹ್ಮಣ್ಯಂ ಅವರ 'ಕೃಷ್ಣ ಸುದಾಮ' ಇವನ್ನು ಆಗಲೇ ತೆರೆಗೆ ತಂದಿದ್ದ ಸಂಸ್ಥೆ ಅದು.

ಚೌಡಯ್ಯನವರ 'ವಾಣಿ' ಚಿತ್ರದ ನಟ-ನಟಿ ವರ್ಗದಲ್ಲಿ ಚೌಡಯ್ಯ, ಹಿರಣ್ಣಯ್ಯ ಇವರಿಬ್ಬರಲ್ಲದೆ ಪಂಢರಿಬಾಯಿ, ಬಳ್ಳಾರಿ ರತ್ನಮಾಲಾ, ಬಳ್ಳಾರಿ ಲಲಿತಾ, ಕೆ. ವಿ. ಅಚ್ಯುತರಾವ್, 'ಮುಸಿರಿ' ಕೃಷ್ಣಮೂರ್ತಿ (ಇವರಿಗೂ ಮುಸಿರಿ ಸುಬ್ರಹ್ಮಣ್ಯಯ್ಯರಿಗೂ ಏನೂ ಸಂಬಂಧವಿಲ್ಲ; ಇವರ ಶಾರೀರ ಮುಸಿರಿಯವರ ಶಾರೀರದಂತೆಯೇ ಇದ್ದುದರಿಂದ ಸ್ನೇಹಿತರು ಇವರನ್ನು 'ಮುಸಿರಿ' ಎಂದು ಕರೆಯತೊಡಗಿದರು). ಕಥೆಯ ರಚನೆ ಹಿರಣ್ಣಯ್ಯನದು; ಸಂಗೀತವೆಲ್ಲ ಚೌಡಯ್ಯನದು. ಚೌಡಯ್ಯನಿಗೆ ಸಂಗೀತ ಸಂಯೋಜನೆಯಲ್ಲಿ ನೆರವಾದವರು ಹಾರ್ಮೋನಿಯಂ ಶೇಷಗಿರಿರಾಯರು. ಚೆಂಬೈ ವೈದ್ಯನಾಥ ಭಾಗವತರು ಹಾಡುವ ದೃಶ್ಯದ ವಿಚಾರ ಆಗಲೇ ಬಂದಿತಲ್ಲ. ಅವರು ಅಲ್ಲಿ ಹಾಡಬೇಕಾಗಿದ್ದ 'ನಿಖಿಲಪಾಪವಿನಾಶಿನಿ' ಎಂಬ ಷಣ್ಮುಖಪ್ರಿಯ ರಾಗದ ಹಾಡನ್ನು ಚೌಡಯ್ಯನವರೇ ರಚಿಸಿದರು. ಪಾಲಕ್ಕಾಡು ಮಣಿ ಅಯ್ಯರ್ ಭಾಗವತರಿಗೆ ಮೃದಂಗ ಪಕ್ಕವಾದ್ಯ. ಭಾಗವತರು ತೆರೆಯಮೇಲೆ ಕಾಣಿಸಿಕೊಂಡದ್ದು ಹತ್ತು ನಿಮಿಷಗಳು ಮಾತ್ರ! ಚಿತ್ರ ಸಂಗೀತಗಾರನ ಬದುಕು-ಬವಣೆಗಳಿಗೇ ಸಂಬಂಧಿಸಿದ್ದಿತು. ನಡುನಡುವೆ ಹಿರಣ್ಣಯ್ಯನ ಹಾಸ್ಯ ವಿಷ್ಕಂಭಕಗಳು. ಅದರಲ್ಲಿ ಚೌಡಯ್ಯನವರೇ 'ಜಾನಕೀರಮಣ', 'ಚಿದಂಬರ' ಮೊದಲಾದ ಹಾಡು ಗಳನ್ನು ಹಾಡಿದ್ದಾರೆ. ಬಳ್ಳಾರಿ ಲಲಿತ ಅವರ ಜೊತೆಗೂ ಒಂದು ಹಾಡನ್ನು

ಹಾಡಿದ್ದಾರೆ. ಆದರೆ ಚಿತ್ರ ತೆರೆಯಮೇಲೆ ಬಂದಾಗ ಜನಪ್ರಿಯವಾಗಲಿಲ್ಲ; ಹೇಳ ಹೆಸರಿಲ್ಲದೆ ಮೂಲೆಗುಂಪಾಗಿ ಬಿದ್ದಿತು. ಚೌಡಯ್ಯನವರು ವೆಚ್ಚ ಮಾಡಿದ ಹಣ ವ್ಯರ್ಥವಾಯಿತು; ಇದ್ದ ಅವರ ಸಂಪತ್ತು ಕೈಬಿಟ್ಟಿತು! ಮತ್ತೆ ಇಂಥ ಪ್ರಯೋಗಕ್ಕೆ ಅವರು ಕೈ ಹಾಕಲಿಲ್ಲ.

ಆ ಕಾಲದಲ್ಲಿ ಕೆಲವು ಶಾಸ್ತ್ರೀಯ ಸಂಪ್ರದಾಯ ಸಂಗೀತಗಾರರು ತೆರೆಯ ಮೇಲೆ ಕಾಣಿಸಿಕೊಂಡದ್ದುಂಟು. ಮಹಾರಾಜಪುರಂ ವಿಶ್ವನಾಥಯ್ಯರು, ಮುಸಿರಿ ಸುಬ್ರಹ್ಮಣ್ಯಯ್ಯರು, ಪಾಪನಾಶಂ ಶಿವನ್, ದಂಡಪಾಣಿ ದೇಶಿಕರು, ಜಿ. ಎನ್. ಬಾಲಸುಬ್ರಹ್ಮಣ್ಯಂ, ಎಂ. ಎಸ್. ಸುಬ್ಬುಲಕ್ಷ್ಮಿ ಮುಂತಾದವರು ಸಿನಿಮಾ ಪ್ರಪಂಚದ ಪರಿಚಯವನ್ನೂ ಪಡೆದಿದ್ದವರು.

ಸುಪ್ರಸಿದ್ಧ ನಾಗಸ್ವರ ವಿದ್ವಾಂಸ ತಿರುವೆಂಗಾಡು ಸುಬ್ರಹ್ಮಣ್ಯ ಪಿಳ್ಳೆ, ಚೌಡಯ್ಯನವರಂತೆಯೇ ತಾವೆ 'ಆರ್ಯಮಾಲಾ' ಎಂಬ ಚಿತ್ರವನ್ನು ನಿರ್ಮಾಪಿಸಿ ಅದರಲ್ಲಿ ನಾಯಕಪಾತ್ರವನ್ನು ವಹಿಸುವ ಯೋಜನೆಯೊಂದನ್ನು ಸಿದ್ಧಪಡಿಸಿಕೊಂಡಿದ್ದರು; ಆದರೆ ಅದು ಕೈಗೂಡಲಿಲ್ಲ. ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆ 'ಬುದ್ಧನ ಜೀವನ'ವೆಂಬ ಚಲಚ್ಚಿತ್ರದಲ್ಲಿ ಬುದ್ಧನ ಪಾತ್ರವನ್ನು ವಹಿಸಿದ್ದರು; ಚಲಚ್ಚಿತ್ರ ಅರ್ಧಕ್ಕೇ ನಿಂತುಹೋಯಿತು. 'ನಂದನಾರ್' ಎಂಬ ಜನಪ್ರಿಯ ತಮಿಳುಚಿತ್ರದ ಪುನರ್ಮುದ್ರಣದಲ್ಲಿ ಶೆಮ್ಮಂಗುಡಿ ಶ್ರೀನಿವಾಸಯ್ಯರು ಮುಖ್ಯ ಪಾತ್ರವನ್ನು ವಹಿಸುವುದೆಂದು ನಿಶ್ಚಯವಾಗಿದ್ದಿತು. ಆದರೆ ಸಂಪ್ರದಾಯಶರಣರಾದ ಶ್ರೀನಿವಾಸಯ್ಯರು ತೆರೆಯ ಮೇಲೆ ಕಾಣಿಸಿಕೊಳ್ಳಲು ನಿರಾಕರಿಸಿದರು.

ಅಂತೂ ಚೌಡಯ್ಯನವರು ಈ ಪ್ರಯೋಗದಿಂದ ವಿವೇಕಿಗಳಾದರು. ಆದರೆ ಈ ಪ್ರಯೋಗವು ಅವರ ಸಾಹಸಪ್ರವೃತ್ತಿಯನ್ನು ತೋರಿಸುತ್ತದೆ; ಅಸಾಧ್ಯವಾದುದು ತನಗೆ ಯಾವುದೂ ಇರದು ಎಂದು ಅವರ ನಂಬಿಕೆ. ಅವರದ್ದು ಕೆಚ್ಚೆದೆ, ಎಂಟೆರ್ದೆ. ಈ ಸಾಹಸವೇ ಅವರನ್ನು ಸಂಗೀತಪ್ರಪಂಚದಲ್ಲಿ ಕಾಯಿತು. ಘಟಾನುಘಟಿ ಗಾಯಕರಿಗೆ ಪಕ್ಕ ವಾದ್ಯ ವನ್ನು ಸರಿಸಮನಾಗಿ ನುಡಿಸಿ ಗೆದ್ದರು. ಅವರ ಸಾಹಸದ ಫಲವೇ ಅವರು

ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರೊಂದಿಗೆ

ಎಂ. ಎಸ್. ಸುಬ್ಬುಲಕ್ಷ್ಮಿಯವರಿಗೆ ಪಕ್ಕವಾದ್ಯವಾಗಿ ಅನೇಕ ಕಚೇರಿಗಳಲ್ಲಿ ಕಾಣಿಸಿಕೊಂಡದ್ದು. ಆವರೆಗೆ ಇಷ್ಟು ಪ್ರಸಿದ್ಧರಾದ ಪಿಟೀಲು ವಾದಕರು ಹೆಂಗಸರಿಗೆ ಪಕ್ಕವಾದ್ಯ ನುಡಿಸುತ್ತಿರಲಿಲ್ಲ. ಚೌಡಯ್ಯನವರಿಗೆ ಈ ಗೊಡ್ಡು ಸಂಪ್ರದಾಯ ನಿರ್ಬಂಧವೆನಿಸಲಿಲ್ಲ. ಸುಬ್ಬುಲಕ್ಷ್ಮಿಯವರಿಗೆ ನುಡಿಸಿ ಅವರ ಸಂಗೀತಕ್ಕೂ ಕಳೆಯನ್ನು ಒದಗಿಸಿದರು; ತಾವೂ ಕೀರ್ತಿವಂತರಾದರು. ಪಾಲಕ್ಕಾಡು ಮಣಿ ಅಯ್ಯರನ್ನು ಸುಬ್ಬುಲಕ್ಷ್ಮಿಯವರಿಗೆ ಮೃದಂಗ ನುಡಿಸುವಂತೆ ಇವರು ಕೇಳಿಕೊಂಡುದೂ ಉಂಟು; ಆದರೆ ಮಣಿ ಅಯ್ಯರು ಈ ಒತ್ತಾಯಕ್ಕೆ ಮಣಿಯಲಿಲ್ಲ.

ಬೆಂಗಳೂರಲ್ಲಿ ಎಂ. ಎಸ್. ಸುಬ್ಬುಲಕ್ಷ್ಮಿಯವರು ಮೊಟ್ಟಮೊದಲ ಬಾರಿಗೆ ಕಚೇರಿ ಕೊಟ್ಟಾಗ ಚೌಡಯ್ಯನವರೇ ಪಿಟೀಲು ನುಡಿಸಿದರು. ಮೆಜೆಸ್ಟಿಕ್ ಪ್ರದೇಶದಲ್ಲಿ, ಈಗ ಕಪಾಲಿ ಥಿಯೇಟರ್ಸ್ ಇರುವ ಜಾಗದಲ್ಲಿ, ಮೊದಲು ಶಿವಾನಂದ ಥಿಯೇಟರ್ಸ್ ಎಂಬುದಿತ್ತು. ಸುಬ್ಬುಲಕ್ಷ್ಮಿಯವರ ಕಚೇರಿ ನಡೆದದ್ದು ಅಲ್ಲಿಯೇ. ಬೆಂಗಳೂರಿನಲ್ಲೂ, ಮೈಸೂರಿನಲ್ಲೂ ರಾಮನವಮಿ ಸಂದರ್ಭದಲ್ಲಿ ಪ್ರತಿ ವರ್ಷವೂ ಸುಬ್ಬುಲಕ್ಷ್ಮಿಯವರ ಕಚೇರಿಗಳಿರುತ್ತಿದ್ದುವು; ಆಗ ತಪ್ಪದೆ ಚೌಡಯ್ಯನವರದ್ದೇ ಪಿಟೀಲು.

ಚೌಡಯ್ಯನವರು 'ವಾಣಿ' ಚಲಚ್ಚಿತ್ರ ನಿರ್ಮಾಪಕರಾಗಿದ್ದಾಗ ಚಿತ್ರದ ಸಂಗೀತ-ನಿರ್ದೇಶಕರೂ ಅವರೇ. ಹಾಗಾಗಿ ಚಿತ್ರದಲ್ಲಿ ಬರುವ ಹಾಡುಗಳನ್ನು ಅವರೇ ರಚಿಸಿ ಅವಕ್ಕೆ ಸಂಗೀತಸಂಯೋಜನೆ ಮಾಡಬೇಕಾಗಿ

ಬಂದಿತು. ಇದರಿಂದ ಅವರು ಆಗಾಗ ಕೆಲವು ಕೃತಿಗಳನ್ನೂ, ತಿಲ್ಲಾನಗಳನ್ನೂ ರಚಿಸುವ ಹವ್ಯಾಸವನ್ನು ಬೆಳಸಿಕೊಂಡರು. ಬಹುಮಟ್ಟಿಗೆ ಇವು ದೇವತಾಸ್ತುತಿಗಳು (ಗಣಪತಿ, ಅಯ್ಯಪ್ಪ, ಪಳನಿಯಾಂಡವನ್, ಪ್ರಸನ್ನಸೀತಾರಾಮ ಇತ್ಯಾದಿ). ಭಾಷೆ ಸರಳ ಸಂಸ್ಕೃತ ಮತ್ತು ಕನ್ನಡ. ಈ ರಚನೆಗಳನ್ನು ಅವರ ಶಿಷ್ಯ ವಿ. ರಾಮರತ್ನಂ ಸಂಗ್ರಹಿಸಿ ಪ್ರಕಟಿಸಿದ್ದಾರೆ.



ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರೊಂದಿಗೆ ಚೌಡಯ್ಯನವರು

(೫)

ಪ್ರತಿಭೆಯ ಪ್ರಕಾಶ

ಚೌಡಯ್ಯನವರಿಗೆ ಪಿಟೀಲು ವಾದ್ಯದ ಮೇಲೆ ಪ್ರಭುತ್ವವಿದ್ದುದಷ್ಟೇ ಅವರ ಹಿರಿಮೆಗೆ ಕಾರಣವಲ್ಲ. ಅವರ ಪ್ರತಿಭೆಯ ಹರವು ವಾದನಕ್ಕಷ್ಟೇ ಮುಗಿಯಲಿಲ್ಲ. ಯಾರೋ ಒಬ್ಬರು ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರ ಬಳಿ ಮಾತನಾಡುತ್ತ "ಚೌಡಯ್ಯನ ಪಿಟೀಲು ಬರೀ ಗದ್ದಲ, ಸದ್ದು; ಅದರಲ್ಲಿ ನಯ-ನಾಜೂಕು ಕಾಣಿಸುವುದಿಲ್ಲ. ಸಂಗೀತಕ್ಕಿಂತ ಅಬ್ಬರ ಹೆಚ್ಚು" ಎಂದರಂತೆ. ಒಡನೆಯೇ ಅಯ್ಯಂಗಾರ್ಯರು "ಚೌಡಯ್ಯನ ವಿಚಾರ ಹಾಗೆ ಲಘುವಾಗಿ ಮಾತನಾಡಬೇಡಿ. ಆತನ ಸಂಗೀತ ನೀವು ಹೇಳುವಂತೆ ಎಂದಿಗೂ ಅಲ್ಲ. ಆತನಲ್ಲಿ ವಿಶೇಷವಾದ ಸಾಮರ್ಥ್ಯವಿದೆ. ಸಂಸ್ಕಾರ ಉತ್ತಮವಾಗಿರುವುದು ಮಾತ್ರವಲ್ಲ; ದೈವಬಲ ಚೆನ್ನಾಗಿದೆ" ಎಂದು ಹೇಳಿದರಂತೆ. ದಿಟ, ಚೌಡಯ್ಯನವರಿಗೆ ದೈವಬಲ ಬದುಕಿನುದ್ದಕ್ಕೂ ಇದ್ದಿತು.

ಇದರ ಫಲವಾಗಿಯೇ ಅವರದ್ದು ವಿಶೇಷವಾದ ಆಕರ್ಷಣೆ. ಧೈರ್ಯವೂ ಇದ್ದಿತು, ವಿನಯವೂ ಇದ್ದಿತು; ಸಂಪ್ರದಾಯವೂ ಇದ್ದಿತು, ನವೋನ್ಮೇಷಗಳೂ ಇದ್ದುವು; ಹಟವೂ ಇದ್ದಿತು, ಸಜ್ಜನಿಕೆಯೂ ಇದ್ದಿತು; ಆರಾಧನೆಯ ಹಿನ್ನೆಲೆ, ಸರಸವಾದ ಮನೋಧರ್ಮ, ಹಾಸ್ಯಪ್ರವೃತ್ತಿಯೂ ಇದ್ದದ್ದೇ.

ಒಮ್ಮೆ ಪ್ರಸಿದ್ಧರಾದ ಗಾಯಕರೊಬ್ಬರು ಮೈಸೂರಿನ ಯಾವುದೋ ಸಂಸ್ಥೆಯ ಸಭೆಯೊಂದರಲ್ಲಿ ಹಾಡುತ್ತಿದ್ದರು; ಚೌಡಯ್ಯನವರದ್ದೇ ಪಕ್ಕವಾದ್ಯ. ಸೊಗಸಾಗಿ, ವಿಸ್ತಾರವಾಗಿ ಕಲ್ಯಾಣಿ ರಾಗವನ್ನು ಹಾಡಿ ಮುಗಿಸಿದರು. ಸಂಸ್ಥೆಯ ಕಾರ್ಯದರ್ಶಿ ಕೂಡಲೇ ಎದ್ದು ನಿಂತು "ಸ್ವಲ್ಪ ಕಲ್ಯಾಣಿ ರಾಗವನ್ನು ಹಾಡಿ" ಎಂದು ಕೇಳಿಕೊಂಡರು; ಅವರಿಗೆ ಸಂಗೀತದ ಪರಿಚಯ ಅಷ್ಟಕ್ಕಷ್ಟೇ ಎಂಬುದಂತೂ ವ್ಯಕ್ತವಾಯಿತು. ಆದರೆ ಗಾಯಕರು ಏನು ಮಾಡಬೇಕು? ಸಂಸ್ಥೆಯ ಕಾರ್ಯದರ್ಶಿ ದೊಡ್ಡಮನುಷ್ಯ; ತನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದಾರೆ. ಅವರ ಮುಖಭಂಗ ಮಾಡುವುದು ಹೇಗೆ? ಏನು ಮಾಡಲೂ ತಿಳಿಯದೆ ಗಾಯಕರು ಚೌಡಯ್ಯನವರ ಕಡೆ ತಿರುಗಿ

"ಏನು ಮಾಡೋಣ?" ಎಂದು ಕೇಳಿದರು. ತಟ್ಟನೆ ಚೌಡಯ್ಯ "ಹಮ್ಮೀರ ಕಲ್ಯಾಣಿಯಲ್ಲಿ 'ಮಾನಮು ಲೇದಾ' ಎಂಬ ಕೃತಿಯನ್ನು ಹಾಡಿಬಿಡಿ!" ಎಂದು ಸೂಚಿಸಿದರು. ಗಾಯಕರು ಹಾಗೆಯೇ ಮಾಡಿದರು; ಕಾರ್ಯದರ್ಶಿಗೇನೋ ಸಂತೋಷವಾಯಿತು. ಹಾಡಿನ ಸಾಹಿತ್ಯಭಾಗವಾಗಲಿ, ಅದರ ಇಂಗಿತವಾಗಲಿ ಅರ್ಥವಾಗಲಿಲ್ಲ!

ಕೆಲವರು ಗಾಯಕರು ಪಕ್ಕವಾದ್ಯದವರನ್ನು ಪೀಡಿಸಲು ಏನೇನೋ ಉಪಾಯಗಳನ್ನು ಹುಡುಕುತ್ತಾರೆ. ರಾಗ ತಿಳಿಯದಂತೆ ಮಾಡುವುದು, ತಾಳ ತಪ್ಪುವಂತೆ ಮಾಡುವುದು, ಸಂಚಾರಕ್ರಮ ಪತ್ತೆಗೆ ಸಿಗದಂತೆ ಮಾಡುವುದು ಇತ್ಯಾದಿ. ಸುಸಂಸ್ಕೃತರಾದ ಪ್ರಸಿದ್ಧರಾದ ವಿದ್ವಾಂಸರೇನೂ ಹೀಗೆ ಮಾಡುವುದಿಲ್ಲ. ಸಂಗೀತ ಸಭೆ ಇರುವುದು ರಸಿಕರ ಸಂತೋಷಕ್ಕೆ; ಗಾಯಕರೂ ಸಂತೋಷವಾಗಿ ಹಾಡಬೇಕು, ವಾದಕರೂ ಸಂತೋಷವಾಗಿ ನುಡಿಸಬೇಕು. ಅದೊಂದು 'ಟೀಮ್‌ವರ್ಕ್' ಇದ್ದಹಾಗೆ. ಆದರೆ ಕೆಲವರು ತಮ್ಮ ಪಾಂಡಿತ್ಯವನ್ನೋ, ಸಾಧನೆಯನ್ನೋ, ಪ್ರತಿಭೆಯನ್ನೋ ತೋರಿಸಿಕೊಳ್ಳಲು ಪಕ್ಕವಾದ್ಯದವರನ್ನು ಪೇಚಿಗೆ ಸಿಕ್ಕಿಸುವುದುಂಟು.

ಒಂದು ಬಾರಿ ಮೈಸೂರಿನ ಪ್ರಸನ್ನ ಸೀತಾರಾಮಮಂದಿರದಲ್ಲಿ ಆಲತ್ತೂರು ಸಹೋದರರ ಸಂಗೀತ. ಶಿವಸುಬ್ರಹ್ಮಣ್ಯಯ್ಯರು ಮತ್ತು ಶ್ರೀನಿವಾಸಯ್ಯರು ಎಂಬಿಬ್ಬರು ಆಲತ್ತೂರಿನ ವಿದ್ವಾಂಸರು (ಇವರು ದಿಟವಾಗಿ ಸೋದರರೇನಲ್ಲ; ಒಬ್ಬರೇ ಗುರುವಿನ ಶಿಷ್ಯರು; ಶಿವಸುಬ್ರಹ್ಮಣ್ಯಯ್ಯರ ತಂದೆಯೇ ಇಬ್ಬರಿಗೂ ಗುರು) ಆ ಕಾಲಕ್ಕೆ ತುಂಬ ಪ್ರಸಿದ್ಧರಾದ ಜೋಡಿಪಟ್ಟು ಗಾಯಕರು. ತುಂಬು ಪಾಂಡಿತ್ಯದ ಸಂಗೀತ ಅವರದ್ದು; ಕ್ಲಿಷ್ಟವಾದ ತಾಳಗಳನ್ನೆಲ್ಲ ಸರಾಗವಾಗಿ ನಿರ್ವಹಿಸುವ ಬುದ್ಧಿಶಾಲಿಗಳು. ಪಲ್ಲವಿ ಹಾಡುವುದರಲ್ಲಂತೂ ನಿಪುಣರು. ಅಂದಿನ ಅವರ ಕಚೇರಿಗೆ ಚೌಡಯ್ಯನವರದ್ದೇ ಪಕ್ಕವಾದ್ಯ.

ಆದಿನ ಮಧ್ಯಾಹ್ನ ಚೌಡಯ್ಯನ ಮಿತ್ರರೊಬ್ಬರು ಚೌಡಯ್ಯನ ಬಳಿ ಬಂದು "ಈ ಸಂಜೆ ಹುಷಾರಾಗಿರು, ಚೌಡಯ್ಯ. ಆಲತ್ತೂರು ಸೋದರರು ಯಾವುದೋ ತಿಳಿಯದ ನಡೆಯಲ್ಲಿ ಪಲ್ಲವಿಯೊಂದನ್ನು ಸಿದ್ಧ ಮಾಡಿಕೊಂಡು ಬಂದಿದ್ದಾರಂತೆ. ನಿನಗೆ ತಾಳದ ಹಿಡಿತ ಸಿಗದಂತೆ ಮಾಡಿ



ಟಿ. ಆರ್. ಮಹಾಲಿಂಗಂ ಅವರ ಕೊಳಲು ಕಚೇರಿ
(ಚೌಡಯ್ಯನವರ ಪಿಟೀಲು, ಪಾಲಕ್ಕಾಡು ಮಣಿ ಅಯ್ಯರ ಮೃದಂಗ, ಮಂಜುನಾಥರ ಘಟ)

ಅವಮಾನ ಮಾಡುವುದು ಅವರ ಉದ್ದೇಶವಿದ್ದೀತು!" ಎಂದು ಎಚ್ಚರಿಕೆ ಕೊಟ್ಟರು. ಚೌಡಯ್ಯನೇನು ಅಂಜುವ ಆಸಾಮಿಯೇ? "ಇರಲಿ ಬಿಡು, ನೋಡೋಣ!" ಎಂದುಬಿಟ್ಟರು. ಆಲತ್ತೂರು ಸಹೋದರರಿಗೇನೂ ಈ ಉದ್ದೇಶ ಇದ್ದಿರಲಾರದು. ಚೌಡಯ್ಯನ ಪ್ರತಿಭೆಯನ್ನೂ, ಸ್ವಭಾವವನ್ನೂ ಚೆನ್ನಾಗಿ ಅರಿತಿದ್ದವರು; ಅವರ ವಿಚಾರವಾಗಿ ಗೌರವಬುದ್ಧಿಯನ್ನೂ ಇರಿಸಿಕೊಂಡಿದ್ದವರು. ಮೇಲಾಗಿ ಚೌಡಯ್ಯನ ಆಹ್ವಾನದ ಮೇಲೇ ಮೈಸೂರಿಗೆ ಬಂದಿದ್ದವರು. ಆದರೆ ಆ ಕಾಲದಲ್ಲಿ ಹಾಗೆ ಮನೆಯಲ್ಲೇ ಕ್ಲಿಷ್ಟವಾದ ಪಲ್ಲವಿಯನ್ನು ಸಿದ್ಧಪಡಿಸಿ ಅಭ್ಯಾಸ ಮಾಡಿಕೊಂಡು ಬಂದು ಸಭೆಯಲ್ಲಿ ಪಕ್ಕವಾದ್ಯದವರಿಗೆ ತಬ್ಬಿಬ್ಬುಮಾಡುವಂಥ ಗಾಯಕರಿದ್ದುದೇನೋ ದಿಟ.

ಆದಿನ ಸಂಜೆ, ಕಚೇರಿ ಮೊದಲಾಗುವ ಒಂದು ಗಂಟೆ ಮೊದಲು ಕೋಣೆಯಲ್ಲಿ ಗಾಯಕರು, ಪಕ್ಕವಾದ್ಯದವರು ಸೇರಿದ್ದಾರೆ. ಆಲತ್ತೂರು ಸಹೋದರರು ತಂಬೂರಿ ಶ್ರುತಿ ಮಾಡಿಕೊಳ್ಳುತ್ತಿದ್ದಾರೆ. ಚೌಡಯ್ಯನವರೂ ಪಕ್ಕದಲ್ಲಿ ಕೂತು ಪಿಟೀಲು ಶ್ರುತಿ ಮಾಡಿಕೊಳ್ಳುತ್ತಿದ್ದಾರೆ. ಆ ಮಾತು ಈ ಮಾತು ಆಡುತ್ತ ಚೌಡಯ್ಯ "ನಿಮ್ಮ ಪಲ್ಲವಿ ಹಾಡಿಕೆಗೂ ಮೈಸೂರಿನ ಪಲ್ಲವಿ ವಿನ್ಯಾಸಕ್ಕೂ ವ್ಯತ್ಯಾಸವಿದೆ" ಎಂದು ಹೇಳಿದರು. ಶಿವಸುಬ್ರಹ್ಮಣ್ಯಯ್ಯರು "ಏನದು ವ್ಯತ್ಯಾಸ?" ಎಂದು ಕೇಳಲು ಚೌಡಯ್ಯ "ಪದಗರ್ಭದಲ್ಲಿ" ಎಂದುತ್ತರ ಕೊಟ್ಟು, ಯಾವುದೋ ಪಲ್ಲವಿಯನ್ನೆತ್ತಿ

ಕೊಂಡು ಪ್ರದರ್ಶಿಸಿದರು. ಅದಕ್ಕುತ್ತರವಾಗಿ ಆಲತ್ತೂರು ಸಹೋದರರು ಷಣ್ಮುಖಪ್ರಿಯ ರಾಗದ ಪಲ್ಲವಿಯೊಂದನ್ನೆತ್ತಿಕೊಂಡು ವಿವರವಾಗಿ ವಿನ್ಯಾಸ ಮಾಡತೊಡಗಿದರು. ಚೌಡಯ್ಯ "ಆಹಾ! ಎಷ್ಟು ಚೆನ್ನಾಗಿದೆ! ಈ ರಾಗದ ಪಲ್ಲವಿಯನ್ನು ಮೈಸೂರಿನ ಜನ ಕೇಳಿಯೇ ಇಲ್ಲ. ಈ ಸಂಜೆ ಇದನ್ನೇ ಹಾಡಿಬಿಡಿ!" ಎಂದು ಸೂಚಿಸಿದರು. ಗಾಯಕರೂ ಆಗಲೆಂದರು. ಅಂದಿನ ಸಭೆಯಲ್ಲಿ ಷಣ್ಮುಖಪ್ರಿಯ ರಾಗದ ಪಲ್ಲವಿಯ ಹಾಡಿಕೆ, ಪಿಟೀಲಿನ ನುಡಿಸಾಣಿಕೆ ಎರಡೂ ಅಮೋಘವಾಗಿದ್ದುವು !

ಮುಂದೆ ಕೊಳಲುವಾದನದಲ್ಲಿ ತುಂಬ ವಿಖ್ಯಾತಿಯನ್ನೂ, ಜನಪ್ರೀತಿಯನ್ನೂ ಪಡೆದುಕೊಂಡ ಟಿ. ಆರ್. ಮಹಾಲಿಂಗಂ ಇನ್ನೂ ಪ್ರಸಿದ್ಧಿಗೆ ಬಾರದಿದ್ದ ದಿನಗಳು. ಇನ್ನೂ ಒಂಬತ್ತೇ ವರ್ಷಗಳ ಹುಡುಗ. ಚೌಡಯ್ಯ ಮದ್ರಾಸಿನಲ್ಲಿ ಇವರ ವೇಣುವಾದನವನ್ನು ಕೇಳಿ ತುಂಬ ಸಂತೋಷಪಟ್ಟು, ಮೈಸೂರಿಗೆ ಬಂದು ಅರಮನೆಯಲ್ಲಿ ನುಡಿಸುವ ಪ್ರಯತ್ನ ಮಾಡೆಂದು ಸೂಚಿಸಿದರು. ಮಹಾಲಿಂಗಂ ಬಂದು ಮೈಸೂರು ಮಹಾರಾಜರೆದುರು ನುಡಿಸಬೇಕೆಂಬ ಕೋರಿಕೆಯನ್ನು ಅರಮನೆಯ ಅಧಿಕಾರಿಗಳಿಗೆ ಸಲ್ಲಿಸಿದರು. ಆಗಿನ ಪದ್ಧತಿಯಂತೆ ಅರಮನೆಯ ವಿದ್ವಾಂಸರ ಸಮಿತಿಯೊಂದು ಅಭ್ಯರ್ಥಿಯನ್ನು ಪರೀಕ್ಷಿಸಿ, ಅವರು ಶಿಫಾರಸು ಮಾಡಿದರೆ ಮಹಾರಾಜರ ಮುಂದೆ ಬರಬಹುದಾಗಿದ್ದಿತು.

ಅಂದಿನ ಸಮಿತಿಯಲ್ಲಿದ್ದವರು ವೀಣೆ ಸುಬ್ಬಣ್ಣ, ಕೆ. ವಾಸುದೇವಾಚಾರ್ಯರು, ಹರಿಕೇಶನೆಲ್ಲೂರು ಮುತ್ತಯ್ಯ ಭಾಗವತರು ಮತ್ತು ವೀಣೆ ವೆಂಕಟಗಿರಿಯಪ್ಪ. ಅವರೆದುರು ಸಣ್ಣದೊಂದು ಸಭೆಯಲ್ಲಿ ಮಹಾಲಿಂಗಂ ಕೊಳಲು ನುಡಿಸುವುದೆಂದು ಗೊತ್ತಾಯಿತು; ಟಿ. ಗುರುರಾಜಪ್ಪ (ಚೌಡಯ್ಯನವರ ಸೋದರಮಾವನ ಕಿರಿಯ) ಅವರಿಗೆ ಪಕ್ಕವಾದ್ಯವಾಗಿ ಪಿಟೀಲನ್ನು ನುಡಿಸಬೇಕಾಗಿದ್ದಿತು. ಚೌಡಯ್ಯನೂ ಸಭೆಯಲ್ಲಿ ಕೂತಿದ್ದರು. ಮಹಾಲಿಂಗಂ ವಾದನವೇನೋ ಸುಮಾರಾಗಿ ಚೆನ್ನಾಗಿದ್ದಿತು; ಆದರೆ ಸಮಿತಿಯ ಸದಸ್ಯರ ಅಭಿಪ್ರಾಯ ಹೇಗೋ? ಮಹಾಲಿಂಗಂ ಅವರ ವಿನಿಕೆ ಅರ್ಧದಷ್ಟು ಮುಗಿದೊಡನೆ ಚೌಡಯ್ಯ ಎದ್ದರು; ಗುರುರಾಜಪ್ಪನ ಬಳಿ ಬಂದು, "ನೀನು ಏಳು, ನಾನು ನುಡಿಸುತ್ತೇನೆ" ಎಂದು ಎಬ್ಬಿಸಿ ತಾವು ಪಕ್ಕವಾದ್ಯಕ್ಕೆ ಕುಳಿತರು. ತಮ್ಮ ನುಡಿಸಾಣಿಕೆಯಿಂದ ಮಹಾಲಿಂಗಂ



ರಾಷ್ಟ್ರಪತಿಗಳಾಗಿದ್ದ ಜಾಕಿರ್ ಹುಸೇನ್ ಮತ್ತು ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ ಜೊತೆಯಲ್ಲಿ
(ಕ್ರಮವಾಗಿ ಮಂಜುನಾಥ್, ಎಂ. ಎಲ್. ವೀರಭದ್ರಯ್ಯ, ಚೌಡಯ್ಯನವರು, ವಿ . ದೊರೆಸ್ವಾಮಿ ಅಯ್ಯಂಗಾರ್ಯರು)

ಅವರನ್ನು ಕೆರಳಿಸಿ ಅವರ ಪ್ರತಿಭೆ ಧಾರಾಕಾರವಾಗಿ ಹೊರಹೊಮ್ಮುವಂತೆ ಮಾಡಿದರು. ಸಮಿತಿಯ ಶಿಫಾರಸ್ಸಿನ ವಿಚಾರದಲ್ಲಿ ಸಂದೇಹ ಉಳಿಯಲಿಲ್ಲ!

ಚೌಡಯ್ಯನವರು ಪಿಟೀಲುವಾದ್ಯದಲ್ಲಿ ಕನ್ನಡನಾಡಿನ ಒಳಗೂ ಹೊರಗೂ ಪ್ರಸಿದ್ಧರಾದ ಮೇಲೆ ೧೯೩೯ರಲ್ಲಿ ಮೈಸೂರು ಮಹಾರಾಜರು ಇವರನ್ನು ಆಸ್ಥಾನ ವಿದ್ವಾಂಸರಾಗಿ ನೇಮಿಸಿಕೊಂಡರು. ದೇಶದಲ್ಲೆಲ್ಲ ಹೆಸರು ಪಡೆದ ಮೇಲೆ ಅವರಿಗೆ ೧೯೪೧ ರಲ್ಲಿ 'ಸಂಗೀತ ರತ್ನ' ಎಂಬ ಬಿರುದು ನಮ್ಮ ಅರಮನೆಯಿಂದ ದೊರೆಯಿತು! ಈ ವಿಳಂಬಕ್ಕೆ ಏನು ಕಾರಣವೋ ತಿಳಿಯದು. ಚೌಡಯ್ಯನವರ ಪ್ರತಿಭೆಯನ್ನು ಗುರುತಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು (೧೮೮೪–೧೯೪೦) ಚೌಡಯ್ಯನವರನ್ನು ಆಸ್ಥಾನ ವಿದ್ವಾಂಸರೆಂದು ನೇಮಿಸಿಕೊಂಡರು. ಅವರನಂತರ ಮಹಾರಾಜರಾದ

ಜಯಚಾಮರಾಜ ಒಡೆಯರು (೧೯೪೦—೧೯೭೪) ತಾವು ಪಟ್ಟಕ್ಕೆ ಬಂದ ತರುಣದಲ್ಲೇ ಚೌಡಯ್ಯನವರನ್ನು 'ಸಂಗೀತರತ್ನ' ಎಂದು ಗೌರವಿಸಿದರು. ಚೌಡಯ್ಯನವರ ಹಿತೈಷಿಗಳಲ್ಲಿ ವೀಣೆ ಶೇಷಣ್ಣನವರು ೧೯೨೬ ರಲ್ಲಿಯೂ, ಬಿಡಾರದ ಕೃಷ್ಣಪ್ಪನವರು ೧೯೩೧ ರಲ್ಲಿಯೂ ತೀರಿಕೊಂಡಿದ್ದರು; ವಾಸುದೇವಾಚಾರ್ಯರು (೧೮೬೫—೧೯೬೧) ಮತ್ತು ಚಿಕ್ಕರಾಮ ರಾಯರು (೧೮೯೦—೧೯೪೫) ಇನ್ನೂ ಬದುಕಿದ್ದರು.

ಮದರಾಸಿನ ಮ್ಯೂಸಿಕ್ ಅಕ್ಯಾಡಮಿಯು ಸಂಗೀತ ಕ್ಷೇತ್ರದಲ್ಲಿ ಭಾರತದಲ್ಲೇ ವರಿಷ್ಠ ಸಂಸ್ಥೆ. ಅದು ವರ್ಷಕ್ಕೊಮ್ಮೆ ನಾಡಿನ ಹಿರಿಯ ವಿದ್ವಾಂಸನೊಬ್ಬನನ್ನು ಅಧ್ಯಕ್ಷನನ್ನಾಗಿ ಆರಿಸಿಕೊಂಡು 'ಸಂಗೀತ ಕಲಾನಿಧಿ' ಎಂಬ ಬಿರುದನ್ನು ಕೊಟ್ಟು ಸನ್ಮಾನಿಸುತ್ತದೆ. ಚೌಡಯ್ಯನವರಿಗೆ ಈ ಸನ್ಮಾನ ೧೯೫೭ರಲ್ಲಿ ಸಂದಿತು. ಆವರೆಗೆ ಪಿಟೀಲು ವಿದ್ವಾಂಸರಲ್ಲಿ ದ್ವಾರಂ ವೆಂಕಟಸ್ವಾಮಿ ನಾಯುಡು (೧೯೪೧), ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೈ (೧೯೪೮), ಮತ್ತು ಮರುಂಗಾಪುರಿ ಗೋಪಾಲಕೃಷ್ಣಯ್ಯರು (೧೯೫೫) ಈ ಮೂವರು ಈ ರೀತಿಯಾಗಿ ಸನ್ಮಾನಿಸಲ್ಪಟ್ಟಿದ್ದರು. ಮತ್ತೆ ಪಿಟೀಲು ವಿದ್ವಾಂಸರಿಗೆ ಸನ್ಮಾನ ನಡೆದದ್ದು ೧೯೬೨ರಲ್ಲಿಯೇ; ಕರೂರು (ಪಾಪಾ) ವೆಂಕಟರಾಮಯ್ಯನವರಿಗೆ. ಪ್ರಸಿದ್ಧ ಗಾಯಕರಲ್ಲಿಯೂ ಜಿ. ಎನ್. ಬಾಲಸುಬ್ರಹ್ಮಣ್ಯಂಗೆ ಈ ಸನ್ಮಾನ ಬಂದಿದ್ದು ಅನಂತರವೇ; ೧೯೫೮ ರಲ್ಲಿ, ಚೌಡಯ್ಯನವರಿಗೆ ಸನ್ಮಾನ ಸಂದ ಮರುವರ್ಷ. ಅದರ ಮುಂದಿನ ವರ್ಷ ಸನ್ಮಾನಿತರಾದವರು ಮಧುರೆ ಮಣಿ ಅಯ್ಯರು.

ಮೈಸೂರು ಸೀಮೆಯಿಂದ ಈ ಗೌರವಕ್ಕೆ ಭಾಜನರಾದವರು ಇವರನ್ನು ಬಿಟ್ಟರೆ ಮೂರೇ ಮಂದಿ—ವಾಸುದೇವಾಚಾರ್ಯರು (೧೯೩೫ರಲ್ಲಿ), ರಾಳ್ಳಪಲ್ಲಿ ಅನಂತಕೃಷ್ಣಶರ್ಮರು (೧೯೭೪ರಲ್ಲಿ). ಮತ್ತು ವೀಣೆ ದೊರೆಸ್ವಾಮಿ ಅಯ್ಯಂಗಾರ್ಯರು (೧೯೮೪ರಲ್ಲಿ). ಚೌಡಯ್ಯನವರು ಅಧ್ಯಕ್ಷರಾದದ್ದು ಮೂವತ್ತೊಂದನೆಯ ಸಮ್ಮೇಳನಕ್ಕೆ. ಸಮಾರಂಭದ ಮರುದಿನ ಬೆಳಗ್ಗೆ ವಿದ್ವತ್‌ಗೋಷ್ಠಿಯಲ್ಲಿ ಪಿಟೀಲುವಾದನದ ಕ್ರಮವನ್ನು ಅಧ್ಯಕ್ಷರು ವಿವರಿಸುತ್ತಾ ತಮ್ಮ ಪಿಟೀಲಿನಲ್ಲಿ ಕಮಾನು ಈ ಕಡೆಯಿಂದ ಆ ಕಡೆ ಸಾಗುವಾಗ, ಆ ಕಡೆಯಿಂದ ಈ ಕಡೆಗೆ ಹಿಂದಿರುಗುವಾಗ, ಕೈಯೆತ್ತದೆ ಮರುಕಮಾನನ್ನು ಹಾಕದೆ ಒಟ್ಟು ೨೫೬ ಅಕ್ಷರಗಳನ್ನು (ಎಂದರೆ

ಸಪ್ತಸ್ವರಗಳ ಆರೋಹಾವರೋಹ ಕ್ರಮವನ್ನು ಹದಿನಾರು ಬಾರಿ ಪುನರಾವರ್ತಿಸಿ) ನುಡಿಸಿ ತೋರಿಸಿದರು! ಅದ್ಭುತವಾದ ಈ ಕೈಚಳಕ, ಕಮಾನಿನ ವೇಗ, ಅಕ್ಷರಗಳ ಖಚಿತ ಅಭಿವ್ಯಕ್ತಿ, ವಾದಕನ ಸ್ಥೈರ್ಯ ಇವೆಲ್ಲವನ್ನೂ ಕಂಡು ಸಭೆಯಲ್ಲಿದ್ದ ವಿದ್ವಾಂಸರು ಬೆರಗಾದರು.

ಒಂಬತ್ತು ವರ್ಷಗಳ ಹಿಂದೆ ಅದೇ ಮ್ಯೂಸಿಕ್ ಅಕ್ಯಾಡಮಿ ವಾರ್ಷಿಕ ಸಭೆಯಲ್ಲಿ ಶೆಮ್ಮಂಗುಡಿ ಶ್ರೀನಿವಾಸಯ್ಯರು ಅಧ್ಯಕ್ಷರಾಗಿರುವಾಗ ಏಳುತಂತಿ ಪಿಟೀಲುವಾದ್ಯದ ವಿಚಾರವಾಗಿ ವಿಪುಲವಾದ ಚರ್ಚೆ ನಡೆಯಿತು. ಚೌಡಯ್ಯನವರೂ ಅಲ್ಲಿದ್ದರು. ಅದನ್ನು ವಿರೋಧಿಸಿ ಮಾತನಾಡಿದವರೂ ಬಹುಮಂದಿ ಇದ್ದರು. ಏಳು ತಂತಿಗಳಿರುವ ಪಿಟೀಲುವಾದ್ಯದಲ್ಲಿ ಶ್ರುತಿಶುದ್ಧಿ ಸಾಧ್ಯವಿಲ್ಲ, ನಾದಸಮೃದ್ಧಿಯಿದ್ದರೂ ಸೂಕ್ಷ್ಮತರಂಗಿತೆ ಇರಲಾರದು, ಗಮಕವನ್ನು ನುಡಿಸುವಾಗ ತೊಡಕು ಇರುವುದು ಸಹಜ, ಹೆಚ್ಚಿನ ಮೂರು ತಂತಿಗಳಿಗೆ ಅಗತ್ಯವೂ ಇರದು ಹೀಗೆಲ್ಲ ವಾದಗಳು ನಡೆದವು. ಚೌಡಯ್ಯನವರು ಎದ್ದು ನಿಂತು "ಇಂಥ ವಾದದ ವಿಷಯವಲ್ಲ ಇದು. ಈಗ್ಗೆ ಬಹು ವರ್ಷಗಳಿಂದ ನಾನು ಏಳುತಂತಿ ಪಿಟೀಲನ್ನೇ ನುಡಿಸುತ್ತಾ ಬಂದಿದ್ದೇನೆ. ಇಲ್ಲಿರುವ, ಇಲ್ಲಿಲ್ಲದೆ ಇರುವ ಅನೇಕ ಪ್ರಸಿದ್ಧ ವಿದ್ವಾಂಸರ ಗಾಯನಕ್ಕೆ ಇದನ್ನೇ ಪಕ್ಕವಾದ್ಯವಾಗಿ ಬಳಸಿದ್ದೇನೆ. ಅವರಲ್ಲಿ ಯಾರೂ ಇದು ಬೇಡವೆಂದು ಹೇಳಿಲ್ಲ; ಇದನ್ನು ಮೆಚ್ಚಿಕೊಂಡೇ ಬಂದಿದ್ದಾರೆ. ಇದನ್ನೇ ಬಯಸಿಯೂ ಇದ್ದಾರೆ. ಈ ಸಭೆಯ ಅಧ್ಯಕ್ಷರಿಗೇ ನಾನು ಅನೇಕ ಬಾರಿ ನುಡಿಸಿದ್ದೇನೆ. ಈಗಲಾದರೂ ಈ ಸಭೆಯಲ್ಲಿರುವ, ವೇದಿಕೆಯ ಅನುಭವವಿರುವ, ವಿದ್ವಾಂಸರು ಯಾರಾದರೂ ಇದು ಅಶಾಸ್ತ್ರೀಯ, ಇದು ಕೂಡದು ಎಂದು ಹೇಳಲಿ. ಈ ಗಳಿಗೆಯಿಂದಲೇ ನಾನು ಈ ಪಿಟೀಲು ನುಡಿಸುವುದನ್ನು ಬಿಟ್ಟುಬಿಡುತ್ತೇನೆ!" ಎಂದು ಸವಾಲುಹಾಕಿದರು.

ಯಾರೂ ಮೇಲೇಳಲಿಲ್ಲ; ಚರ್ಚೆ ಮುಕ್ತಾಯವಾಯಿತು. ಅಧ್ಯಕ್ಷರಾದ ಶೆಮ್ಮಂಗುಡಿ ಶ್ರೀನಿವಾಸಯ್ಯರು ಎದ್ದು "ಸಭೆಯ ಅಭಿಪ್ರಾಯ ಅರ್ಥವಾಯಿತು. ಚೌಡಯ್ಯನವರು ಗೆದ್ದರು. ಅವರ ಪಿಟೀಲು ಪಕ್ಕವಾದ್ಯದಲ್ಲಿ ನಮ್ಮಲ್ಲಿ ಹಲವಾರು ಮಂದಿ ಹಾಡಿದ್ದೇವೆ; ಅವರ ವಾದನದ ಸುಖವನ್ನು ಅನುಭವಿಸಿದ್ದೇವೆ. ಅದು ಅಶಾಸ್ತ್ರೀಯವೆಂದಾಗಲಿ,

ಅನಗತ್ಯವೆಂದಾಗಲಿ ನಮಗೆ ಎಂದೂ ತೋರಿಯೇ ಇಲ್ಲ. ಇದರಿಂದ ಕಚೇರಿ ಕಳೆಗಟ್ಟಿರುವುದು ಯಾರ ಅನುಭವದಲ್ಲಿಲ್ಲ? ಚೌಡಯ್ಯನ ಹೊಸ ಪ್ರಯೋಗವನ್ನು ನಾವು ಸ್ವಾಗತಿಸಬೇಕು. ಸಂಪ್ರದಾಯ ಸಂಗೀತವೆಂದರೆ ನಿಂತ ನೀರೆಂದು ಹೇಳಲಾದೀತೆ?" ಎಂದು ಹೇಳಿದರು.

ಚೌಡಯ್ಯನವರು "ಸಂಗೀತಕಲಾನಿಧಿ"ಯಾದ ವರ್ಷವೇ ಕೇಂದ್ರ ಸರ್ಕಾರದ ಸಂಗೀತ ನಾಟಕ ಅಕ್ಕಾಡಮಿಯ ಸನ್ಮಾನವೂ ಅವರಿಗೆ ದೊರಕಿತು. ಎರಡು ವರ್ಷಗಳ ನಂತರ ರಾಷ್ಟ್ರಪತಿ ಪ್ರಶಸ್ತಿಯೂ ಲಭಿಸಿತು. ಮೈಸೂರು ರಾಜ್ಯ ಸರ್ಕಾರವು ೧೯೫೨ರಲ್ಲಿ ಇವರನ್ನು ನ್ಯಾಯವಿಧಾಯಕ ಸಭೆಗೆ ಸದಸ್ಯರನ್ನಾಗಿ ಆಯ್ಕೆಮಾಡಿಕೊಂಡಿತು. ರಾಜ್ಯದಲ್ಲಿ ಕಲೆಗೆ ಪ್ರೋತ್ಸಾಹ ಯಾವ ರೀತಿಯಿಂದ ನಡೆಯಬೇಕೆಂಬುದನ್ನು ಸರ್ಕಾರಕ್ಕೆ ಸೂಚಿಸುವ ಸಲುವಾಗಿ ಈ ಆಯ್ಕೆ. ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲೂ ಶಾಸ್ತ್ರೀಯ ಸಂಗೀತ ಮೊಳಗಬೇಕೆಂಬುದು ಇವರ ಇಚ್ಛೆಯಾಗಿದ್ದಿತು. ಸಂಗೀತ ಶಿಕ್ಷಣವು ಗುರುಕುಲಪದ್ಧತಿಯಲ್ಲೇ ನಡೆದರೆ ಉತ್ತಮವೆಂಬುದೂ ಇವರ ಅಭಿಪ್ರಾಯ. ಆದರೆ ಸರ್ಕಾರದ ರೀತಿನೀತಿಗಳು ಕಲಾವಿದರ ಅನಿಸಿಕೆಗಳಿಗೆ ಸೊಪ್ಪುಹಾಕುವುದುಂಟೆ?

ಬಿಡಾರದ ಕೃಷ್ಣಪ್ಪನವರು ಮೈಸೂರಿನಲ್ಲಿ ಪ್ರಸನ್ನ ಸೀತಾರಾಮ ಮಂದಿರವನ್ನು ಸ್ಥಾಪಿಸಿದ ವಿಚಾರ ಆಗಲೇ ಬಂದಿದೆಯಷ್ಟೆ; ಅದು ೧೯೨೮ ರಲ್ಲಿ ಆದದ್ದು. ಸಾರ್ವಜನಿಕರು ಸಂಗೀತವನ್ನು ಸವಿಯಲು ನೆರವಾಗುವಂತೆ ಈ ಸಂಸ್ಥೆಯು ರಾಮನವಮಿ ಮುಂತಾದ ಸಂದರ್ಭಗಳಲ್ಲಿ ವಿಶೇಷ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದಿತು. ಹೊರಗಿನಿಂದ ವಿದ್ವಾಂಸರು ಬಂದು ಇಲ್ಲಿ ಹಾಡಿ ಅಥವಾ ನುಡಿಸಿ ಹೋಗುವ ಪರಿಪಾಟಿಯೂ ಇದ್ದಿತು. ಸಂಸ್ಥೆ ಆರಂಭವಾದಾಗಿನಿಂದಲೂ ಚೌಡಯ್ಯನವರೇ ಕಾರ್ಯದರ್ಶಿ; ೧೯೬೪ ರವರೆಗೂ ಅವರು ಈ ಸಂಸ್ಥೆಯನ್ನು ಅಕ್ಕರೆಯಿಂದ ಗುರುಭಕ್ತಿಯಿಂದ ನೋಡಿಕೊಂಡರು. ಇವರ ಕರೆಯನ್ನು ಮನ್ನಿಸಿ ತಮಿಳುನಾಡಿನ, ಆಂಧ್ರ ದೇಶದ, ಕೇರಳದ ಅನೇಕ ವಿದ್ವಾಂಸರು ಮೈಸೂರಿಗೆ ಬಂದು ಈ ಸಂಸ್ಥೆಯಲ್ಲಿ ವಿನಿಕೆ ಮಾಡಿ ಹೋಗುತ್ತಿದ್ದರು. ಮೈಸೂರಿನ ಜನ ಶ್ರೇಷ್ಠ ವಿದ್ವಾಂಸರ ಸಂಗೀತವನ್ನು ಕೇಳುವ ಅವಕಾಶ ಒದಗಿದ್ದು ಚೌಡಯ್ಯನವರಿಂದಲೇ.

ಈ ಸಂಸ್ಥೆಯ ವತಿಯಿಂದ ಚೌಡಯ್ಯನವರು ೧೯೪೫ರಲ್ಲಿ ಸಂಗೀತ ಕಲಾಶಾಲೆಯೊಂದನ್ನು ತೆರೆದು ಆಸಕ್ತರಾದ ವಿದ್ಯಾರ್ಥಿಗಳಿಗೆ ಸಂಗೀತ ಕಲಿಸುವ ವ್ಯವಸ್ಥೆ ಮಾಡಿದರು. ಇದೇ ಅಯ್ಯನಾರ್ ಸಂಗೀತ ಕಲಾಶಾಲೆ. ರಾಜ್ಯದಲ್ಲಿ ಪ್ರಖ್ಯಾತ ವಿದ್ವಾಂಸರೊಬ್ಬರು ಸ್ಥಾಪಿಸಿದ ಕಲಾಶಾಲೆ ಇದೇ ಮೊದಲು.

ಆದರೆ ಚೌಡಯ್ಯನವರಿಗೆ ಬಿಡುವಿಲ್ಲದ ಕಾರ್ಯಕ್ರಮಗಳು. ಅನೇಕ ಸಂಗೀತ ಕಚೇರಿಗಳಲ್ಲಿ ಇವರದ್ದೇ ಪಕ್ಕವಾದ್ಯ. ತಿಂಗಳಲ್ಲಿ ಏನಿಲ್ಲವೆಂದರೂ ಇಪ್ಪತ್ತು ದಿನಗಳು ಪ್ರವಾಸದಲ್ಲಿರುವರು. ಅವರಷ್ಟು ಜನಪ್ರಿಯ ಸಂಗೀತ ವಿದ್ವಾಂಸರು ವಿರಳ; ಊರೂರುಗಳಿಂದ ಕರೆ. ಬಹುಮಟ್ಟಿಗೆ ತಮಿಳುನಾಡಿನಲ್ಲೇ ಸಂಚಾರ, ಮೊದಮೊದಲು ಮೂರು ನಾಲ್ಕು ತಿಂಗಳುಗಳು ಸಂಚಾರದಲ್ಲೇ ಇದ್ದುಬಿಡುವರು; ನಡು ನಡುವೆ ಮನೆಯ ಯೋಚನೆ, ಮೈಸೂರಿಗೆ ಹಿಂದಿರುಗಿ ಮನೆಯ ಯೋಗಕ್ಷೇಮ ನೋಡಿಕೊಂಡು ತಮ್ಮ ಸಂಚಾರದಲ್ಲಿ ಅಗತ್ಯವಾದದ್ದನ್ನೂ ವ್ಯವಸ್ಥೆ ಮಾಡಿಕೊಂಡು ಮತ್ತೆ ಸಂಚಾರಕ್ಕೆ ಹೊರಡುವರು. ಹೀಗೆ ಮೈಸೂರಲ್ಲಿರುತ್ತಿದ್ದುದೇ ಕಡಮೆ.

ಸಂಗೀತ ಕಲಾಶಾಲೆಯನ್ನು ಕಟ್ಟಿಕೊಂಡ ಮೇಲೆ ಹೇಗೆ? ವಿದ್ಯಾರ್ಥಿಗಳಿಗೆ ಕ್ರಮವಾಗಿ ಶಿಕ್ಷಣ ದೊರೆಯಬೇಡವೆ? ಅದಕ್ಕಾಗಿ ತಮ್ಮ ಶಿಷ್ಯರಲ್ಲೇ ಕೆಲವರನ್ನು ಅಧ್ಯಾಪಕರಾಗಿ ನೇಮಿಸಿಕೊಂಡರು. ೧೯೫೨ರಲ್ಲಿ ಬೆಂಗಳೂರಿನಲ್ಲೂ ಅಯ್ಯನಾರ್ ಕಲಾಶಾಲೆಯ ಶಾಖೆಯೊಂದನ್ನು ತೆರೆದರು. ಬೆಂಗಳೂರು ಶಾಖೆಯನ್ನು ವಿದ್ವಾನ್ ಆನೂರು ರಾಮಕೃಷ್ಣ ಅವರು ನಡೆಸುತ್ತ ಅಭಿವೃದ್ಧಿಗೆ ತಂದಿದ್ದಾರೆ. ಅಂತೂ ಈ ಎರಡು ಕಲಾಶಾಲೆಗಳಿಂದ ಚೌಡಯ್ಯನವರು ಸಾವಿರಾರು ವಿದ್ಯಾರ್ಥಿಗಳಿಗೆ ಸಂಗೀತ ಜ್ಞಾನವನ್ನೂ, ಸಂಗೀತಾಭಿರುಚಿಯನ್ನೂ ಒದಗಿಸಿದರು. ಇವರಲ್ಲಿ ಹಲವರು ವೇದಿಕೆಯ ವಿದ್ವಾಂಸರೂ, ವಿದುಷಿಯರೂ ಆಗಿದ್ದಾರೆ.

ಈ ಕಲಾಶಾಲೆಗಳಲ್ಲದೆ, ಗುರುಕುಲವಾಸ ಪದ್ಧತಿಯಲ್ಲಿ ಅವರು ಕೆಲವು ಶ್ರೇಷ್ಠ ವಿದ್ವಾಂಸರನ್ನು ತಯಾರು ಮಾಡಿದ್ದಾರೆ. ಇವರಲ್ಲಿ ಪ್ರಮುಖರು ವಿ. ಸೇತುರಾಮಯ್ಯ (೧೯೧೭–೧೯೮೬) ಮೊದಲು ಕೊಯಂಬತ್ತೂರು ಫಿಡ್ಲ್ ಬಾಲಸುಬ್ರಹ್ಮಣ್ಯಯ್ಯರ ಬಳಿ ಪಿಟೀಲು ವಾದನವನ್ನು ಕಲಿತು ಅನಂತರ ಬಿಡಾರದ ಕೃಷ್ಣಪ್ಪನವರಲ್ಲಿ ಶಿಷ್ಯರಾದರು; ಅವರಿಗೆ ಹೆಚ್ಚಾಗಿ ಪಾಠ ಹೇಳಿದ್ದು ಚೌಡಯ್ಯನವರೇ. ಏಳುತಂತಿಗಳ ಪಿಟೀಲು ಒಂದನ್ನೂ ಅವರಿಗೆ ಚೌಡಯ್ಯನವರು ೧೯೩೪ರಲ್ಲಿ ಕೊಟ್ಟು ಅದನ್ನೇ ನುಡಿಸುವಂತೆ ಸೂಚಿಸಿದರು. ಸೇತುರಾಮಯ್ಯ ಕಡೆಯವರೆಗೂ ಅದನ್ನೇ ನುಡಿಸುತ್ತಿದ್ದರು. ೧೯೩೮ರಲ್ಲಿ ಮದ್ರಾಸ್ ಆಲ್ ಇಂಡಿಯ ರೇಡಿಯೋನಲ್ಲಿ ಚೌಡಯ್ಯನವರ ಶಿಫಾರಿಸಿನ ಮೇಲೆ ಪಿಟೀಲು ವಾದಕರಾಗಿ ಉದ್ಯೋಗವನ್ನು ಪಡೆದುಕೊಂಡರು. ಅನೇಕ ಪ್ರಸಿದ್ಧ ವಿದ್ವಾಂಸರಿಗೆ ಪಕ್ಕವಾದ್ಯ ಒದಗಿಸಿ ಕೀರ್ತಿವಂತರಾದರು. ಚೆಂಬೈ ವೈದ್ಯನಾಥ ಭಾಗವತರು ಅವರನ್ನು 'ಸಪ್ತತಂತ್ರೀದ ವಿಶಾರದ' ಎಂದು

ಕರೆದರು. ಚೌಡಯ್ಯನವರ ತನಿ ಕಚೇರಿಗಳಲ್ಲಿ ಇವರ ಸಹವಾದನವಿರುತ್ತಿದ್ದಿತು.

ಇನ್ನೊಬ್ಬ ಶಿಷ್ಯರು ಪಾಲಕ್ಕಾಡು ಸಿ. ಆರ್. ಮಣಿ ಅಯ್ಯರ್ (ಜನನ ೧೯೧೫). ಇವರು ಮೊದಲು ಚೆಂಬೈ ವೈದ್ಯನಾಥ ಭಾಗವತರಲ್ಲಿ ಸಂಗೀತ ಕಲಿತು, ಅನಂತರ ಚೌಡಯ್ಯನವರ ಬಳಿ ಶಿಷ್ಯವೃತ್ತಿ ಮಾಡಿ ಏಳುತಂತಿ ಪಿಟೀಲು ನುಡಿಸುತ್ತಿದ್ದರು. ಕಂಡದೇವಿ ಅಳಹರ್‌ಸ್ವಾಮಿ (ಜನನ ೧೯೨೫) ಮತ್ತೊಬ್ಬ ಶಿಷ್ಯರು. ಸಾಮಾನ್ಯವಾಗಿ ಇವರನ್ನು ಅಳಗಿರಿಸ್ವಾಮಿ ಎಂದು ತಪ್ಪಾಗಿ ಕರೆಯುತ್ತಾರೆ. ಇವರು ರಾಮನಾಥಪುರಂ ಜಿಲ್ಲೆಯ ಕಂಡದೇವಿ ಎಂಬೂರಿನ ಸುಂದರರಾಜ ಅಯ್ಯಂಗಾರ್ಯರ ಮಕ್ಕಳು. ತಮ್ಮ ಚಿಕ್ಕಪ್ಪ ಚೆಲ್ಲಂ ಅಯ್ಯಂಗಾರ್ಯರ ಬಳಿಯೇ ಪಿಟೀಲು ಕಲಿತು, ಚೌಡಯ್ಯನವರ ಗುರುಕುಲವನ್ನು ಸೇರಿದರು. ಮೊದಲು ಏಳುತಂತಿ ಪಿಟೀಲನ್ನು ನುಡಿಸುತ್ತಿದ್ದರು; ಅನಂತರ ನಾಲ್ಕುತಂತಿ ಪಿಟೀಲನ್ನೇ ಉಳಿಸಿಕೊಂಡರು.

ಆರ್. ಕೆ. ವೆಂಕಟರಾಮಾಶಾಸ್ತ್ರಿಯವರು (೧೯೧೦–೧೯೯೨) ರುದ್ರಪಟ್ಟಣದವರು; ತಮ್ಮ ತಂದೆ ಕೃಷ್ಣಶಾಸ್ತ್ರಿಗಳಲ್ಲೇ ಮೊದಲ ಸಂಗೀತ ಶಿಕ್ಷಣ. ಅನಂತರ ವೀಣೆ ಸುಬ್ಬಣ್ಣ ಮತ್ತು ವಾಸುದೇವಾಚಾರ್ಯರಲ್ಲಿ ಶಿಷ್ಯವೃತ್ತಿ ಮಾಡಿ, ಚೌಡಯ್ಯನವರ ಬಳಿ ಪಿಟೀಲು ಶಿಕ್ಷಣದಲ್ಲಿ ಪಾರಂಗತರಾದರು. ಚೌಡಯ್ಯನವರ ಜೊತೆ ಹಲವಾರು ಕಚೇರಿಗಳಲ್ಲಿ ಸಹವಾದಕರಾಗಿದ್ದರು. ಚೌಡಯ್ಯನವರು ೧೯೩೮ರಲ್ಲಿ ಇವರಿಗೆ ಮದ್ರಾಸಿನ ಆಕಾಶವಾಣಿ ಕೇಂದ್ರದಲ್ಲಿ (ಆಲ್ ಇಂಡಿಯ ರೇಡಿಯೋ) ಪಿಟೀಲು ವಿದ್ವಾಂಸರ ಉದ್ಯೋಗವನ್ನು ಕೊಡಿಸಿದರು. ಅಲ್ಲಿಯೇ ಮೂವತ್ತುಮೂರು ವರ್ಷಗಳು ದುಡಿದು ನಿವೃತ್ತರಾದರು. ಪ್ರಸಿದ್ಧ ಗಾಯಕರಿಗೆ (ಟೈಗರ್ ವರದಾಚಾರ್ಯರು, ತಂಜಾವೂರು ಪೊನ್ನಯ್ಯ ಪಿಳ್ಳೆ, ಅರಿಯಕ್ಕುಡಿ ರಾಮಾನುಜ ಆಯ್ಯಂಗಾರ್ಯರು,



ವಾಸುದೇವಾಚಾರ್ಯರು, ಮಹಾರಾಜಪುರಂ ವಿಶ್ವನಾಥಯ್ಯರ್, ಶೆಮ್ಮಂಗುಡಿ ಶ್ರೀನಿವಾಸಯ್ಯರ್ ಮೊದಲಾದವರಿಗೆ) ಪಕ್ಕವಾದ್ಯ ನುಡಿಸಿದ್ದಾರೆ. ಎಂ. ಎಸ್. ಸುಬ್ಬುಲಕ್ಷ್ಮಿಯವರ ಹಲವು ಕಚೇರಿಗಳಿಗೆ ಇವರದ್ದೇ ಪಿಟೀಲು ವಾದನ. ಇವರ ಪರಿಚಯ ನನಗಿದ್ದಿತು. ಸದಾಚಾರ ಸಂಪನ್ನರು, ನಿಗರ್ವಿಗಳು, ವೇದವಿದ್ವಾಂಸರು, ಭಗವದ್ಭಕ್ತರು.

ಇವರಲ್ಲದೆ ಇವರ ನಂಟರೇ ಆದ ಟಿ. ಗುರುರಾಜಪ್ಪ (ಪಿಟೀಲು) ಮತ್ತು ಟಿ. ಪುಟ್ಟಸ್ವಾಮಿ (ಗಾಯನ), ಇವರಿಂದ ಶಿಕ್ಷಣವನ್ನೋ, ಮಾರ್ಗದರ್ಶನವನ್ನೋ ಪಡೆದರು. ಇವರ ಅಣ್ಣ ಲಿಂಗಪ್ಪಾಜಿ (೧೯೦೦–೧೯೭೦) ಬಿಡಾರದ ಕೃಷ್ಣಪ್ಪನವರ ಶಿಷ್ಯರು; ಸಂಗೀತ, ಸಂಸ್ಕೃತ ಎರಡನ್ನೂ ಚೆನ್ನಾಗಿ ಬಲ್ಲವರು; ಸಂಶೋಧಕರು. ಇಪ್ಪತ್ತೆರಡು ಶ್ರುತಿಗಳ ಹಾರ್ಮೋನಿಯಂ ವಾದ್ಯವನ್ನು ನಿರ್ಮಿಸಿದವರು. 'ಷಡ್ರಾಗಮಂಜರಿ' ಎಂಬ ಸಂಸ್ಕೃತ ಪುಸ್ತಿಕೆಯನ್ನೂ ಬರೆದಿದ್ದಾರೆ. ವೇಣುಗೋಪಾಲ ಶೆಟ್ಟಿ ಎಂಬುವರೂ ಚೌಡಯ್ಯನವರ ಬಳಿ ಪಿಟೀಲನ್ನು ಕಲಿತರು.

ಚೌಡಯ್ಯನವರ ಶಿಷ್ಯರಲ್ಲಿ ಎಚ್. ಆರ್. ಸೀತಾರಾಮಶಾಸ್ತ್ರಿ, ವಿ. ರಾಮರತ್ನಂ, ಎನ್. ನಂಜುಂಡಸ್ವಾಮಿ, ಅನಸೂಯಾ ಇವರೆಲ್ಲ ಗಾಯನದಲ್ಲಿ ಪ್ರಸಿದ್ಧರಾದರು.

ಚೌಡಯ್ಯನವರ ತನಿ ಕಚೇರಿಗಳು ಪ್ರಸಿದ್ಧವಾದುವು. ಅರುಣಾಚಲಪ್ಪನವರ (೧೮೮೯–೧೯೬೬) ಹಾರ್ಮೋನಿಯಂ ಸಹವಾದನದೊಂದಿಗೆ ಅನೇಕ ಕಚೇರಿಗಳನ್ನು ಮಾಡಿದರು. ಅರುಣಾಚಲಪ್ಪನವರು ಕೊಳ್ಳೇಗಾಲದ ನಾರಾಯಣಸ್ವಾಮಿ ಎಂಬುವರ ಬಳಿ ಬಾಲಪಾಠ ಮಾಡಿ ಪುಟ್ಟಪ್ಪ ಎಂಬುವರ ಬಳಿ ಪಿಟೀಲನ್ನು ಅಭ್ಯಾಸ ಮಾಡಿ ,ಅನಂತರ ಹಾರ್ಮೋನಿಯಂ ವಾದ್ಯವನ್ನು ಹಿಡಿದರು. ಅವರು ಬಿ.



ಎಸ್. ರಾಜಯ್ಯಂಗಾರ್ಯರ ಗಾಯನಕ್ಕೆ ಸಹವಾದನ ನುಡಿಸಿದುದು ಪ್ರಸಿದ್ಧವಾಗಿದೆ. ಅವರ ವಾದನವನ್ನು ಬಿಡಾರಂ ಕೃಷ್ಣಪ್ಪನವರೂ ಮೆಚ್ಚಿಕೊಂಡಿದ್ದರು. ಚೌಡಯ್ಯನವರ ಏಳುತಂತಿ ಪಿಟೀಲು ಮತ್ತು ಅರುಣಾಚಲಪ್ಪನವರ ಡಬಲ್‌ರೀಡ್ಸ್ ಹಾರ್ಮೋನಿಯಂ ಎರಡರ ಮೇಳ ರಂಜಕವಾಗಿರುತ್ತಿದ್ದಿತು.

ಅವರೊಂದಿಗೆ ತನಿ ಕಚೇರಿಗಳಲ್ಲಿ ಸುಮಾರು ಇಪ್ಪತ್ತು ವರ್ಷ ಸಹವಾದನ ನುಡಿಸಿದವರು ಪಿ. ಭುವನೇಶ್ವರಯ್ಯನವರು. ಮದ್ರಾಸಿನ ಮೈಲಾಪುರದಲ್ಲಿ ಒಮ್ಮೆ ಚೌಡಯ್ಯನವರು ತಮ್ಮ ಏಳು ಮಂದಿ ಶಿಷ್ಯರೊಂದಿಗೆ ಪಿಟೀಲು ಕಚೇರಿ ಮಾಡಿದರು. 'ಇವರೇ ನನ್ನ ಪಿಟೀಲಿನ ಏಳು ತಂತಿಗಳು' ಎಂದು ತಮ್ಮ ಶಿಷ್ಯರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ಶಿಷ್ಯರ ಬಗ್ಗೆ ಅವರಿಗಿದ್ದ ಹೆಮ್ಮೆ ಅದು. ಮೊದಮೊದಲು ಎಂ. ಜೆ. ಶ್ರೀನಿವಾಸಯ್ಯಂಗಾರ್ಯರ ವೀಣೆ, ಚೌಡಯ್ಯನವರ ಪಿಟೀಲು

ವಯೋಲಿನ್—ವೀಣೆ ದ್ವಂದ್ವ ಕಚೇರಿ
(ಚೌಡಯ್ಯನವರು ಮತ್ತು ದೊರೆಸ್ವಾಮಿ ಅಯ್ಯಂಗಾರ್ಯರು) ಎಂ. ಎಲ್. ವೀರಭದ್ರಯ್ಯ ಮೃದಂಗ, ಮಂಜುನಾಥ್ ಘಟ

ಶ್ರೀ ಚೌಡಯ್ಯನವರ ಜತೆ ಶ್ರೀ ರಾಮಸೇವಾ ಮಂಡಲಿಯ ಸಂಸ್ಥಾಪಕ ಕಾರ್ಯದರ್ಶಿ
ಶ್ರೀ ಎಸ್. ವಿ. ನಾರಾಯಣಸ್ವಾಮಿರಾವ್‌ರವರು

ಎರಡರ ಜೋಡಿ ಕಚೇರಿಗಳಿರುತ್ತಿದ್ದುವು. ಅನಂತರ ವಿ. ದೊರೆಸ್ವಾಮಿ ಅಯ್ಯಂಗಾರ್ಯರ ವೀಣೆಯೊಂದಿಗೆ ಚೌಡಯ್ಯನವರ ಪಿಟೀಲು ತುಂಬ ಜನಪ್ರಿಯವಾಯಿತು. ಚೌಡಯ್ಯನವರ ಕಡೆಗಾಲದಲ್ಲಿ ಹತ್ತು ವರ್ಷಗಳ ಕಾಲ ಈ ಜೋಡಿಯು ರಸಿಕರಿಗೆ ಸಂತೋಷವನ್ನು ತಂದಿತು.

ಅವರು ಹಲವಾರು ವಿದ್ವಾಂಸರಿಗೆ ನೀಡಿದ ಪ್ರೋತ್ಸಾಹ, ಒತ್ತಾಸೆ ಸ್ಮರಣೀಯವಾಗಿದೆ. ತಮ್ಮ ಪಿಟೀಲು ವಾದನಕ್ಕೆ ಎಂ. ಎಲ್. ವೀರಭದ್ರಯ್ಯ, ಎಚ್. ಪುಟ್ಟಾಚಾರ್ (ಮೃದಂಗ), ಎಂ. ಎಲ್. ಮಂಜುನಾಥ್ (ಘಟ), ಸೋಸಲೆ ಶೇಷಗಿರಿದಾಸ್, ಎಚ್. ಪಿ. ರಾಮಾಚಾರ್ (ಖಂಜರಿ) ಇವರನ್ನು ವಿಶೇಷವಾಗಿ ಇರಿಸಿಕೊಂಡುದಲ್ಲದೆ, ಬೇರೆ ಗಾಯಕರಿಗೂ ಇವರ ಪಕ್ಕವಾದ್ಯವನ್ನು ಸೂಚಿಸುತ್ತಿದ್ದರು. ಇವರನ್ನು ಬೆಳಕಿಗೆ ತಂದವರು ಇವರು ಎಂದರೆ ಅತಿಶಯೋಕ್ತಿಯಲ್ಲ.

ಬೆಂಗಳೂರಿನ ರಾಮಸೇವಾ ಮಂಡಲಿ ನಗರದ ರಸಿಕರಿಗೆ ಸಂಗೀತದ ಸವಿಯನ್ನು ಉಣಬಡಿಸುತ್ತಿದೆಯಷ್ಟೆ. ಈ ಸಂಸ್ಥೆಯು ೧೯೩೯ರಲ್ಲಿ ಎಸ್. ವಿ. ನಾರಾಯಣಸ್ವಾಮಿರಾಯರಿಂದ, ಅವರ ಮಿತ್ರರಾದ ಶ್ರೀಪಾದರಾವ್ ಮತ್ತು ಪಿ. ಆರ್. ರಾಧಾಕೃಷ್ಣಶೆಟ್ಟಿ ಇವರ ನೆರವಿನಿಂದ ಆರಂಭವಾಯಿತು; ರಾಮನವಮಿ ಸಂದರ್ಭದಲ್ಲಿ ಸಾರ್ವಜನಿಕರ ಸಲುವಾಗಿ ಸಂಗೀತ ಕಚೇರಿಗಳನ್ನು ಏರ್ಪಡಿಸುವುದು ಉದ್ದೇಶ. ಆರಂಭವಾದ ಮರುವರ್ಷದಿಂದಲೇ ಚೌಡಯ್ಯನವರ ಸಹಾಯದಿಂದ ಶ್ರೇಷ್ಠ, ಪ್ರಸಿದ್ಧ ವಿದ್ವಾಂಸರ ಕಚೇರಿಗಳು ನಡೆಯತೊಡಗಿದುವು. ನಾಲ್ಕೈದು ವರ್ಷಗಳಲ್ಲೇ ಈ ಸಂಸ್ಥೆಯ ಸಂಗೀತ ಕಚೇರಿಗಳು ನಗರದಲ್ಲೆಲ್ಲ ಮನೆಮಾತಾದುವು. ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರು, ಚೆಂಬೈ ವೈದ್ಯನಾಥ ಭಾಗವತರು, ಜಿ. ಎನ್. ಬಾಲಸುಬ್ರಹ್ಮಣ್ಯಂ, ಮಹಾರಾಜಪುರಂ ವಿಶ್ವನಾಥಯ್ಯರು, ಶೆಮ್ಮಂಗುಡಿ ಶ್ರೀನಿವಾಸಯ್ಯರು, ಮಧುರೆ ಮಣಿ ಅಯ್ಯರು ಮೊದಲಾದವರೆಲ್ಲ ಇಲ್ಲಿ ಪ್ರತಿ ವರ್ಷವೂ ಕಚೇರಿ ನಡೆಸುತ್ತಿದ್ದರು; ಅವರಿಗೆಲ್ಲ ಚೌಡಯ್ಯನವರದ್ದೇ ಪಕ್ಕವಾದ್ಯ. ಎಂ. ಎಸ್. ಸುಬ್ಬುಲಕ್ಷ್ಮಿಯವರ ಕಚೇಯೂ ತಪ್ಪದೆ ಇರುತ್ತಿದ್ದಿತು. ರಾಮನವಮಿ ಉತ್ಸವಕ್ಕೆ ಅದೇ ವಿಶೇಷ ಕಳೆ. ಚೌಡಯ್ಯನವರು ಕರೆದರೆ ಸಾಕು, ಇವರೆಲ್ಲ



—ಬೆಂಗಳೂರಿನ ರಾಮಸೇವಾಮಂಡಲಿಯಲ್ಲಿ—
ಶ್ರೀ ಟಿ. ಆರ್. ಮಹಾಲಿಂಗಂ, ಶ್ರೀ ಎಸ್. ವಿ. ನಟರಾಜ್, ಶ್ರೀ ಎಸ್. ವಿ.
ನಾರಾಯಣಸ್ವಾಮಿ ರಾವ್, ಪಾಲಕ್ಕಾಡು ಶ್ರೀ ಟಿ. ಎಸ್. ಮಣಿ ಅಯ್ಯರ್,
ಶ್ರೀ ಎ. ಎನ್. ರಾಮರಾವ್, ಶ್ರೀ ಟಿ. ಚೌಡಯ್ಯ

ಮರುಮಾತಾಡದೆ ಬರುತ್ತಿದ್ದರು. ನಗರದ ಸಂಗೀತ ಸಂಸ್ಕಾರವು ಬಲಗೊಳ್ಳಲು ಈ ಸಂಸ್ಥೆ ಕಾರಣವಾಯಿತು.

ಮೈಸೂರಿನ ಪ್ರಸನ್ನ ಸೀತಾರಾಮಮಂದಿರದಲ್ಲಿ ನಡೆಯುತ್ತಿದ್ದ ಸಂಗೀತೋತ್ಸವಕ್ಕೆ ಹತ್ತಾರು ದಿನಗಳು ಹೊರಗಿನ ಸಂಗೀತಗಾರರು ಬಂದು ನೆರೆಯುತ್ತಿದ್ದರಷ್ಟೆ. ಈ ಉತ್ಸವದ ವ್ಯವಸ್ಥೆಯೆಲ್ಲ ಚೌಡಯ್ಯನವರದ್ದೇ. ಬಂದ ವಿದ್ವಾಂಸರೆಲ್ಲ ಚೌಡಯ್ಯನವರ ಮನೆಯಲ್ಲೇ ತಂಗುವರು. ಅವರಿಗಾಗಿ ಅಡಿಗೆಯವರನ್ನೂ ಗೊತ್ತುಮಾಡಿ ಅವರವರ ಆಚಾರದಂತೆ ಊಟ-ಉಪಚಾರಗಳು ನಡೆಯುವಂತೆ ಮಾಡುತ್ತಿದ್ದರು. ಉಳಿದ ವೇಳೆಯಲ್ಲೂ ಅವರ ಮನೆ ಛತ್ರವೇ; ಶಿಷ್ಯರು, ಮಿತ್ರರು, ನೆಂಟರು, ಅಭಿಮಾನಿಗಳು, ರಸಿಕರು ಅವರನ್ನು ಎಡೆಬಿಡದೆ ಮುತ್ತಿರುತ್ತಿದ್ದರು. ಚೌಡಯ್ಯನವರ ಔದಾರ್ಯ, ಆದರ, ಆತಿಥ್ಯ ಇವು ಬೇರೆ ಯಾವ ಸಂಗೀತ ವಿದ್ವಾಂಸರಲ್ಲಿಯೂ ಕಾಣಸಿಗಲಾರವು.

ಅವರ ಶಿಷ್ಯವಾತ್ಸಲ್ಯವನ್ನು ಅವರ ಶಿಷ್ಯರೆಲ್ಲ ನೆನೆಸಿಕೊಳ್ಳುತ್ತಾರೆ. ಶಿಷ್ಯರೊಂದಿಗೇ ತಮ್ಮ ಊಟ; ತಮ್ಮ ಊಟವೇ ಅವರಿಗೂ. ತಾವು ಹೋದೆಡೆ ಅವರನ್ನೂ ಕರೆದೊಯ್ಯುವರು. ಅವರನ್ನು ಪ್ರೋತ್ಸಾಹಿಸುವರು. ಸಂಗೀತರಸಿಕರಿಗೆ, ಕಲಾಭಿಮಾನಿಗಳಿಗೆ ಅವರ ಪರಿಚಯವನ್ನು ಮಾಡಿ ಕೊಡುವರು. ಅವರ ಶಿಷ್ಯ ವಿ. ಸೇತುರಾಮಯ್ಯ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರಿಗೆ ಪಕ್ಕವಾದ್ಯ ನುಡಿಸಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಇದು ಪುದುಕ್ಕೋಟೆ ಸಂಗೀತ ಸಭೆಯ ಆಶ್ರಯದಲ್ಲಿ ನಡೆಯಿತು. ಸೇತುರಾಮಯ್ಯ ಮೊಟ್ಟಮೊದಲು ವೇದಿಕೆಯ ಮೇಲೆ ಹತ್ತಿದ ಆ ದಿನ ಚೌಡಯ್ಯನವರು ದೂರದ ಮೈಸೂರಿನಿಂದ ಬಂದು ಶಿಷ್ಯನನ್ನು ಆಶೀರ್ವದಿಸಿದರು. ಸಭೆ ಮುಗಿಯುವವರೆಗೂ ಇದ್ದು ಶಿಷ್ಯನ ಬೆನ್ನು ತಟ್ಟಿ, ಸಂತೋಷಪಟ್ಟು ಹಿಂದಿರುಗಿದರು.

ಸೇತುರಾಮಯ್ಯ ತಾವು ಚೌಡಯ್ಯನವರಲ್ಲಿ ಗುರುಕುಲವಾಸ ಮಾಡುತ್ತಿದ್ದಾಗ ನಡೆದ ಪ್ರಸಂಗವೊಂದನ್ನು ಕುರಿತು ಬರೆದಿದ್ದಾರೆ. ಒಂದು ದಿನ ಹಲವಾರು ಶಿಷ್ಯರಿಗೆ ಪಾಠ ನಡೆಯುತ್ತಿದ್ದಾಗ, ಒಬ್ಬ ವಿದ್ಯಾರ್ಥಿ ಎಷ್ಟು ಬಾರಿ ಗುರುಗಳು ತಿದ್ದಿದರೂ ತಪ್ಪು ತಪ್ಪಾಗಿಯೇ ಪಿಟೀಲನ್ನು

ನುಡಿಸುತ್ತಿದ್ದನಂತೆ; ಗುರುಗಳಿಗೆ ತಾಳ್ಮೆ ತಪ್ಪಿ, ಕಿಸೆಯಿಂದ ಹಣವನ್ನು ತೆಗೆದು ಅವನ ಕೈಲಿಟ್ಟು "ಇನ್ನು ನಿನ್ನ ಪಾಠ ಸಾಕು; ಊರಿಗೆ ಹಿಂದಕ್ಕೆ ಹೊರಡು!" ಎಂದು ಕಳುಹಿಸಿಬಿಟ್ಟರಂತೆ. ಶಿಷ್ಯ ಪಾಪ, ಏನು ಮಾಡುತ್ತಾನೆ? ಕೆಟ್ಟ ಮುಖ ಮಾಡಿಕೊಂಡು, ಎದ್ದು ರೈಲ್ವೇ ಸ್ಟೇಷನ್ನಿಗೆ ಹೊರಟ. ಅವನು ಸ್ಟೇಷನ್ ಮುಟ್ಟುವುದರೊಳಗೆ ಹಿಂದಿನಿಂದ ಚೌಡಯ್ಯನವರು ತಮ್ಮ ಕಾರಿನಲ್ಲಿ ಬಂದು, ನಡುದಾರಿಯಲ್ಲೇ ನಿಲ್ಲಿಸಿ, ಅವನನ್ನು ಹಿಂದಕ್ಕೆ ಕರೆದುಕೊಂಡು ಬಂದರು. ಅವನು ಹೊರಟೊಡನೆ ಅವರಿಗೆ, "ಅಯ್ಯೊ, ಆ ಹುಡುಗನಿಗೆ ನಾನು ಮಾಡಿದ್ದು ತಪ್ಪು ! ಇವತ್ತಲ್ಲ ನಾಳೆ, ಸರಿಯಾಗಿ ನುಡಿಸುತ್ತಾನೆ. ನಾನು ದುಡುಕಬಾರದು" ಎನಿಸಿತಂತೆ !

ಶಿಷ್ಯರು ಯಾರಿಗಾದರೂ ಪಕ್ಕವಾದ್ಯ ನುಡಿಸುವಾಗ, ಗುರುಗಳು ಊರಿನಲ್ಲಿದ್ದರೆ ಬಂದು ಮುಂದಿನ ಸಾಲಲ್ಲೇ ಕೂಡುವರು: ವಾದನವನ್ನು ಸೂಕ್ಷ್ಮವಾಗಿ ಗಮನಿಸಿ, ಕಚೇರಿ ಮುಗಿದ ಮೇಲೆ ತಪ್ಪುಗಳಿದ್ದರೆ ತಿಳಿಸಿ ಹೇಳುವರು, ಗುಣವಿದ್ದರೆ ಮೆಚ್ಚಿಕೊಳ್ಳುವರು, ವಾದನ ಹೆಚ್ಚು ಆಕರ್ಷಕವಾಗಲು ಸಲಹೆಗಳನ್ನು ಕೊಡುವರು. ತಮ್ಮ ಶಿಷ್ಯರೆಲ್ಲರೂ ಮೇಲೆ ಬರಬೇಕೆಂಬ ತವಕ ಅವರಿಗಿದ್ದಿತು. ಶಿಷ್ಯರಲ್ಲದಿದ್ದರೂ ಕಿರಿಯ ವಿದ್ವಾಂಸರಿಗೆ ಹಿರಿಯ ವಿದ್ವಾಂಸರು ಪ್ರೋತ್ಸಾಹ ಕೊಡಬೇಕಾದುದು. ಧರ್ಮವೆಂದು ಅವರು ಹೇಳುತ್ತಿದ್ದರು. ಮದ್ರಾಸಿನ ಮ್ಯೂಸಿಕ್ ಅಕ್ಯಾಡಮಿಯು ನಡೆಸುತ್ತಿದ್ದ ಕಿರಿಯರ ಸಂಗೀತ ಕಚೇರಿಯೊಂದರಲ್ಲಿ ಆ ಕಾಲದಲ್ಲಿ (೧೯೫೪) ಇನ್ನೂ ಹೆಸರು ಮಾಡಿರದ ರಾಮನಾಡ್ ಕೃಷ್ಣನ್ ಅವರಿಗೆ ಆ ವೇಳೆಗಾಗಲೇ ಸುಪ್ರಸಿದ್ಧರೂ, 'ಸಂಗೀತರತ್ನ' ರಾಗಿದ್ದವರೂ, ಮೈಸೂರು ಆಸ್ಥಾನ ವಿದ್ವಾಂಸರಾಗಿದ್ದವರೂ, ಮೇಲ್ಮಟ್ಟದ ಗಾಯಕರಿಗೆ ಪಕ್ಕವಾದ್ಯ ನುಡಿಸುತ್ತಿದ್ದವರೂ ಆಗಿದ್ದ ಚೌಡಯ್ಯನವರು ಪಕ್ಕವಾದ್ಯ ನುಡಿಸಲು ತಾವಾಗಿ ಮುಂದೆ ಬಂದರು!

ದಿಟವಾಗಿ ಅವರಿಗೆ ತಾವು ಸಂಗೀತದಲ್ಲಿ ಪಾರಂಗತರು, ಸರ್ವಜ್ಞರು ಎನ್ನುವ ಭಾವನೆ ಕನಸು ಮನಸಿನಲ್ಲಿಯೂ ಇರಲಿಲ್ಲ. ಅವರ ಧೈರ್ಯ, ಎದೆಗಾರಿಕೆ, ಆತ್ಮವಿಶ್ವಾಸ, ಗರ್ವ ಇವುಗಳ ಪರಿಚಯವಿದ್ದವರಿಗೆ ಮುಂದಿನ ಪ್ರಸಂಗ ಆಶ್ಚರ್ಯವನ್ನುಂಟುಮಾಡೀತು. ಅವರ ಕಿರಿಯ ಮಿತ್ರರೂ, ಪ್ರೀತಿಪಾತ್ರರೂ ಆಗಿದ್ದ ಕೆ. ಶ್ರೀಕಂಠಯ್ಯ (ಚೌಡಯ್ಯನವರ

ಅಭಿಮಾನಿಗಳೂ, ಸನ್ಮಿತ್ರರೂ ಆಗಿದ್ದ ಅಡ್ವೊಕೇಟ್ ಕೆ. ಪುಟ್ಟೊರಾಯರ ಮಗ) ಒಂದು ದಿನ ಮೈಸೂರಿನಲ್ಲಿ ಅವರ ಮನೆಗೆ ಹೋದರಂತೆ. ಇದು ೧೯೬೩ರಲ್ಲಿ ನಡೆದದ್ದು; ಆಗ ಚೌಡಯ್ಯನವರಿಗೆ ಅರವತ್ತೆಂಟು ವರ್ಷಗಳು. ಮನೆಯಲ್ಲಿ ಚೌಡಯ್ಯ ಸರಳಿ, ಜಂಟಿವರಸೆಗಳನ್ನು ಏಕಾಗ್ರಚಿತ್ತರಾಗಿ ಅಭ್ಯಾಸ ಮಾಡುತ್ತಿದ್ದರು. ಶ್ರೀಕಂಠಯ್ಯನವರಿಗೆ ಇದು ವಿಚಿತ್ರವೆನಿಸಿತು. ಒಳಗೆ ಬಂದು ಚೌಡಯ್ಯನವರನ್ನು ಕುರಿತು "ಇದೇನು ನೀವು ಮಾಡುತ್ತಿರುವುದು, ಈ ವಯಸ್ಸಿನಲ್ಲಿ?" ಎಂದು ಕೇಳಿದರು.

ಚೌಡಯ್ಯ ಹೇಳಿದರು—"ಪ್ರತಿಯೊಂದು ಸ್ವರದ ಗೇಯಸ್ವರೂಪ ಏನೆಂಬುದನ್ನು ತಿಳಿದುಕೊಳ್ಳಬೇಕು. ಅದಕ್ಕಾಗಿ ಪ್ರಯತ್ನಿಸುತ್ತಿದ್ದೇನೆ."

ಅದಕ್ಕೆ ಶ್ರೀಕಂಠಯ್ಯ "ಈ ಬಾಲಪಾಠವನ್ನು ಮುಗಿಸಿ ಅರವತ್ತು ವರ್ಷಗಳೂ ಮುಗಿದಿರಬೇಕಲ್ಲ!" ಎಂದರು.

ಚೌಡಯ್ಯ "ಎಲ್ಲಿಯಾದರೂ ಉಂಟೆ, ಶ್ರೀಕಂಠಯ್ಯ? ನಮ್ಮ ಸಂಗೀತದಲ್ಲಿ ಒಂದೇ ಒಂದು ಸ್ವರದ ಮಟ್ಟಕ್ಕೆ ನಾನು ಎಂದಿಗಾದರೂ ಏರಬಲ್ಲೆನೆ? ಈ ವಾದ್ಯದ ಸಾಮರ್ಥ್ಯವನ್ನು ಸಂಪೂರ್ಣವಾಗಿ ಎಂದಿಗಾದರೂ ಅರಿತುಕೊಳ್ಳಬಲ್ಲೆನೆ? ನಮ್ಮ ತ್ರಿಮೂರ್ತಿಗಳಿದ್ದಾರಲ್ಲ, ತ್ಯಾಗರಾಜರು, ದೀಕ್ಷಿತರು, ಶ್ಯಾಮಶಾಸ್ತ್ರಿಗಳು, ಇವರ ರಚನೆಗಳ ದಿವ್ಯವಾದ ಭಾವವನ್ನು ಗ್ರಹಿಸಿ ಅದನ್ನು ವಾದ್ಯದಲ್ಲಿ ನುಡಿಸುವುದು ನನಗೆ ಎಂದಾದರೂ ಸಾಧ್ಯವಾದೀತೆ?" ಎಂದುತ್ತರ ಕೊಟ್ಟರು.

ಸಂಭಾಷಣೆ ಮುಂದರಿಯಿತು. ಆದರೆ ಮುಂದಿನದು ಇಲ್ಲಿ ಅಪ್ರಸ್ತುತ. ಚೌಡಯ್ಯನವರ ವಿನಯ ಹೃದಯದಲ್ಲಿದ್ದುದು; ಒರಟುತನ, ಎದೆಗಾರಿಕೆ ಹೊರಗೆ ಕಾಣುತ್ತಿದ್ದುದು. ಸಂಗೀತದ ಮೇಲೆ ಅವರಿಗಿದ್ದ ದೃಷ್ಟಿ ಅವರ ಗುರುಭಕ್ತಿಗೆ ಸಂವಾದಿಯಾಗಿದ್ದಿತು. ದಿನವೂ ಬೆಳಿಗ್ಗೆ ದೇವರ ಪೂಜೆ ಮಾಡಿದೊಡನೆ, ತಮ್ಮ ಗುರುಗಳಾದ ಬಿಡಾರದ ಕೃಷ್ಣಪ್ಪನವರ ಭಾವಚಿತ್ರದ ಮುಂದೆ ನಿಂತು ಪ್ರಾರ್ಥನೆ ಸಲ್ಲಿಸಿ, ಕೊಂಚ ಹೊತ್ತು ಪಿಟೀಲು ನುಡಿಸಿ, ಅನಂತರವೇ ಉಪಾಹಾರವನ್ನು ಸ್ವೀಕರಿಸುವರು. ಗುರುಗಳು ಹೇಳಿದ್ದು ಅವರಿಗೆ ವೇದವಾಕ್ಯ; ಅದನ್ನೆಂದೂ ಮೀರಲಿಲ್ಲ

ಅವರು. ಗುರುಗಳು ಏರ್ಪಡಿಸಿದ ರಾಮದೇವರ ಗುಡಿಯಲ್ಲಿ ದಿನವೂ ಪೂಜೆ, ಅವರು ವ್ಯವಸ್ಥೆ ಮಾಡಿದ ರಾಮಮಂದಿರದಲ್ಲಿ ವರ್ಷಕ್ಕೊಮ್ಮೆ ಸಂಗೀತೋತ್ಸವ ಇವನ್ನು ಅವರು ತಪ್ಪದಂತೆ ನೋಡಿಕೊಂಡರು.

ಕರ್ನಾಟಕ ಸಂಗೀತದ ಪ್ರಸಿದ್ಧ ವಿದ್ವಾಂಸರನ್ನು ಕುರಿತು "ಎಲ್ಲಾರ್ವಿ" ಎಂಬ ಲೇಖಕರು ಚೊಕ್ಕವಾದ ಚಿಕ್ಕ ಪುಸ್ತಕಗಳನ್ನು ತಮಿಳಿನಲ್ಲಿ ಬರೆಯುತ್ತಿದ್ದರು. ಅವರು ೧೯೫೬ರಲ್ಲಿ ಚೌಡಯ್ಯನವರ ಬಳಿ ಬಂದು, ಅವರ ಮೇಲೆ ಪುಸ್ತಕವನ್ನು ಬರೆಯುವ ಮನಸ್ಸಿದೆಯೆಂದೂ, ಮಾಹಿತಿಗಳನ್ನು ಒದಗಿಸಬೇಕೆಂದೂ ಕೇಳಿದರು. ಚೌಡಯ್ಯನವರು ಒಡನೆಯೇ ಹೇಳಿದರು—"ನನ್ನ ವಿಚಾರ ಹಾಗೆ ಇರಲಿ. ನೀವು ಬರೆಯುವುದಾದರೆ ನನ್ನ ಗುರುಗಳನ್ನು ಕುರಿತು ಬರೆಯಿರಿ. ಅವರ ವಿಚಾರ ನಿಮಗೇನು ಮಾಹಿತಿ ಬೇಕೋ ನಾನು ಒದಗಿಸುತ್ತೇನೆ" ಎಂದು ಹೇಳಿದರು. "ಎಲ್ಲಾರ್ವಿ" ಬಿಡಾರದ ಕೃಷ್ಣಪ್ಪನವರ ಮೇಲೆ ಸೊಗಸಾದ ಒಂದು ಪುಸ್ತಕವನ್ನು ತಮಿಳಿನಲ್ಲಿ ಬರೆಯಲು ನೆರವಾದರು.

ಸಂಗೀತದಲ್ಲೊಂದು ಅಪೂರ್ವವಾದ ಅದ್ಭುತವಾದ ಚಿಕಿತ್ಸಕಶಕ್ತಿಯಿದೆ ಎಂದು ಚೌಡಯ್ಯನವರು ನಂಬಿದ್ದರು. ಹಲವಾರು ರೋಗಗಳನ್ನು ರಾಗ ಗುಣಪಡಿಸುವ ಸಾಧ್ಯತೆ ಅವರಿಗೆ ತಿಳಿದಿತ್ತು. ಅವರು ಸಂಗೀತದಲ್ಲಿ ಪೋಷಕಸಾಮಗ್ರಿಯೂ ಇದೆ ಎಂದೂ ಹೇಳುತ್ತಿದ್ದರು. ಗಿಡಗಳನ್ನು ಬೆಳೆಸುವಾಗ ಸಂಗೀತವನ್ನು ಎರೆದರೆ ಗಿಡ ಹುಲುಸಾಗಿ ಬೆಳೆಯುವುದೆಂದು ಅವರ ದೃಢವಾದ ನಂಬಿಕೆ. ಅದರ ವಿಚಾರವಾಗಿ ಅವರೊಂದಿಗೆ ಮಾತನಾಡಿದುದು ನನಗೆ ನೆನಪಿದೆ. ಈ ದಿಕ್ಕಿನಲ್ಲಿ ಒಂದೆರಡು ಪ್ರಯೋಗಗಳನ್ನು ನಡೆಸಿರುವುದಾಗಿಯೂ ಅವರು ಹೇಳಿದ್ದುಂಟು. ವಿವರಗಳು ನನಗೆ ತಿಳಿಯದು; ಆದರೆ ಈ ವಿಚಾರ ಮಾತನಾಡುವಾಗ ಅವರಿಗಿದ್ದ ಉತ್ಸಾಹವನ್ನೇನೋ ಬಲ್ಲೆ. ಸಂಗೀತದಿಂದ ಒದಗಿಬರುವ ಇಂಥ ಅನೇಕ ಪ್ರಯೋಜನಗಳನ್ನು ಕುರಿತಂತೆ ಅವರಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ. ಅವರು ಈ ದಿಸೆಯಲ್ಲಿ ಆಲೋಚನೆ ಮಾಡುವ ಕಾಲದಲ್ಲಿ ಇನ್ನೂ " ಮ್ಯೂಸಿಕ್ ಥೆರಪಿ" ಮುಂತಾದ ಪ್ರಕ್ರಿಯೆಗಳು ಅಷ್ಟಾಗಿ ಜನರಿಗೆ ತಿಳಿದಿರಲಿಲ್ಲ. ಚೌಡಯ್ಯನವರ ಆಲೋಚನೆಗಳು ಸ್ವತಂತ್ರವಾಗಿಯೇ ಹೊರಹೊಮ್ಮಿದಂತೆ ಕಾಣುತ್ತದೆ.

ಬಿಡುವಿಲ್ಲದ ಕಾರ್ಯಕ್ರಮವಿದ್ದರೂ, ಎಡೆಬಿಡದ ಪ್ರವಾಸವಿದ್ದರೂ ಅವರ ಆರೋಗ್ಯ ಚೆನ್ನಾಗಿದ್ದಿತು. ಹುಡುಗರಾಗಿರುವಾಗ ಮಾಡಿದ ಅಂಗಸಾಧನೆ, ಗುರುಕುಲವಾಸ ಮಾಡುವಾಗ ಮಾಡಿದ ವ್ಯಾಯಾಮ, ಪ್ರಾಣಾಯಾಮ ಮೊದಲಾದುವುಗಳಿಂದ ದೇಹ ದೃಢವಾಗಿದ್ದಿತು. ಲೌಕಿಕಪ್ರಸಕ್ತಿ ಬೇಕಾದಂತೆ ಇದ್ದರೂ ಧರ್ಮನಿಷ್ಠೆ ಬಲವಾಗಿದ್ದಿತು. ಅವರು ಆಂಜನೇಯನ ಉಪಾಸಕರು. ತಮ್ಮೂರಿನಲ್ಲೇ ವ್ಯಾಸರಾಯಸ್ವಾಮಿಗಳು ಪ್ರತಿಷ್ಠೆ ಮಾಡಿದ ಹನುಮಂತ ಇವರಿಗೆ ಕುಲದೈವ. ಅವರೂರಿನಲ್ಲೇ ಇದ್ದ ವಿರಕ್ತ ಸಂಗೀತ ಸಾಧಕರೊಬ್ಬರಿಂದ ಆಂಜನೇಯ ಮಂತ್ರದ ಉಪದೇಶ ವನ್ನು ಪಡೆದುಕೊಂಡಿದ್ದರು; ದಿನವೂ ಅದರ ಜಪ ನಡೆಯುತ್ತಿತ್ತು. ಬಿಡಾರದ ಕೃಷ್ಣಪ್ಪನವರೂ ರಾಮಭಕ್ತಿಯ ಬೀಜವನ್ನು ಇವರಲ್ಲಿ ಬಿತ್ತಿದ್ದರು.

ಶಬರಿಮಲೆಯ ಅಯ್ಯಪ್ಪನ ಭಕ್ತರೂ ಹೌದು. ಹಿಂದೆ ಒಂದು ಬಾರಿ ಅವರು ಕೊಯಮತ್ತೂರಿನಲ್ಲಿ ಕಚೇರಿ ಮುಗಿಸಿಕೊಂಡು ರಾತ್ರಿ ಮೈಸೂರಿಗೆ ತಮ್ಮ ಕಾರಲ್ಲೇ ಹಿಂದಿರುಗುತ್ತಿರುವಾಗ, ಸತ್ಯಮಂಗಲದ ಕಾಡಿನಲ್ಲಿ ಹುಲಿಯೊಂದು ಎದುರಾಯಿತಂತೆ. ಒಡನೆಯೇ ಚೌಡಯ್ಯ "ಈ ಕುತ್ತಿನಿಂದ ಪಾರಾದರೆ ಶಬರಿಮಲೆ ಯಾತ್ರೆ ಮಾಡುತ್ತೇನೆ" ಎಂದು ಹರಕೆ ಹಾಕಿಕೊಂಡರಂತೆ. ಹುಲಿಯೂ ಬಂದ ದಾರಿ ಹಿಡಿದು ಹೋಯಿತು, ಚೌಡಯ್ಯನವರೂ ಶಬರಿಮಲೆಗೆ ಹೋಗಿಬಂದರು! ಮುಂದೆ ಅವರು ಏರ್ಪಡಿಸಿದ ಸಂಗೀತ ಕಲಾಶಾಲೆಯ ಹೆಸರು 'ಅಯ್ಯನಾರ್' (ಅಯ್ಯಪ್ಪನ ಇನ್ನೊಂದು ಹೆಸರು) ಎಂದಾದುದು ಈ ಹಿನ್ನೆಲೆಯಲ್ಲಿ.

ಚೌಡಯ್ಯನವರ ಕಾರುಗಳ ಕತೆ ಅವರನ್ನು ಬಲ್ಲವರಿಗೆಲ್ಲಾ ತಿಳಿದದ್ದೇ. ಹಳೆಯ ಕಾರುಗಳನ್ನು ಅವು ಬಾಳುವುದಕ್ಕಿಂತ ಹೆಚ್ಚು ಹಣ ತೆತ್ತು ಕೊಳ್ಳುವುದು, ದೂರದೂರದ ಪ್ರಯಾಣಗಳನ್ನೂ ತಮ್ಮ ಕಾರಲ್ಲೇ ತಮ್ಮ ಸಾರಥ್ಯದಲ್ಲೇ ಮಾಡುವ ಹಟ. ಸ್ನೇಹಿತರನ್ನೂ, ಶಿಷ್ಯರನ್ನೂ ಜೊತೆಗೆ ಒಯ್ದು ಅವರಿಂದ ಆಗಾಗ ನೂಕುವ ನೆರವನ್ನು ಪಡೆದುಕೊಳ್ಳುವುದು, ಸಾಮಾನ್ಯವಾಗಿ ದಾರಿಯಲ್ಲಿ ಕಾರು ಕೆಟ್ಟು ಯಾವ ಕಚೇರಿಗೂ ತಡವಾಗಿಯೇ ಬರುವ ಪದ್ಧತಿ ಇವೆಲ್ಲಾ ಅವರ ವ್ಯಕ್ತಿತ್ವದ

ಅಂಗಗಳಾಗಿಬಿಟ್ಟವು. ಅವರ ಕಾರಿನ ಒಲವು ಅನೇಕ ಕತೆಗಳಿಗೆ ಕಾರಣವಾಗಿದೆ. ಒಂದು ಸ್ವಾರಸ್ಯವಾದದ್ದು—

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಮಹಾರಾಜರಾಗಿದ್ದ ಕಾಲ; ಚೌಡಯ್ಯನವರು ಆಸ್ಥಾನ ವಿದ್ವಾಂಸರಾಗಿದ್ದರು. ಆಗ ಚೌಡಯ್ಯನವರಿಗೆ ಕೊಯಮತ್ತೂರಿನಲ್ಲಿ ಮತ್ತು ಸುತ್ತಮುತ್ತ ಅನೇಕ ಕಚೇರಿಗಳಿರುತ್ತಿದ್ದುವು. ಸಂಜೆ ತಮ್ಮ ಕಾರಿನಲ್ಲೇ ಅಲ್ಲಿಗೆ ಹೋಗುವುದು, ರಾತ್ರಿ ಕಚೇರಿ ಮುಗಿಸಿಕೊಂಡು ಮೈಸೂರಿಗೆ ಹಿಂದಿರುಗುವುದು ವಾಡಿಕೆಯಾಗಿದ್ದಿತು. ಮಹಾರಾಜರೂ ವರ್ಷದಲ್ಲಿ ಹಲವು ಬಾರಿ ಬಂಡೀಪುರದಲ್ಲಿ ಬಿಡಾರ ಮಾಡುತ್ತಿದ್ದರು. ಮೈಸೂರು–ಕೊಯಮತ್ತೂರು ಮಾರ್ಗ ಬಂಡೀಪುರದ ಮೂಲಕವೇ ಹೋಗುತ್ತದೆ. ರಾತ್ರಿ ಮಹಾರಾಜರು ಅಲ್ಲಿ ತಂಗಿರುವಾಗ, ಹಳೆಯ ಕಾರೊಂದು ಆ ಮಾರ್ಗವಾಗಿ ಹಾದು ಹೋಗುತ್ತಿರುವುದನ್ನು ಹಲವಾರು ಬಾರಿ ಗಮನಿಸಿದರು. ಅವರಿಗೆ ಇದು ಯಾರು? ಈ ರಾತ್ರಿಯಲ್ಲಿ ಒಂಟಿ ಕಾರು ಹೀಗೆ ಹೋಗುವ ಕಾರಣವೇನು? ಆನೆಗಳು ಓಡಾಡುವ ಕಾಡು, ಅಪಾಯದ ಅರಿವಿಲ್ಲವೇ ಅವರಿಗೆ? ಎನಿಸಿ, ಒಂದು ಬಾರಿ ಕಾರು ಹೋಗುತ್ತಿರುವಾಗ ಆಳನ್ನು ಅದು ಯಾರೆಂದು ತಿಳಿದುಬರಲು ಕಳುಹಿಸಿದರು.

ಚೌಡಯ್ಯನವರೆಂದು ತಿಳಿಯಿತು. ಮೈಸೂರಿಗೆ ಹಿಂದಿರುಗಿದಮೇಲೆ, ಚೌಡಯ್ಯನವರನ್ನು ಕರೆಸಿಕೊಂಡು, "ಇದೇನು, ಚೌಡಯ್ಯ! ಅಪ ರಾತ್ರಿಯಲ್ಲಿ, ಆನೆಗಳು ಓಡಾಡುವಾಗ ಹಳೆಯ ಕಾರಲ್ಲಿ ಕೊಯಮತ್ತೂರು ದಾರಿಯಲ್ಲಿ ಏಕೆ ಹೋಗುವ ಸಾಹಸ ಮಾಡುತ್ತೀರಿ?" ಎಂದು ಕೇಳಿದರು. ಚೌಡಯ್ಯನವರು ಕಾರಣವನ್ನು ತಿಳಿಸಿದಮೇಲೆ "ಅದು ಯಾವ ಕಾರು?" ಎಂದು ಕೇಳಿದರು. ಚೌಡಯ್ಯ 'ಬೇಬಿ ಆಸ್ಟಿನ್' ಎಂದು ತಿಳಿಸಿದರು. ಮಹಾರಾಜರು, "ಹೋಗಲಿ, ಒಳ್ಳೆಯ ಕಾರನ್ನಾದರೂ ಇಟ್ಟುಕೊಂಡು ಅಲ್ಲಿಗೆಲ್ಲ ಹೋಗಬಾರದೆ?" ಎನ್ನಲು ಚೌಡಯ್ಯನವರು "ಮಹಾಸ್ವಾಮಿ, ನನ್ನ ಕಾರನ್ನು ಏನೆಂದು ತಿಳಿದಿರಿ?ಅದರ ಮುಂದೆ ರೋಲ್ಸ್‌ರಾಯ್ಸ್ ಏತಕ್ಕೆ? ಅದು ದಾರಿಯಲ್ಲಿ ಹೋಗುವಾಗ ದೊಡ್ಡ ದೊಡ್ಡ ಕಾರುಗಳನ್ನೆಲ್ಲ ಹಿಂದೆ ಹಾಕಿ ಹೋಗುತ್ತದೆ! ಅದರ ಎಂಜಿನ್ ಹೇಗಿದೆ ಬಲ್ಲಿರಾ? ಅದನ್ನು ಕೊಳ್ಳಲು ನೂರು ಮಂದಿ ಸಿದ್ಧರಾಗಿದ್ದಾರೆ; ನಾನು ಕೊಡುವುದಕ್ಕೆ ಮಾತ್ರ

ಸಿದ್ಧನಾಗಿಲ್ಲ!" ಎಂದು ತಮ್ಮ ಕಾರಿನ ಪ್ರತಾಪವನ್ನು ಮಹಾರಾಜರ ಮುಂದೆ ಕೊಚ್ಚಿಕೊಂಡರು. ಮಹಾರಾಜರು ನಸುನಕ್ಕು "ಸರಿ, ಹಾಗಾದರೆ" ಎಂದು ಬೀಳ್ಕೊಟ್ಟರು.

ಅವರು ಹೊರಗೆ ಬಂದಮೇಲೆ ಮಹಾರಾಜರ ಅಧಿಕಾರಿಯೊಬ್ಬರು ಚೌಡಯ್ಯನವರ ಹಿಂದೆ ಬಂದು "ಏನು ಚೌಡಯ್ಯನವರೇ, ನಿಮಗೆ ಬುದ್ಧಿ ಸಾಲದು! ಪ್ರಭುಗಳ ಮುಂದೆ ನಿಮ್ಮ ಹಳೆಯ ಕಾರಿನ ಗುಣಗಳನ್ನು ಮುಗಿಲು ಮುಟ್ಟಿಸಿ ಹಾಡಿ ಹೊಗಳಿದಿರಿ. ಅದರ ಫಲವೇನು ಗೊತ್ತೆ? ನಿಮಗೆ ಹೊಸದೊಂದು ಕಾರಿನ ಯೋಗ ಇಲ್ಲದಿರುವುದು! ಮಹಾರಾಜರ ಮನಸ್ಸಿನಲ್ಲಿ ನಿಮಗೆ ಒಂದು ಹೊಸ ಕಾರನ್ನು ಕೊಡುವ ಯೋಚನೆ ಇದ್ದಿತು" ಎಂದು ತಿಳಿಸಿದರು. ಚೌಡಯ್ಯ "ಅಯ್ಯೋ, ತಿಳಿಯದೆ ಹೋದೆನಲ್ಲ!" ಎಂದು ಪಶ್ಚಾತ್ತಾಪಪಟ್ಟುಕೊಂಡರು. ಆದರೆ ಚೌಡಯ್ಯನವರ ಸ್ವಭಾವವೇ ಅದು.

ಮತ್ತೊಮ್ಮೆ ನಡೆದದ್ದು ಇದು. ಬೆಂಗಳೂರಿನಲ್ಲಿ ಸಂಗೀತ ಸಭೆಯೊಂದು ಏರ್ಪಟ್ಟಿದ್ದಿತು. ಸಭೆಗೆ ಕೆ. ವಾಸುದೇವಾಚಾರ್ಯರು ಅಧ್ಯಕ್ಷರು; ರಾಜ್ಯಸರ್ಕಾರದ ಮಂತ್ರಿಯೊಬ್ಬರು ಉದ್ಘಾಟಕರು. ಚೌಡಯ್ಯನವರೂ ವೇದಿಕೆಯ ಮೇಲಿದ್ದರು; ಅವರೂ ಮಾತನಾಡಬೇಕಾಗಿದ್ದಿತು. ಮಂತ್ರಿಗಳು ತಮ್ಮ ಭಾಷಣದಲ್ಲಿ ವಾಸುದೇವಾಚಾರ್ಯರನ್ನು ವೈಣಿಕರು ಎಂದು ಕರೆಯುತ್ತಿದ್ದರು. ಚೌಡಯ್ಯನವರು ಎರಡು ಮೂರು ಬಾರಿ ತಪ್ಪನ್ನು ತಿದ್ದಲು ಯತ್ನಿಸಿ ವಿಫಲರಾದರು. ಮಂತ್ರಿಗಳು ಮತ್ತೆ ಮತ್ತೆ ವಾಸುದೇವಾಚಾರ್ಯರನ್ನು ವೈಣಿಕರೆಂದೇ ಪ್ರಸ್ತಾಪಿಸುತ್ತಿದ್ದರು. ಚೌಡಯ್ಯನವರು ತಮ್ಮ ಭಾಷಣ ದಲ್ಲಿ ಇದನ್ನು ಪ್ರಸ್ತಾಪಿಸಿ "ನಮ್ಮ ಜನರಿಗೆ ನಮ್ಮ ಸಂಗೀತ ವಿದ್ವಾಂಸರನ್ನು ಕಂಡರೆ ಇರುವ ಅಕ್ಕರೆ ಇಷ್ಟೆ! ಇವರು ಗಾಯಕರೋ ವೈಣಿಕರೋ ಎಂದು ತಿಳಿದುಕೊಳ್ಳುವ ಕುತೂಹಲವೂ ಅವರಿಗೆ ಇರುವುದಿಲ್ಲ. ಇವರು ಏನಾದರೆ ಅವರಿಗೇನು? ಈ ಬಗೆಯ ಜನರದ್ದೇ ಸರ್ಕಾರ! ಇಂಥ ತಿಳಿವಳಿಕೆಯಿಲ್ಲದವರೇ ಆಳಲು ಬಂದರೆ ಏನು ಮಾಡುವುದು?" ಎಂದೆಲ್ಲ ತಮ್ಮ ದುಗುಡವನ್ನು ನೇರವಾಗಿ, ಮರೆಮಾಚದೆ, ಹಿಂದೆಮುಂದೆ ನೋಡದೆ, ತೋಡಿಕೊಂಡುಬಿಟ್ಟರು!

ಬದುಕನ್ನೆಲ್ಲ ಸಂಗೀತಕ್ಕೇ ಮುಡಿಪಿಟ್ಟ ಈ ಧೀರ ಕಡೆಯ ದಿನಗಳಲ್ಲೂ ಬಿಡುವಿಲ್ಲದೆ ದುಡಿಯುತ್ತಿದ್ದರು. ಸಾಯುವ ಎರಡು ದಿನಗಳ ಮುಂಚೆಯೂ ಒಂದು ಕಚೇರಿ ಇದ್ದಿತು; ಸತ್ತದ್ದೂ ಮರುದಿನವೇ ಒಂದು ಕಚೇರಿಯನ್ನು (ಅದೂ ತಮ್ಮ ನೆಚ್ಚಿನ ಸ್ನೇಹಿತ ಚೆಂಬೈ ವೈದ್ಯನಾಥ ಭಾಗವತರಿಗೆ ಪಕ್ಕವಾದ್ಯವಾಗಿ) ಒಪ್ಪಿಕೊಂಡಿದ್ದಾಗ. ೧೯೬೭ರ ಜನವರಿ ೧೯ರಂದು ಬೆಳಿಗ್ಗೆ ಮೈಸೂರಲ್ಲಿ ತಮ್ಮ ಮನೆಯಲ್ಲೇ ಪ್ರಜ್ಞೆತಪ್ಪಿ ಬಿದ್ದುಬಿಟ್ಟರು. ಒಡನೆಯೇ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಿ ತುರ್ತು ಚಿಕಿತ್ಸೆಯನ್ನು ಮಾಡಲಾಯಿತು. ಪ್ರಜ್ಞೆಯೇನೋ ಮರಳಿ ಬಂದಿತು. ಆಸ್ಪತ್ರೆಯಲ್ಲೇ ಅವರ ದೇಹಸ್ಥಿತಿ ಸುಧಾರಿಸಿತು. ಮರುದಿನ ಬೆಂಗಳೂರಿನಲ್ಲಿ ನಡೆಯಬೇಕಾಗಿದ್ದ ಕಚೇರಿಗೆ ತಾವು ಹೋಗಲೇಬೇಕೆಂದೂ, ಚೆಂಬೈ ವೈದ್ಯನಾಥ ಭಾಗವತರಿಗೆ ಮಾತು ಕೊಟ್ಟಿರುವುದನ್ನು ತಪ್ಪಿಸಲಾಗುವುದಿಲ್ಲವೆಂದೂ ಚಡಬಡಿಸುತ್ತಿದ್ದರು. ಪ್ರಯಾಣಮಾಡುವ ಸ್ಥಿತಿಯಲ್ಲಿ ಅವರಿಲ್ಲವೆಂದು ವೈದ್ಯರು ಹೇಳುತ್ತಿದ್ದರೂ ಇವರು ಕೇಳಿಸಿಕೊಳ್ಳಲಿಲ್ಲ. ಒಂದೇ ದಿನದ ಮಟ್ಟಿಗೆ ಬೆಂಗಳೂರಿಗೆ ಹೋಗಿ ಮರುದಿನವೇ ಆಸ್ಪತ್ರೆಗೆ ಹಿಂದಿರುಗುವುದಾಗಿ ವೈದ್ಯರಿಗೆ ಭರವಸೆ ಕೊಡುತ್ತಿದ್ದರು. ಆಸ್ಪತ್ರೆಯನ್ನು ಬಿಡುವುದೇನೋ ಆಗಲಿಲ್ಲ.

ಆದರೆ ಅಂದೇ ರಾತ್ರಿ ಅಲ್ಲಿಯೇ ತೀರಿಕೊಂಡರು.

ಕರ್ನಾಟಕ ಸಂಗೀತದ ಒಂದು ಉಜ್ಜ್ವಲ ತಾರೆ ಹೀಗೆ ಮುಗಿಲಿನಿಂದ ಕಳಚಿ ಬಿದ್ದಿತು.



ಸಂಗೀತರತ್ನ ಚೌಡಯ್ಯನವರು

ಸಂಗೀತ ಮತ್ತು ಸಂಗೀತ ಕಲಾವಿದ

ಬರಹಗಾರರು: ಸಂಗೀತ ಕಲಾನಿಧಿ ಟಿ. ಚೌಡಯ್ಯ

ಸಂಗೀತ ಕಲೆಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಕಲೆ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನೂ ಸಂಗೀತ ತಿಳಿಯದಿದ್ದರೂ ಒಳ್ಳೆಯ ಸಂಗೀತವನ್ನು ಕೇಳಿ ಆನಂದಪಡುವನು. ಈ ಕಲೆಯು ಜನಸಾಮಾನ್ಯರಿಗೆ ಅಭ್ಯಾಸಿಸಲು ಸಾಧ್ಯವಾದರೂ, ಕೇವಲ ಕೆಲವರು ಮಾತ್ರ ಅತ್ಯುತ್ತಮ ಕಲಾವಿದರಾಗುತ್ತಾರೆ. ಕಾರಣವೇನೆಂದರೆ, ಈ ಕಲೆಯು ದೇವಲೋಕದಲ್ಲಿ ಅನುಭವಿಸಲ್ಪಡುತ್ತಿದ್ದು, ತ್ರಿಲೋಕ ಸಂಚಾರಿಗಳಾದ ಶ್ರೀ ನಾರದರಿಂದ ಭೂಲೋಕಕ್ಕೆ ಪ್ರಚುರಿಸಲ್ಪಟ್ಟಿತು. ಅಲ್ಲಿಯೂ ಕೂಡ ಗಂಧರ್ವರಿಂದ ಮಾತ್ರ ಗಾಯನ ಮತ್ತು ವಾದ್ಯಗಳೊಂದಿಗೆ ಪ್ರದರ್ಶಿಸಲ್ಪಡುತ್ತಿತ್ತು. ಆದುದರಿಂದಲೇ ಈಗಲೂ ಸಹ ಗಂಧರ್ವ ಅಂಶವಿರುವವರಿಗೆ ಮಾತ್ರ ಶಾಸ್ತ್ರೀಯ ಸಂಗೀತ ಲಭ್ಯವಾಗುತ್ತದೆ ಮತ್ತು ಉತ್ತಮ ಕಲಾವಿದರಾಗುತ್ತಾರೆ. ಈ ಕಲೆಯು ವೇದಗಳಲ್ಲೊಂದಾದ ಸಾಮವೇದದಿಂದ ಹುಟ್ಟಲ್ಪಟ್ಟಿದೆ ಮತ್ತು ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಸ್ಪಷ್ಟವಾಗಿ "ವೇದಗಳಲ್ಲಿ, ಸಾಮವೇದದಲ್ಲಿ ನನ್ನ ಅಂಶವಿರುತ್ತದೆ" ಎಂದು ಹೇಳಿದ್ದಾನೆ. ಅಂದರೆ ಸಂಗೀತದ ಮೂಲಕ ಭಗವಂತನನ್ನು ಮೆಚ್ಚಿಸಿ, ತದನಂತರ ಅವನ ಸಾನ್ನಿಧ್ಯವನ್ನೇ ಪಡೆಯಬಹುದು. ಇದಕ್ಕೆ ಸಾಕ್ಷಿಗಳೆಂದರೆ, ಶ್ರೀ ಪುರಂದರದಾಸರು ಮತ್ತು ಅನೇಕ ದಾಸಶ್ರೇಷ್ಠರು. ಕಡೆಯದಾಗಿ ದೇವಾಂಶ ಸಂಭೂತರಾದ ಶ್ರೀ ತ್ಯಾಗರಾಜರು ಕೀರ್ತನೆಗಳನ್ನು ಹಾಡಿ, ಶ್ರೀರಾಮಚಂದ್ರನ ಸನ್ನಿಧಾನವನ್ನು ಸೇರಿದರು. ಸಂಗೀತಕ್ಕೆ ಭಾಷೆ ಮುಖ್ಯವಲ್ಲ, ನಾದ ಮುಖ್ಯ. ಸ್ವರಸಂಯೋಜನ ಮುಖ್ಯವಾದದ್ದು. ನಾದವನ್ನು ಸಂಗೀತಗಾರರು ಯಾವ ಮಟ್ಟದಲ್ಲಿ ಶೃತಿಯನ್ನು ಆಧಾರವಾಗಿ ಇಟ್ಟುಕೊಳ್ಳುತ್ತಾರೋ, ಆ ಆಧಾರ ಶೃತಿಗೇ ಸಮಂಜಸವಾಗಿ ಸಂಗೀತದ ನಾನಾ ವಿಭಾಗಗಳಾದ ಸ್ವರಗಳನ್ನು ಸೇರಿಸಿ, ಆ ನಾದಕ್ಕೆ ವ್ಯತಿರಿಕ್ತವಾಗಿ ಹಾಡದೆ ಮತ್ತು ನುಡಿಸದೆ, ಲಯಬದ್ಧವಾಗಿ ಹಾಡಿ ನುಡಿಸಿದರೆ ಜನಗಳ ಆತ್ಮಕ್ಕೆ ಸಂತೋಷವುಂಟಾಗಿ ನಾಲ್ಕು ಘಂಟೆಗಳ ಕಾಲ ತಮ್ಮ ಎಲ್ಲ ಕಷ್ಟಗಳನ್ನೂ ಮರೆತು ನಾದದಲ್ಲಿ ತಲ್ಲೀನರಾಗಿರುವುದರಿಂದ ಆ ಜನಗಳಿಗೆ ಆಯಸ್ಸು ಮತ್ತು ದೇಹದಾರಢ್ಯ

ಉಂಟಾಗಿ ಅವರ ನಿತ್ಯ ಜೀವನವನ್ನು ಸುಗಮವಾಗಿ ನಡೆಸಲು ಅನುಕೂಲವಾಗುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ನಾದವು ಆಜನ್ಮದ ಹಕ್ಕಾಗಿರುತ್ತದೆ. ಆದ್ದರಿಂದಲೇ ಪ್ರಾಣವಿರತಕ್ಕಂಥ ಸ್ಥಾವರಜಂಗಮಾದಿ ಸಮಸ್ತ ಚರಾಚರ ವಸ್ತುಗಳಿಗೂ ಸಂಗೀತವು ಅಗತ್ಯವಾಗಿ ಬೇಕು. ಒಳ್ಳೆಯ ಸಂಗೀತವನ್ನೇ ಕೇಳತಕ್ಕಂಥ ಮನುಷ್ಯರಿಗೆ ಯಾವಾಗಲೂ ಕೆಟ್ಟ ಯೋಚನೆಗಳು ಮತ್ತು ಪರರಿಗೆ ಉಪದ್ರವಗಳನ್ನು ಕೊಡುವುದು ಮೊದಲಾದ ಕೆಟ್ಟ ಗುಣಗಳೆಲ್ಲಾ ಹೋಗಿ ದೇವರಲ್ಲಿ ನಿಶ್ಚಲವಾದ ಭಕ್ತಿ ಉಂಟಾಗಿ ಇಹದಲ್ಲಿ ಸುಖವನ್ನು ಅನುಭವಿಸಿ ಪರದಲ್ಲಿ ಮೋಕ್ಷಸಾಧನೆಗೆ ಅರ್ಹರಾಗುತ್ತಾರೆ.

ಸಂಗೀತಗಾರನು ಮುಖ್ಯವಾಗಿ ತನ್ನ ಕರ್ತವ್ಯವನ್ನು ತಿಳಿದು ಅನುಸರಿಸಬೇಕಾದ ಕ್ರಮಗಳುಂಟು. ತಾನು ಹಾಡುವುದನ್ನಾಗಲೀ, ನುಡಿಸುವುದನ್ನಾಗಲೀ ಒಂದು ಗೊತ್ತಾದ ಶೃತಿಯಲ್ಲಿ ವಿಲನವಾಗಿ ಲಯಬದ್ಧವಾಗಿ ಇದೆಯೇ ಎಂಬುದನ್ನು ಅರಿತುಕೊಳ್ಳಬೇಕು. ತನ್ನ ತಪ್ಪನ್ನು ತಿಳಿದುಕೊಳ್ಳದೆ ಇತರ ಸಂಗೀತಗಾರರನ್ನು ಹಿಯ್ಯಾಳಿಸಿ ಸಂಗೀತದ ಮುಖ್ಯ ಉದ್ದೇಶ್ಯ ಮತ್ತು ಗುರಿಯಾದ ಭಗವತ್ ಸಾಕ್ಷಾತ್ಕಾರವನ್ನು ಮರೆತು ಕೇಳುವವರಿಗೂ ಬೇಜಾರುಮಾಡುವಂತಹ ಪ್ರಸಂಗಗಳನ್ನು ಸಾಧ್ಯವಾದಷ್ಟು ತರಬಾರದು. ನಿತ್ಯ ಜೀವನದಲ್ಲಂತೂ ಈ ಕಲೆಯನ್ನು ಉತ್ತಮ ರೀತಿಯಲ್ಲಿ ಅನುಸರಿಸುವುದಾದರೆ ಇದಕ್ಕಿಂತಲೂ ಪ್ರತಿಫಲವನ್ನು ಕೊಡುವ ಕಲೆಯಿಲ್ಲ. ಮುಖ್ಯವಾಗಿ ಹಾಡುವವರೂ, ಪಕ್ಕವಾದ್ಯದವರೂ ಒಬ್ಬರಿಗೊಬ್ಬರು ಅನುಸರಿಸಿಕೊಂಡು ತಾರತಮ್ಯವನ್ನೆಣಿಸದೆ ಕೇಳುವವರ ಹಿತದೃಷ್ಟಿಯಿಂದ ಹಾಡುವುದಾದರೆ ನಿಜವಾಗಿಯೂ ಸಂಗೀತ ಕಚೇರಿಗಳೆಲ್ಲಾ ಆನಂದಮಯವಾಗಿರುವುದರಲ್ಲಿ ಸಂಶಯವಿಲ್ಲ.

ಇನ್ನು ಸಂಗೀತ ಕಲೆಯ ಸ್ಥಾನ-ಮಾನಗಳೇನು ಎಂಬುದನ್ನು ತಿಳಿದುಕೊಳ್ಳಬೇಕು. ಸತ್ಯಲೋಕದಲ್ಲಿ ಬ್ರಹ್ಮದೇವರ ಪತ್ನಿಯಾದ ಸಾಕ್ಷಾತ್ ಶ್ರೀ ಸರಸ್ವತಿ ದೇವಿಯೇ ಈ ಕಲೆಗೆ ಅಧಿದೇವತೆ ಮತ್ತು ಆರಾಧಕಳು. ಬ್ರಹ್ಮಮಾನಸಪುತ್ರರಾದ ನಾರದರು ಮತ್ತು ತುಂಬುರರು ಆಹೋರಾತ್ರಿಯೆನ್ನದೆ ವೈಕುಂಠವಾಸಿಯಾದ ಶ್ರೀಮನ್ ನಾರಾಯಣನ ಸೇವೆಯನ್ನು ಗಾನದ ಮೂಲಕ ಮಾಡುತ್ತಿದ್ದಾರೆ. ಆದುದರಿಂದ ಈ ಕಲೆಯ

ಸ್ಥಾನ ವೈಕುಂಠದವರೆಗೂ ವ್ಯಾಪ್ತಿಯುಂಟು. ಇದಕ್ಕಿಂತಲೂ ಉತ್ತಮ ಕಲೆ ಇಲ್ಲವೆನ್ನುವುದಕ್ಕೆ ಇದೇ ಸಾಕ್ಷಿ. ಹಿಂದಿನ ರಾಜ ಮಹಾರಾಜರುಗಳು ಈ ಕಲೆಗಂತೂ ಅತ್ಯಂತ ಪ್ರೋತ್ಸಾಹ ನೀಡಿ, ಈ ಕಲಾವಿದರಿಗೆ ಶ್ರೇಷ್ಠ ಸನ್ಮಾನವನ್ನು ಮಾಡುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಉತ್ತಮ ಸಂಗೀತದಿಂದ ಪರಿಹಾರವಾಗದ ರೋಗಗಳನ್ನೂ ಸಹ ಗುಣಪಡಿಸಿರುವ ಅನೇಕ ನಿದರ್ಶನಗಳುಂಟು. ಕೇವಲ ಕಾಡಿನಲ್ಲಿ ಸ್ವೇಚ್ಛೆಯಾಗಿ ಬೆಳೆಯುವ ಬಿದುರು ಶ್ರೀಕೃಷ್ಣನ ಕೈಸೇರಿ ಶ್ರೇಷ್ಠವಾದ ವಾದ್ಯವಾಗಿ ಪರಿಣಮಿಸಿತು. ಇಂತಹ ಅಮೋಘವಾದ ಕಲೆಯನ್ನು ಒಳ್ಳೆಯ ರೀತಿಯಲ್ಲಿ ಪ್ರತಿಯೊಬ್ಬ ಕಲಾವಿದನೂ ಉಪಯೋಗಿಸಿದಲ್ಲಿ ಜನಗಳ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಉಂಟಾಗಿ ತಾನೂ ಸದ್ಗತಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.